# ಅಧ್ಯಾಯ 15

# ಆರೋಗ್ಯ ಮತ್ತು ವೈದ್ಯಕೀಯ ಸೇವೆಗಳು

ಅಲೋಪತಿ ಚಿಕಿತ್ಸಾ ಪದ್ಧತಿಯು ಕೊಡಗಿಗೆ ಬರುವುದಕ್ಕೆ ಮೊದಲು ಆಯುರ್ವೇದ ಪದ್ಧತಿಯು ಹೆಚ್ಚು ರೂಢಿಯಲ್ಲಿತ್ತು ಹಾಗೂ ಜನಪ್ರಿಯವಾಗಿತ್ತು. ಹಿಂದೆ ಕೊಡವರ ಮನೆಗಳಲ್ಲಿ ವೃದ್ಧರು ಚಕ್ಕೆ, ಬೇರು, ತೊಗಟೆ ಹಾಗೂ ಅರಣ್ಯ ಸಸ್ಯಗಳಿಂದ ಎಣ್ಣೆ ತೆಗೆಯುತ್ತಿದ್ದರು, ಕಷಾಯ ಮಾಡುತ್ತಿದ್ದರು ಹಾಗೂ ಚೂರ್ಣಗಳನ್ನು ಮಾಡಿ ರೋಗಿಗಳಿಗೆ ಔಷಧಿಗಳಾಗಿ ಕೊಡುತ್ತಿದ್ದರು. ಲೋಹಗಳ ಭಸ್ಮಗಳನ್ನು ಉಪಯೋಗಿಸುತ್ತಿದ್ದರು. ಸಾಂಬಾರ ಪದಾರ್ಥಗಳಾದ ಶುಂಠಿ, ಏಲಕ್ಕಿ, ಮೆಣಸು ಮೊದಲಾದವುಗಳನ್ನು ಔಷಧಿ ರೂಪದಲ್ಲಿ ಹೇರಳವಾಗಿ ಉಪಯೋಗಿಸುತ್ತಿದ್ದರು. ಪಾಲೆಯರು, ಮಲೆಯರು, ಕುಡಿಯರು, ಬೆಟ್ಟ ಕುರುಬರು, ಜೇನು ಕುರುಬರು, ಮೊದಲಾದವರು ಕಾಡು ಮೂಲಿಕೆಗಳ ಔಷಧಿಗಳನ್ನು ಕೊಡುತ್ತಿದ್ದರು. ಕಡಿತ, ಬಹುಮೂತ್ರ, ಅರ್ಧ ತಲೆನೋವು, ನೆಗಡಿ, ಶೀತ, ಜ್ವರ ಮೊದಲಾದ ಕಾಯಿಲೆಗಳಿಗೆ ಔಷಧಿಗಳನ್ನು ಗಿಡ ಮೂಲಿಕೆಗಳಿಂದ ತಯಾರಿಸುತ್ತಿದ್ದರು. ಜೊತೆಗೆ ಯಂತ್ರ ಕಟ್ಟಿ, ಮಂತ್ರಗಳನ್ನು ಹಾಕುತ್ತಿದ್ದರು. ಹಳ್ಳಿ ಜನರಿಗೆ ಯಂತ್ರ, ಮಂತ್ರಗಳಲ್ಲಿ ಬಹಳ ನಂಬಿಕೆ: ಈಗಲೂ ಕೂಡ ಈ ನಂಬಿಕೆ ಉಳಿದು ಬಂದಿದೆ. ಹಾವು ಕಡಿದವರಿಗೂ ಚಿಕಿತ್ಸೆ ನೀಡಲಾಗುತ್ತಿತ್ತು. ಎರಡನೇಯ ಲಿಂಗರಾಜೇಂದ್ರನ ಒಂದು ಪತ್ರದಲ್ಲಿ ಪಾಲೆಯವರು ಎಂಬ ಗ್ರಾಮೀಣ ಚಿಕಿತ್ಸಕರ ಉಲ್ಲೇಖವಿದ್ದು ಅರಮನೆಯಲ್ಲಿ ಇರುವ ಹಕೀಮರ ಹಾಗೂ ನಾನಾ ರೀತಿಯ ಔಷಧಗಳ ಸಂಗ್ರಹದ ಉಲ್ಲೇಖವಿದೆ.

ಕೊಡಗು ಬ್ರಿಟಿಷರ ಆಡಳಿತಕ್ಕೆ ಒಳಪಟ್ಟ ಮೇಲೆ ಅಲೋಪತಿ ಪದ್ಧತಿಯ ಪ್ರಸಾರವಾಗತೊಡಗಿತು. ಮಡಿಕೇರಿಯಲ್ಲಿ ಬ್ರಿಟಿಷ್ ಸೈನಿಕರು ನೆಲೆ ನಿಂತಿದ್ದರಿಂದ, ಅಲ್ಲಿ ಅಲೋಪತಿ ಔಷಧಾಲಯಗಳು ಮೊದಲು ಪ್ರಾರಂಭವಾದವು. ಜೈಲು ಆಸ್ಪತ್ರೆ, ಜನರಲ್ ಆಸ್ಪತ್ರೆಗಳು, ಜಿಲ್ಲೆಯ ಹಳೆಯ ವೈದ್ಯಕೀಯ ಸಂಸ್ಥೆಗಳು. ಈಗಿನ ಮಡಿಕೇರಿಯ ಜಿಲ್ಲಾ ಆಸ್ಪತ್ರೆಯು 1863ರಲ್ಲಿ ಪ್ರಾರಂಭವಾಯಿತು. ಇದರ ನಿರ್ವಹಣೆಗೆ ಸರ್ಕಾರದ ಅನುದಾನದ ಜೊತೆಗೆ ಸಾರ್ವಜನಿಕರಿಂದ ವಂತಿಗೆಯನ್ನು ಸಂಗ್ರಹಿಸಲಾಗುತ್ತಿತ್ತು. ವೈದ್ಯಕೀಯ ಸೇವೆಗೆ ಮದ್ರಾಸು ಸರ್ಕಾರದಿಂದ ಸಿಬ್ಬಂದಿಯನ್ನು ಎರವಲು ಪಡೆಯಲಾಗುತ್ತಿತ್ತು.

ಮಡಿಕೇರಿಯ ಆಸ್ಪತ್ರೆಗಳಲ್ಲಿ 1865–66 ರಲ್ಲಿ 233 ಒಳರೋಗಿಗಳು 3,666 ಜನ ಹೊರರೋಗಿಗಳೂ ವೈದ್ಯಕೀಯ ಸೌಲಭ್ಯ ಪಡೆದಿದ್ದರು. ಇವರ ಸಂಖ್ಯೆಯು 1875–76ಕ್ಕೆ ಕೊಡಗು ಸಂಸ್ಥಾನದಲ್ಲಿ 311 ಒಳರೋಗಿಗಳಿಗೂ, 8,692 ಹೊರರೋಗಿಗಳಿಗೂ ಹೆಚ್ಚಿತ್ತು. ಆ ಕಾಲದಲ್ಲಿ ಶೇ. 41.32ರಷ್ಟು ಒಳರೋಗಿಗಳು ಸಾಯುತ್ತಿದ್ದರು. ಶೇ. 32.81ರಷ್ಟು ಸಾವುಗಳು ಮಲೇರಿಯಾ ರೋಗದಿಂದ ಉಂಟಾಗುತ್ತಿತ್ತು. ಇದು ಇತರ ಮಲೆನಾಡು ಜಿಲ್ಲೆಗಳಂತೆ ಕೊಡಗಿನಲ್ಲೂ ತೀವ್ರವಾದ ಕಾಯಿಲೆಯಾಗಿತ್ತು. ರೋಗಿಗಳಲ್ಲಿ ಸುಮಾರು ಅರ್ಧಕ್ಕಿಂತ ಕಡಿಮೆ ಜನ ಔಷಧಾ

ಲಯಗಳಿಗೆ ಬರುತ್ತಿದ್ದರು. ಕೊಡಗಿನ ವೈದ್ಯಕೀಯ ಇಲಾಖೆಗೆ 1865ರಲ್ಲಿ 2,056 ರೂಪಾಯಿಗಳನ್ನು ಖರ್ಚು ಮಾಡಲಾಗಿತ್ತು. ವೀರರಾಜಪೇಟೆಯಲ್ಲಿ 1870ರಲ್ಲಿ ಒಂದು ಆಸ್ಪತ್ರೆಯನ್ನು ತೆರೆಯಲಾಯಿತು. ಇದೂ ಸೇರಿ ಆ ವರ್ಷ ಕೊಡಗಿನಲ್ಲಿ ನಾಲ್ಕು ಆಸ್ಪತ್ರೆಗಳಿದ್ದವು; ಈ ಪೈಕಿ ಮೂರು ಮಡಿಕೇರಿಯಲ್ಲೂ ಒಂದು ವೀರರಾಜಪೇಟೆಯಲ್ಲಿಯೂ ಇದ್ದವು. ಈ ಎಲ್ಲಾ ಆಸ್ಪತ್ರೆಗಳೂ ಮಡಿಕೇರಿಯಲ್ಲಿದ್ದ ರೆಜಿಮೆಂಟಲ್ ವೈದ್ಯಾಧಿಕಾರಿಗಳ ಅಧೀನದಲ್ಲಿದ್ದವು. ಇವರನ್ನು ಸಿವಿಲ್ ಸರ್ಜನ್ನರೆಂದೂ ಕರೆಯುತ್ತಿದ್ದರು. ಇವರು ಮಡಿಕೇರಿ ಜೈಲಿನ ಅಧೀಕ್ಷಕರೂ ಆಗಿದ್ದರು. ಡಾ|| ಜೆ. ಪಿ. ನಾರ್ ಎಂಬವರು ಮೊದಲನೇ ರೆಜಿಮೆಂಟಲ್ ವೈದ್ಯಾಧಿಕಾರಿಗಳಾಗಿದ್ದರು. ಮೈಸೂರು ವಲಯದ ಡೆಪ್ಯುಟಿ ಸರ್ಜನ್ ಜನರಲ್‌ರು ಮಡಿಕೇರಿ ಸೈನ್ಯದ ವೈದ್ಯಕೀಯ ಆಡಳಿತವನ್ನೂ ನೋಡಿಕೊಳ್ಳುತ್ತಿದ್ದರಲ್ಲದೆ ಸಿವಿಲ್ ಸರ್ಜನ್ನರ ಮೇಲಧಿಕಾರಿಗಳಾಗಿದ್ದರು. ಮಡಿಕೇರಿ ಮತ್ತು ವೀರರಾಜಪೇಟೆಗಳ ಆಸ್ಪತ್ರೆಗಳಿಗೆ 1875ರಲ್ಲಿ 4,344 ರೂ. ವರಮಾನವಿತ್ತು. ಇದರಲ್ಲಿ 2,854 ರೂಪಾಯಿಗಳು ಸರ್ಕಾರದ ಅನುದಾನವಾಗಿದ್ದು, 1,029 ರೂ.ಗಳು ಸಾರ್ವಜನಿಕರಿಂದ ವಂತಿಗೆ ರೂಪದಲ್ಲಿ ಬಂದಿತ್ತು. ಲೋಕಲ್ ಫಂಡ್ ಸಂಸ್ಥೆಗಳು 461 ರೂ.ಗಳನ್ನು ಕೊಟ್ಟಿದ್ದವು. ಈ ಆಸ್ಪತ್ರೆಗಳಿಗೆ ಆ ವರ್ಷ 4,460 ರೂಪಾಯಿಗಳನ್ನು ಖರ್ಚು ಮಾಡಲಾಗಿತ್ತು. ಭಾರತ ಸರ್ಕಾರವು 1882ರಲ್ಲಿ ಮಡಿಕೇರಿಯಿಂದ ಸೈನ್ಯವನ್ನು ಹಿಂತೆಗೆದುಕೊಂಡ ನಂತರ ಮೈಸೂರು ವಲಯದ ಡೆಪ್ಯುಟಿ ಸರ್ಜನ್ ಜನರಲ್ ಆಡಳಿತದ ಅವಶ್ಯಕತೆಯು ಕಂಡು ಬರಲಿಲ್ಲ.

ಕೊಡಗು ಪ್ರಾಂತ್ಯದ ಆಸ್ಪತ್ರೆಗಳ ಅಭಿವೃದ್ಧಿಗಾಗಿ 1904 ರಲ್ಲಿ ಭಾರತ ಸರ್ಕಾರವು 1·75 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿತ್ತು. ಮಡಿಕೇರಿ ಆಸ್ಪತ್ರೆಯ ಸಹಾಯಕ ಸರ್ಜನ್ನರ ಹುದ್ದೆಯನ್ನು ಮಿಲಿಟರಿ ಸರ್ಜನ್ನರಿಂದ ತುಂಬಬೇಕೆಂದು 1907ರಲ್ಲಿ ನಿರ್ಧರಿಸಲಾಯಿತು. ಮಡಿಕೇರಿ ಮತ್ತು ವೀರರಾಜಪೇಟೆಗಳ ಆಸ್ಪತ್ರೆಗಳನ್ನು 1908ರಲ್ಲಿ ಸರ್ಕಾರ ವಹಿಸಿಕೊಂಡಿತು. ಆದರೆ ರಾಜ್ಯದ ಇತರ ಔಷಧಾಲಯಗಳು ಲೋಕಲ್ ಫಂಡ್ ಸಂಸ್ಥೆಗಳಿಂದಲೇ ನಡೆಸಲ್ಪಡುತ್ತಿದ್ದವು. ಸೋಮವಾರಪೇಟೆ ಮತ್ತು ಕುಶಾಲನಗರಗಳಲ್ಲಿ ಔಷಧಾಲಯಗಳನ್ನು ಕ್ರಮವಾಗಿ 1892 ಮತ್ತು 1893 ರಲ್ಲಿ ತೆರಯಲಾಯಿತು. ಕುಶಾಲನಗರದ ಈ ಆಸ್ಪತ್ರೆಯನ್ನು ಸಿದ್ದಾಪುರಕ್ಕೆ ವರ್ಗಾಯಿಸಿ ಪುನಃ ಇನ್ನೊಂದು ಔಷಧಾಲಯವನ್ನು 1910 ತೆರೆಯಲಾಯಿತು. ನಾಪೋಕ್ಲುವಿನಲ್ಲಿ 1888 ರಲ್ಲೂ, 1890ರಲ್ಲಿ ಗೋಣಿಕೊಪ್ಪಲಿನಲ್ಲೂ, 1893ರಲ್ಲಿ ಸುಂಟಿಕೊಪ್ಪದಲ್ಲೂ ತೆರೆಯಲಾಯಿತು. ಗೋಣಿಕೊಪ್ಪಲಿನ ಔಷಧಾಲಯವನ್ನು 1912ರಲ್ಲಿ ವಿಸ್ತರಿಸಿ ಆಸ್ಪತ್ರೆಯನ್ನಾಗಿ ಮಾರ್ಪಡಿಸಲಾಯಿತು. ಮುಂದೆ 1910ರಲ್ಲಿ ಭಾಗಮಂಡಲದಲ್ಲೂ, 1913ರಲ್ಲಿ ಶ್ರೀಮಂಗಲದಲ್ಲೂ, 1930ರಲ್ಲಿ ಮೂರ್ನಾಡಿನಲ್ಲೂ, 1931ರಲ್ಲಿ ಶನಿವಾರಸಂತೆಯಲ್ಲೂ, 1939ರಲ್ಲಿ ಬಾಳೆಲೆಯಲ್ಲೂ, 1949ರಲ್ಲಿ ತಿತಿಮತಿಯಲ್ಲೂ ಔಷಧಾಲಯಗಳನ್ನು ತೆರೆಯಲಾಯಿತು. ಸಾರ್ವಜನಿಕರಿಂದ ಹಣ ಸಂಗ್ರಹಿಸಿ ಕಟ್ಟಡಗಳನ್ನು ಕಟ್ಟಲಾಯಿತು. ಜಿಲ್ಲೆಯ ಖಾಸಗೀ ಔಷಧಾಲಯ, ಆಸ್ಪತ್ರೆಗಳಲ್ಲಿ ಪೊಲ್ಲಿಬೆಟ್ಟದ ಬೀಚ್ ಬಂದ್ ಔಷಧಾಲಯ, ಸಿದ್ದಾಪುರದ ಹತ್ತಿರದ ಎಲ್ಕ್‌ಹಿಲ್ ಔಷಧಾಲಯಗಳು 1925ಕ್ಕಿಂತಲೂ ಮುಂಚೆ ಸ್ಥಾಪಿಸಲ್ಪಟ್ಟ ಔಷಧಾಲಯಗಳು. ಇವುಗಳಲ್ಲದೆ ಹಿಂದೆ ಗ್ರಾಮಾಂತರ ಪ್ರದೇಶಗಳಲ್ಲಿ ವಾರಕ್ಕೊಮ್ಮೆ ತೆರೆಯುತ್ತಿದ್ದ ಔಷಧಾಲಯಗಳೂ ಇದ್ದವು. ಜಿಲ್ಲಾ ಬೋರ್ಡ್‌ನವರು ನಡೆಸುತ್ತಿದ್ದ ಭಾಗಮಂಡಲ, ಹೆಬ್ಬಾಲೆ, ಕೊಡ್ಲಿಪೇಟೆಗಳಲ್ಲಿನ ಆಯುರ್ವೇದ ಔಷಧಾಲಯಗಳನ್ನು 1953ನೇ ಏಪ್ರಿಲ್‌ನಲ್ಲಿ ಸರ್ಕಾರಕ್ಕೆ ವಹಿಸಿ ಕೊಡಲಾಯಿತು. ಕನ್ಸಾಲಿಡೇಟೆಡ್ ಕಾಫಿ ತೋಟ, ಪೊಲ್ಲಿಬೆಟ್ಟ ಹಾಗೂ ಕೋವರ್‌ಕೊಲ್ಲಿ ಕಾಫಿ ತೋಟ (ಸೋಮವಾರಪೇಟೆ ತಾಲೂಕು)ದವರು ತಮ್ಮ ಕಾರ್ಮಿಕರಿಗೆ ಔಷಧಾಲಯಗಳನ್ನು ನಡೆಸುತ್ತಿದ್ದರು.

ಆರೋಗ್ಯ ಇಲಾಖೆಯು ಕೊಡಗು ಸಂಸ್ಥಾನದಲ್ಲಿ 1936 ರಲ್ಲಿ ಸ್ಥಾಪಿಸಲ್ಪಟ್ಟು, ಸಿವಿಲ್ ಸರ್ಜನರು ಅದರ ಮುಖ್ಯಸ್ಥರಾಗಿದ್ದರು. ಸಾರ್ವಜನಿಕ ಆರೋಗ್ಯ ಶಾಸನವು ಕೊಡಗಿನಾದ್ಯಂತ 1943ರಲ್ಲಿ ಜಾರಿಗೆ ಬಂದಿತು. ಕೊಡಗು ಪ್ರಾಂತ್ಯವು 1940–50ರ ದಶಕದಲ್ಲಿ ಸಾರ್ವಜನಿಕ ಆರೋಗ್ಯಕ್ಕೆ ಸುಮಾರು ನಾಲ್ಕೂವರೆ ಲಕ್ಷ ರೂಪಾಯಿ ಹಣವನ್ನು ಖರ್ಚು ಮಾಡಿತ್ತು. ಮೊದಲಿಗೆ 1934ರ ವರೆವಿಗೂ ಭಾರತ ಸರ್ಕಾರವು 1912ರಲ್ಲಿ ಮಾಡಿದ್ದ ಸೂಚನೆಗನುಗುಣವಾಗಿ ಮಡಿಕೇರಿ ಆಸ್ಪತ್ರೆಯನ್ನು ಮದ್ರಾಸು ಸರ್ಕಾರದ ಸಿವಿಲ್ ಸರ್ಜನರು ತಪಾಸಣೆ ಮಾಡುತ್ತಿದ್ದರು. ನಂತರ 1937 ರಿಂದ ಇದು ಬೆಂಗಳೂರಿನಲ್ಲಿದ್ದ ರೆಸಿಡೆಂಟ್ ಸರ್ಜನರ ಅಧಿಕಾರ ವ್ಯಾಪ್ತಿಗೆ ಬಂದಿತು. ಕೊಡಗಿನ ಸಿವಿಲ್ ಸರ್ಜನರ ಹುದ್ದೆಯಲ್ಲಿ ಕರ್ನಲ್ ದರ್ಜೆಯ ಯೂರೋಪಿಯನ್ ಅಧಿಕಾರಿಗಳಿರುತ್ತಿದ್ದರು. ಇವರು 1949ನೇ ಏಪ್ರಿಲ್ 15ರ ವರೆಗೂ ಕೊಡಗು ಸಂಸ್ಥಾನದ ವೈದ್ಯಕೀಯ ಹಾಗೂ ಸಾರ್ವಜನಿಕ ಆರೋಗ್ಯ ಇಲಾಖೆಗಳ ಮುಖ್ಯಸ್ಥರಾಗಿದ್ದರು. ಆರೋಗ್ಯ ಇಲಾಖೆ

ಯನ್ನು 1949ರ ಏಪ್ರಿಲ್ ಹದಿನೈದನೇ ದಿನಾಂಕದಿಂದ, (ಆ ವೇಳೆಗಾಗಲೇ 1946ರಲ್ಲಿ ನೇಮಿಸಲ್ಪಟ್ಟಿದ್ದ) ಮಲೇರಿಯಾ ಅಧಿಕಾರಿಗಳು ವಹಿಸಿಕೊಂಡರು. ಇಲಾಖೆಗೆ ಹೆಚ್ಚು ಹೆಚ್ಚಾಗಿ ಭಾರತೀಯರನ್ನು ಸೇರಿಸಿಕೊಳ್ಳುವುದು ಎರಡನೇ ಮಹಾಯುದ್ಧದ ನಂತರ ಪ್ರಾರಂಭವಾಯಿತು. ಕೊಡಗು ಸಂಸ್ಥಾನದಲ್ಲಿ 1953ರಲ್ಲಿ ಒಬ್ಬ ಸಿವಿಲ್ ಸರ್ಜನರು, ಇಬ್ಬರು ಸಹಾಯಕ ಸರ್ಜನರು, ಇಬ್ಬರು ಮಹಿಳಾ ಸಹಾಯಕ ಸರ್ಜನರು, 19 ಜನ ಅಧೀನ ಸಹಾಯಕ ಸರ್ಜನರು ಒಬ್ಬ ಕ್ಷಯ ರೋಗಾಧಿಕಾರಿ, 18 ಜನ ಔಷಧ ವಿತರಕರು, 36 ಜನ ದಾದಿಯರು (ನರ್ಸ್‌ಗಳು) ಮತ್ತು 38 ಜನ ವಾರ್ಡ್ ಹುಡುಗರು ಇದ್ದರು. ಆರೋಗ್ಯ ಇಲಾಖೆಯಲ್ಲಿ ಒಬ್ಬ ಆರೋಗ್ಯ ಅಧಿಕಾರಿಗಳು (ಮಲೇರಿಯ) ಒಬ್ಬ ಸಹಾಯಕ ಅಧಿಕಾರಿ, ಒಬ್ಬ ಸಹಾಯಕ ಕೀಟ ಶಾಸ್ತ್ರಜ್ಞ, ಒಂಬತ್ತು ಜನ ಮಲೇರಿಯ ನಿರೀಕ್ಷಕರು, ಇಬ್ಬರು ಹಿರಿಯ ನಿರೀಕ್ಷಕರು, ಎಂಟು ಜನ ಸಹಾಯಕ ನೈರ್ಮಲ್ಯ ನಿರೀಕ್ಷಕರು, ಐದು ಜನ ಕೀಟ ಸಂಗ್ರಾಹಕರೂ ಮತ್ತು 16 ಜನ ಇತರ ಸೇವಾ ವರ್ಗದವರೂ ಇದ್ದರು. ಜಿಲ್ಲಾ ಆರೋಗ್ಯಾಧಿಕಾರಿಗಳು 1960ನೇ ಜೂನ್ ಒಂದರಿಂದೀಚೆಗೆ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳೂ ಘಟಕಗಳೂ ಹಾಗೂ ಇತರ ಕೆಲವು ವೈದ್ಯಕೀಯ ಸಂಸ್ಥೆಗಳಾದ ಜಿಲ್ಲಾ ಆರೋಗ್ಯ ಪ್ರಯೋಗಶಾಲೆ ಮೊದಲಾದವುಗಳ ಮೇಲೆ ಆಡಳಿತಾಧಿಕಾರವನ್ನು ಹೊಂದಿದ್ದಾರೆ. ಜಿಲ್ಲಾ ಆರೋಗ್ಯಾಧಿಕಾರಿಗಳು ಮಲೇರಿಯಾ, ಕುಷ್ಠ, ಕ್ಷಯ ಮೊದಲಾದ ರೋಗಗಳ ನಿರ್ಮೂಲನಾ ಕಾರ್ಯಕ್ರಮಗಳು, ಕುಟುಂಬ ಕಲ್ಯಾಣ, ಮಕ್ಕಳ ಮತ್ತು ಸ್ತ್ರೀಯರ ಆರೋಗ್ಯ, ರೋಗ ಪ್ರತಿರೋಧಕ ಕಾರ್ಯಕ್ರಮ ಮೊದಲಾದ ರಾಷ್ಟ್ರೀಯ ಕಾರ್ಯಕ್ರಮಗಳ ನಿರ್ವಹಣೆಯ ಜವಾಬ್ದಾರಿಯನ್ನು ಹೊಂದಿದ್ದಾರೆ. ಜಾತ್ರೆಗಳಲ್ಲಿ ಆರೋಗ್ಯ, ನೈರ್ಮಲ್ಯ ರಕ್ಷಣೆ, ಹುಟ್ಟು ಸಾವುಗಳ ಸಂಖ್ಯಾ ಸಂಗ್ರಹಣೆ, ಸರ್ಕಾರಿ ಔಷಧಾಲಯಗಳಿಗೆ ಔಷಧ ವಿತರಣೆ, ಸಾಂಕ್ರಾಮಿಕ ರೋಗಗಳ ತಡೆಗಟ್ಟುವಿಕೆ, ಉಪಾಹಾರ ಮಂದಿರಗಳ, ಚಿತ್ರಮಂದಿರಗಳ ತಪಾಸಣೆ, ನಗರ ನೈರ್ಮಲ್ಯ, ಬಡಾವಣೆಗಳ ನಿರ್ಮಾಣದಲ್ಲಿ ನಗರ ಸಭೆಗಳಿಗೆ ಸಲಹೆ ನೀಡುವುದು ಮೊದಲಾದ ಕಾರ್ಯಕ್ರಮಗಳ ಜವಾಬ್ದಾರಿಯನ್ನು ಹೊಂದಿದ್ದಾರೆ. ಕುಟುಂಬ ಕಲ್ಯಾಣದ ಜವಾಬ್ದಾರಿಯನ್ನು ಮನಗಂಡು ಜಿಲ್ಲಾ ಆರೋಗ್ಯಾಧಿಕಾರಿಗಳ ಹುದ್ದೆಯನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬಯೋಜನಾಧಿಕಾರಿಗಳೆಂದು ಮೊದಲಿಗೆ ಬದಲಾಯಿಸಲಾಯಿತು. ನಂತರ 1978ರಲ್ಲಿ ಹುದ್ದೆಯ ಹೆಸರನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳೆಂದು ಮಾರ್ಪಡಿಸಲಾಯಿತು. ಇವರ ಕೈಕೆಳಗೆ ಸಹಾಯಕರಾಗಿ ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿಗಳು, ಜಿಲ್ಲಾ ಕ್ಷಯ ರೋಗಾಧಿಕಾರಿಗಳು, ಜಿಲ್ಲಾ ಕುಷ್ಠ ರೋಗಾಧಿಕಾರಿಗಳು, ಜಿಲ್ಲಾ ಲಸಿಕಾಧಿಕಾರಿಗಳು, ಸಹಾಯಕ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳೂ, ಪತ್ರಾಂಕಿತ ಸಹಾಯಕರು, ಒಬ್ಬ ಆರೋಗ್ಯ ಪರ್ಯವೇಕ್ಷಕರು, ಇಬ್ಬರು ಜಿಲ್ಲಾ ದಾದಿಯರ ಮೇಲ್ವಿಚಾರಕರು, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳೂ ಇದ್ದಾರೆ. ಆಡಳಿತ ವ್ಯವಸ್ಥೆಯಲ್ಲಿ ಐದು ಜನ ಅಧೀಕ್ಷಕರೂ, ಮೂರು ಜನ ಅಂಕಿ ಸಂಖ್ಯೆಗಳ ಸಹಾಯಕರು, 40 ಜನ ಪ್ರಥಮ ಹಾಗೂ ದ್ವಿತೀಯ ದರ್ಜೆ ಸಹಾಯಕರೂ, 11 ಜನ ಹಿರಿಯ/ಕಿರಿಯ ಶೀಘ್ರಲಿಪಿ ಮತ್ತು ಬೆರಳಚ್ಚುಗಾರರು, ಮೂರು ಜನ ಕ್ಷ-ಕಿರಣ ತಜ್ಞರು, ಇಬ್ಬರು ಹಿರಿಯ/ಕಿರಿಯ ವೈದ್ಯೇತರ ಪರ್ಯವೇಕ್ಷಕರೂ, ನಾಲ್ಕು ಜನ ಅರೆ ವೈದ್ಯಕೀಯ ಕಾರ್ಯಕರ್ತರೂ, 25 ಜನ ಚಾಲಕರೂ 185 ಜನ ಡಿ ಗುಂಪಿನ ನೌಕರರೂ ಇದ್ದಾರೆ. ಮೂರು ಸಾರ್ವಜನಿಕ (ಜನರಲ್) ಆಸ್ಪತ್ರೆಗಳನ್ನು ಹೊರತು ಪಡಿಸಿ ಜಿಲ್ಲೆಯಲ್ಲಿ 1990ರಲ್ಲಿ 48 ಜನ ವೈದ್ಯಾಧಿಕಾರಿಗಳೂ ಮೂರು ಜನ ಆಯುರ್ವೇದ ವೈದ್ಯರು, ಒಬ್ಬ ಹೋಮಿಯೋಪತಿ ವೈದ್ಯರೂ, 21 ಜನ ಪುರುಷ ಮತ್ತು 21 ಜನ ಮಹಿಳಾ ಆರೋಗ್ಯ ಸಹಾಯಕರೂ, 86 ಜನ ಪುರುಷ ಮತ್ತು 199 ಜನ ಮಹಿಳಾ ಕಿರಿಯ ಆರೋಗ್ಯ ಸಹಾಯಕರೂ, 35 ಜನ ಔಷಧ ವಿತರಕರು 16 ಜನ ಆರೋಗ್ಯ ಶಿಕ್ಷಕರು, 29 ಜನ ದಾದಿಯರು (ಸ್ಟಾಫ್‌ನರ್ಸ್), ಐದು ಜನ ಹಿರಿಯ ಮತ್ತು 20 ಜನ ಕಿರಿಯ ಪ್ರಯೋಗ ತಜ್ಞರು ಮತ್ತು ಮೂರು ಜನ ಆರೋಗ್ಯ ಸಂದರ್ಶಕರೂ ವೈದ್ಯಕೀಯ ಮತ್ತು ಆರೋಗ್ಯ ತಂತ್ರಜ್ಞರ ಸಮೂಹದಲ್ಲಿದ್ದರು.

ಮೊದಲಿಗೆ ಮಡಿಕೇರಿ ಜಿಲ್ಲಾ ಆಸ್ಪತ್ರೆಗೆ ಒಬ್ಬ ಸಿವಿಲ್ ಸರ್ಜನರಿದ್ದರು. ವೀರರಾಜಪೇಟೆಯಲ್ಲಿದ್ದ ಸಿವಿಲ್ ಆಸ್ಪತ್ರೆಯ ಸರ್ಜನರು ಸೋಮವಾರಪೇಟೆಯ ಆಸ್ಪತ್ರೆಯ ಮೇಲೂ ಆಡಳಿತಾಧಿಕಾರವನ್ನು ಹೊಂದಿದ್ದರು. ಈಗ ಮಡಿಕೇರಿಯ ಜಿಲ್ಲಾ ಆಸ್ಪತ್ರೆಯು ಜಿಲ್ಲಾ ಸರ್ಜನರ ಆಡಳಿತಕ್ಕೆ ಒಳಪಟ್ಟಿದೆ. ವೀರರಾಜಪೇಟೆಯ ಮತ್ತು ಸೋಮವಾರಪೇಟೆಯ ಸಾರ್ವಜನಿಕ ಆಸ್ಪತ್ರೆಗಳಿಗೆ ಪ್ರತ್ಯೇಕವಾಗಿ ಶಸ್ತ್ರವೈದ್ಯ (ಸರ್ಜನ್)ರುಗಳಿದ್ದು, ಅವರು ಮೈಸೂರಿನ ವಿಭಾಗೀಯ ಜಂಟೀ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಇವರ ಆಡಳಿತಾಧಿಕಾರಕ್ಕೆ ಒಳಪಟ್ಟಿದ್ದಾರೆ.

ಮಡಿಕೇರಿಯಲ್ಲಿರುವ ಜಿಲ್ಲಾ ಸರ್ಜನರು ಮಡಿಕೇರಿ ಜಿಲ್ಲಾ ಆಸ್ಪತ್ರೆಯ ಆಡಳಿತವನ್ನು ನೋಡಿಕೊಳ್ಳುವುದರ

ಜೊತೆಗೆ ಶವಪರೀಕ್ಷೆ ವರದಿ, ಮೇಲುರುಜು ಹಾಕುವುದು, ವೈದ್ಯಪ್ರಮಾಣ ಪತ್ರಗಳನ್ನು ಕೊಡುವುದು, ದೇಹದಾರ್ಢ್ಯ ಸೂಚಕ ವೈದ್ಯಪ್ರಮಾಣ ಪತ್ರಗಳನ್ನು ನೀಡುವುದು, ವೈದ್ಯಕೀಯ ಪರೀಕ್ಷೆ ಮಾಡುವುದು ಮೊದಲಾದ ಜವಾಬ್ದಾರಿಗಳನ್ನು ಹೊಂದಿದ್ದಾರೆ.

ಕೊಡಗು ಪ್ರಾಂತ್ಯದಲ್ಲಿ 1951ರಲ್ಲಿ ಮಡಿಕೇರಿ ಮತ್ತು ವೀರರಾಜಪೇಟೆಗಳಲ್ಲಿ ಒಂದೊಂದು ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗಳೂ ಸೋಮವಾರಪೇಟೆ, ಕುಶಾಲನಗರ, ಶನಿವಾರ ಸಂತೆ, ಸುಂಟಿಕೊಪ್ಪ, ಮೂರ್ನಾಡು, ಸಿದ್ದಾಪುರ, ನಾಪೋಕ್ಲು ಗೋಣಿಕೊಪ್ಪಲು, ತಿತಿಮತಿ, ಬಾಳೆಲೆ ಮತ್ತು ಶ್ರೀಮಂಗಲ ಗಳಲ್ಲಿ ಜಿಲ್ಲಾ ಬೋರ್ಡ್ ಆಸ್ಪತ್ರೆ ಹಾಗೂ ಔಷಧಾಲಯ ಗಳೂ, ಭಾಗಮಂಡಲ, ಹೆಬ್ಬಾಲೆ ಮತ್ತು ಕೊಡ್ಲಿಪೇಟೆಗಳಲ್ಲಿ ಜಿಲ್ಲಾ ಬೋರ್ಡ್ ಆಯುರ್ವೇದ ಔಷಧಾಲಯಗಳೂ ಇದ್ದವು. ಸಂಪಾಜೆ, ಕಾನೂರು ಮತ್ತು ಹುದಿಕೇರಿಗಳಲ್ಲಿ ವಾರಕ್ಕೆರಡು ದಿವಸ ಕೆಲಸ ಮಾಡುತ್ತಿದ್ದ ಔಷಧಾಲಯಗಳು, ನಂಜರಾಯಪಟ್ಟಣ, ವಾಲ್ನೂರು-ತ್ಯಾಗತ್ತೂರು, ಹೆರೂರು, ಚೆಟ್ಟಳ್ಳಿ, ಅಮ್ಮತ್ತಿ, ಮಾದಾಪುರ, ಚೆಯ್ಯಂಡಾಣೆ, ಕುಟ್ಟ, ಕಕ್ಕಬ್ಬೆ, ನೆಲಜಿ, ಕಾರುಗುಂದ ಮತ್ತು ಬಿರುನಾಣಿಗಳಲ್ಲಿ ವಾರಕ್ಕೊಂದು ದಿನ ಕೆಲಸ ಮಾಡುವ ಔಷಧಾಲಯಗಳಿದ್ದವು. ಪಂಚವಾರ್ಷಿಕ ಯೋಜನೆಗಳಡಿಯಲ್ಲಿ ಜಿಲ್ಲೆಯಲ್ಲಿ ಹೆಚ್ಚು ಹೆಚ್ಚು ಆರೋಗ್ಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ಎಲ್ಲಾ ಜಿಲ್ಲಾ ಬೋರ್ಡಿನ ಆಸ್ಪತ್ರೆಗಳನ್ನು 1953ನೇ ಏಪ್ರಿಲ್ ಒಂದರಿಂದ ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡಿತು. 1956ರಲ್ಲಿ ರಾಜ್ಯ ಪುನರ್ಘಟನೆಯ ನಂತರ 1957ರಲ್ಲಿ ಕೊಡಗು ಒಂದು ಜಿಲ್ಲೆಯಾಗಿ ಪರಿವರ್ತಿಸಲ್ಪಟ್ಟ ಸಮಯದಲ್ಲಿ ಇಲ್ಲಿ 40 ಸರ್ಕಾರಿ ವೈದ್ಯಕೀಯ ಸಂಸ್ಥೆಗಳಿದ್ದವು. ಇವುಗಳಲ್ಲಿ 22 ಆಸ್ಪತ್ರೆಗಳಾಗಿದ್ದು ಉಳಿದ 18 ಔಷಧಾಲಯಗಳಾಗಿದ್ದವು. ಈ 40 ಸಂಸ್ಥೆಗಳಲ್ಲಿ 35 ಗ್ರಾಮಾಂತರ ಪ್ರದೇಶಗಳಲ್ಲೂ ಉಳಿದ ಐದು ಪಟ್ಟಣ ಪ್ರದೇಶಗಳಲ್ಲೂ ಇದ್ದುವು. ಆಗ ಒಂದೊಂದು ಸಂಸ್ಥೆಯೂ ಸರಾಸರಿ 39.7 ಚ. ಮೈಲಿ ಪ್ರದೇಶಗಳಿಗೂ 5,785 ಜನರಿಗೂ ವೈದ್ಯಕೀಯ ಹಾಗೂ ಆರೋಗ್ಯ ಸೌಲಭ್ಯಗಳನ್ನು ಒದಗಿಸುತ್ತಿತ್ತು. ಇವುಗಳಲ್ಲಿ ಒಳರೋಗಿಗಳಿಗೆ 768 ಹಾಸಿಗೆಗಳ ಸೌಕರ್ಯವಿತ್ತು. ಆ ವರ್ಷ ಇವುಗಳಲ್ಲಿ 35,804 ಒಳರೋಗಿಗಳೂ (ದೈನಿಕ ಸರಾಸರಿ 865.4), 6,73,723 ಹೊರ ರೋಗಿಗಳು (ದೈನಿಕ ಸರಾಸರಿ 2,857.1) ಚಿಕಿತ್ಸಾ ಸೌಲಭ್ಯ ಪಡೆದಿದ್ದರು. ಕೊಡಗು ಜಿಲ್ಲೆಯಲ್ಲಿ 1965ರ ವೇಳೆಗೆ ಮಡಿಕೇರಿ, ವೀರರಾಜಪೇಟೆ ಮತ್ತು ಸೋಮವಾರಪೇಟೆ ಜಿಲ್ಲಾ ಮತ್ತು ಸಾರ್ವಜನಿಕ ಆಸ್ಪತ್ರೆಗಳ ಜೊತೆಗೆ ಭಾಗಮಂಡಲ, ಸಂಪಾಜೆ, ಮೂರ್ನಾಡು, ಚೆಟ್ಟಳ್ಳಿ, ಶಾಂತಳ್ಳಿ, ಶನಿವಾರಸಂತೆ, ಕೊಡ್ಲಿಪೇಟೆ, ಮಾದಾಪುರ, ಕುಶಾಲನಗರ, ಮಣಿನಾಡು, ಪೊನ್ನಂಪೇಟೆ,ಪೊಲ್ಲಿಬೆಟ್ಟ, ಗೋಣಿಕೊಪ್ಪಲು, ಬಾಳೆಲೆ, ತಿತಿಮತಿ, ಸಿದ್ದಾಪುರ, ಮತ್ತು ಶ್ರೀಮಂಗಲಗಳಲ್ಲಿ ಸಿವಿಲ್ ಆಸ್ಪತ್ರೆಗಳು; ಕುಟ್ಟದಲ್ಲಿ ಗ್ರೂಪ್ ಆಸ್ಪತ್ರೆಯೂ, ಕಲ್ಲಳ್ಳಿ ಮತ್ತು ಮೂರ್ನಾಡುಗಳಲ್ಲಿ ಅರಣ್ಯ ಔಷಧಾಲಯಗಳೂ, ಕಡಂಗ, ನಂಜರಾಜಪಟ್ಟಣ, ಶ್ರೀಮಂಗಲ, ಅಮ್ಮತ್ತಿಗಳಲ್ಲಿ ವಾರದ ಔಷಧಾಲಯಗಳೂ, ಕಾರುಗುಂದ, ಕಕ್ಕಬ್ಬೆ, ಪೆರಾಜೆಗಳಲ್ಲಿ ವಾರಕ್ಕೊಂದು ದಿನ ಕೆಲಸ ಮಾಡುತ್ತಿದ್ದ ಔಷಧಾಲಯಗಳೂ, ಕಲ್ಲಹಳ್ಳದಲ್ಲಿ ಸಂಚಾರಿ ಆರೋಗ್ಯ ಘಟಕವೂ ಕೆಲಸ ಮಾಡುತ್ತಿದ್ದವು. ಭಾರತ ಸರ್ಕಾರದ ಮಾದರಿಯ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸುಂಟಿಕೊಪ್ಪ, ನಾಪೋಕ್ಲು ಮತ್ತು ಹುದಿಕೇರಿಗಳಲ್ಲಿದ್ದವು. ಕಾನೂರು ಮತ್ತು ಹೆಬ್ಬಾಲೆಗಳಲ್ಲಿ ಸಿವಿಲ್ ಔಷಧಾಲಯಗಳೂ, ಕೂಡಿಗೆಯಲ್ಲಿ ಒಂದು ಔಷಧಾಲಯವೂ ಇದ್ದುವು.

ಜಿಲ್ಲೆಯಲ್ಲಿ 1976ರಲ್ಲಿ 46 ಸರ್ಕಾರಿ ಹಾಗೂ ಇತರ ಆಸ್ಪತ್ರೆಗಳೂ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ/ಘಟಕಗಳೂ ಇದ್ದವು. ಇವುಗಳಲ್ಲಿ 26 ಆಸ್ಪತ್ರೆಗಳೂ, 3 ಪ್ರಾಥಮಿಕ ಆರೋಗ್ಯ ಕೇಂದ್ರಗಳೂ, ಒಂದು ವೈದ್ಯಕೀಯ ಉಪಕೇಂದ್ರ, ಎರಡು ಸಿವಿಲ್ ಔಷಧಾಲಯಗಳು, 13 ಸರ್ಕಾರಿ ಔಷಧಾಲಯಗಳು, ಹಾಗೂ ಒಂದು ಇತರ ಸಂಸ್ಥೆಯಾಗಿದ್ದಿತು. ಒಟ್ಟು ಹಾಸಿಗೆಗಳ ಸಂಖ್ಯೆ 1,295 ಇತ್ತು (ಗ್ರಾಮಾಂತರ 300, ಪಟ್ಟಣ ಪ್ರದೇಶ 995). ಕೊಡಗು ಜಿಲ್ಲೆಯಲ್ಲಿ 1990ರಲ್ಲಿ ರಾಜ್ಯ ಸರ್ಕಾರದ ಒಂದು ಜಿಲ್ಲಾ ಆಸ್ಪತ್ರೆಯೂ, ಎರಡು ಸಾರ್ವಜನಿಕ (ಜನರಲ್) ಆಸ್ಪತ್ರೆಗಳೂ, 15 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 10 ಪ್ರಾಥಮಿಕ ಆರೋಗ್ಯ ಘಟಕಗಳು, ಎರಡು ಸಮುದಾಯ ಆರೋಗ್ಯ ಕೇಂದ್ರಗಳೂ ಮೂರು ಆಯುರ್ವೇದ ಆಸ್ಪತ್ರೆಗಳೂ, ಒಂದು ಹೋಮಿಯೋಪತಿ ಚಿಕಿತ್ಸಾಲಯ ಮತ್ತು ಎರಡು ಸಂಚಾರಿ ಪರಿಶಿಷ್ಟ ವರ್ಗದ ಆರೋಗ್ಯ ಘಟಕಗಳು ಕೆಲಸ ಮಾಡುತ್ತಿದ್ದವು. ಇವಲ್ಲದೆ ಮಡಿಕೇರಿ, ಅಮ್ಮತ್ತಿ, ಪೊಲ್ಲಿಬೆಟ್ಟ ಮೊದಲಾದ ಕಡೆ ಖಾಸಗಿ ಆಸ್ಪತ್ರೆಗಳಿದ್ದವು. ಪಟ್ಟಣ ಪ್ರದೇಶಗಳಾದ ಮಡಿಕೇರಿ, ವೀರರಾಜಪೇಟೆ, ಗೋಣಿಕೊಪ್ಪಲು, ಕುಶಾಲನಗರ, ಸೋಮವಾರಪೇಟೆಗಳಲ್ಲಿ ಖಾಸಗೀ ನರ್ಸಿಂಗ್ ಹೋಂಗಳು ಜನಪ್ರಿಯವಾಗುತ್ತಿವೆ. ಖಾಸಗೀ ವೈದ್ಯರುಗಳು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ.

ಜನನ ಮರಣ ಅಂಕಿ ಅಂಶಗಳು

ಜನನ ಮರಣಗಳ ಅಂಕಿ ಅಂಶಗಳ ಸಂಗ್ರಹಣೆ ಶತಮಾನದಷ್ಟು ಹಳೆಯದಾದರೂ, ಮೊದಮೊದಲು ಹೆಚ್ಚು ವೈಜ್ಞಾನಿಕವಾಗಿರಲಿಲ್ಲ. ಹಿಂದೆ ಹುಟ್ಟು ಸಾವುಗಳನ್ನು ನೋಂದಣಿ ಮಾಡಲು ಹಳ್ಳಿಗಳಲ್ಲಿ ಹಳ್ಳಿಯ ಪಟೇಲರೂ, ಪಟ್ಟಣ ಪ್ರದೇಶಗಳಲ್ಲಿ ಪುರಸಭೆಗಳೂ ಇದ್ದವು. ಇವರು ದಾಖಲು ಮಾಡಿಕೊಂಡ ಅಂಕಿ ಅಂಶಗಳನ್ನು ಪ್ರತೀ ತಿಂಗಳೂ ತಾಲೂಕು ಮಟ್ಟದಲ್ಲಿ ತಹಸಿಲ್ದಾರರಿಗೆ ಕಳುಹಿಸಿಕೊಡುತ್ತಿದ್ದರು. ಅಲ್ಲಿಂದ ಮುಂದೆ ಮಡಿಕೇರಿಯಲ್ಲಿದ್ದ ಪ್ರಾಂತ್ಯದ ಕೇಂದ್ರಸ್ಥಾನಕ್ಕೆ ಕಳುಹಿಸಿಕೊಡಲಾಗುತ್ತಿತ್ತು. ನೋಂದಣಿಯನ್ನು ಹೆಚ್ಚು ಉತ್ತಮಗೊಳಿಸಲು 1915-16ರಲ್ಲಿ ಸುಧಾರಣೆಗಳನ್ನು ತರಲಾಯಿತು. ತನಿಖಾಧಿಕಾರಿಗಳು ವರದಿಯನ್ನು ಅಲ್ಲಲ್ಲೇ ಮಾದರಿಯಾಗಿ ಪರೀಕ್ಷಿಸುತ್ತಿದ್ದರು. ಮದ್ರಾಸಿನ 1899ರ ಕಾನೂನು ಅನುಸರಿಸಿ ನಂತರ 1918ರಲ್ಲಿ ನೋಂದಣಿಗೆ ಹೊಸ ನಿಯಮಗಳನ್ನು ಸೇರಿಸಲಾಯಿತು. ಮುಂದೆ ಸ್ವಾತಂತ್ರ್ಯಾನಂತರ 1969ರ ಜನನ, ಮರಣ ಮತ್ತು ವಿವಾಹಗಳ ನೋಂದಣಿ ಕಾನೂನು ಜಾರಿಗೆ ತರಲಾಯಿತು. ಈ ಕಾನೂನಿನ ಪ್ರಕಾರ ಜನನ, ಮರಣ ಮತ್ತು ವಿವಾಹಗಳನ್ನು ಪ್ರತೀಯೊಬ್ಬರು ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ಸಹಾಯಕ ನೋಂದಣಿ ಅಧಿಕಾರಿಗಳ ಕಚೇರಿಯಲ್ಲಿ ನೋಂದಣಿ ಮಾಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಹಳ್ಳಿಗಳ ಕಾರಕೂನರಿಂದ ಪಟ್ಟಣ ಪ್ರದೇಶಗಳಲ್ಲಿ ನಗರ ಸಭೆಗಳಿಂದ ಈಗ ಜನನ ಮರಣಗಳು ನೋಂದಣಿ ಮಾಡಲ್ಪಡುತ್ತವೆ. ಮೇಲೆ ತಿಳಿಸಿದ ಕಾನೂನಿನ ಪ್ರಕಾರ ಜಿಲ್ಲಾಧಿಕಾರಿಗಳು ಜಿಲ್ಲೆಯ ನೋಂದಣಿ ಅಧಿಕಾರಿಗಳೂ ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯ ಜಿಲ್ಲಾಧಿಕಾರಿಗಳು ಅಪರ ಜಿಲ್ಲಾ ನೋಂದಣಿ ಅಧಿಕಾರಿಗಳೂ ಆಗಿದ್ದಾರೆ.

ಮಾದರಿ ನೋಂದಣಿ ವ್ಯವಸ್ಥೆ

ಜನನ ಮರಣಗಳ ಅಂಕಿ ಅಂಶಗಳ ಸಂಗ್ರಹಣೆಗಾಗಿ ಭಾರತದ ಜನನ, ಮರಣ, ವಿವಾಹಗಳ ಮಹಾ ಪಂಜಿಕಾರರು (ರಿಜಿಸ್ಟ್ರಾರ್-ಜನರಲ್) ಮಾದರಿ ನೋಂದಣಿ ವ್ಯವಸ್ಥೆಯನ್ನು (ಸ್ಯಾಂಪಲ್ ರಿಜಿಸ್ಟ್ರೇಶನ್ ಸಿಸ್ಟಮ್) ಅನುಷ್ಠಾನಕ್ಕೆ ತಂದಿದ್ದಾರೆ. ಈ ವ್ಯವಸ್ಥೆಯ ಪ್ರಕಾರ ಗೊತ್ತುಪಡಿಸಿದ ಗ್ರಾಮಾಂತರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಜನನ ಮರಣಗಳ ಅಂಕಿ ಅಂಶಗಳನ್ನು ಸತತವಾಗಿ ಮಾಡಲಾಗುವುದು. ಹೀಗೆ ಪಡೆದ ಅಂಕಿ ಅಂಶಗಳನ್ನು ಹೆಚ್ಚು ಹೆಚ್ಚು ನಿರ್ದಿಷ್ಟಗೊಳಿಸಿ ಅವುಗಳ ವಿಶ್ವಾಸಾರ್ಹತೆಯನ್ನು ಸುಧಾರಿಸಲಾಗುವುದು. ಜೊತೆಗೆ ಮರಣದ ಕಾರಣಗಳನ್ನು ತಿಳಿಸುವುದರ ಮೂಲಕ ಸಾರ್ವಜನಿಕ ಆರೋಗ್ಯ ಕಾರ್ಯಕ್ರಮಗಳನ್ನು ರೂಪಿಸಲು ಸಹಾಯವಾಗುವುದು. ಸಾಮಾನ್ಯವಾಗಿ ಆಯ್ದ ಸ್ಥಳಗಳಲ್ಲಿ ಶಾಲಾ ಶಿಕ್ಷಕರನ್ನು ಅರೆಗಾಲಿಕ ಲೆಕ್ಕಿಗರನ್ನಾಗಿ ನಿಯಮಿಸಲಾಗುತ್ತಿದೆ. ಹೀಗೆ ಪಡೆದ ಅಂಕಿ ಅಂಶಗಳನ್ನು ಅಂಕಿಅಂಶಶಾಸ್ತ್ರದ ಅನೇಕ ಪ್ರಕ್ರಿಯೆಗಳಿಗೆ ಅಳವಡಿಸಿ ರಾಜ್ಯ ಹಾಗೂ ರಾಷ್ಟ್ರದ ಮಟ್ಟದಲ್ಲಿ ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಿಗೆ ಬೇರೆ ಬೇರೆಯಾಗಿ ಹುಟ್ಟು,ಸಾವು ಮೊದಲಾದವುಗಳ ಪ್ರಮಾಣವನ್ನು ಕಂಡು ಹಿಡಿಯಲಾಗುವುದು. ಕೊಡಗು ಜಿಲ್ಲೆಯಲ್ಲಿ ಮಡಿಕೇರಿ ತಾಲೂಕಿನ ಕಾಂತೂರು-ಮೂರ್ನಾಡು ಮತ್ತು ವೀರರಾಜಪೇಟೆ ತಾಲೂಕಿನ ಬಿಳುಗುಂದವನ್ನು ಮಾದರಿ ನೋಂದಣಿ-ವ್ಯವಸ್ಥೆಯಲ್ಲಿ ಗ್ರಾಮಾಂತರ ಘಟಕಗಳನ್ನಾಗಿ ಆರಿಸಿಕೊಳ್ಳಲಾಗಿದೆ.

ಈ ಕೆಳಗಿನ ಪಟ್ಟಿಯಲ್ಲಿ 1941 ರಿಂದ 1962ರ ವರೆವಿಗೂ ಮತ್ತು 1971 ರಿಂದ 1986ರವರೆವಿಗೂ ಕೊಡಗು ಜಿಲ್ಲೆಯಲ್ಲಿಯ ಜನನ ಮತ್ತು ಮರಣಗಳ ಸಂಖ್ಯೆಗಳನ್ನು ಕೊಡಲಾಗಿದೆ.

| ವರ್ಷ | ಜನನ ಸಂಖ್ಯೆಗಳು | ಮರಣ ಸಂಖ್ಯೆಗಳು |
|---|---|---|
| 1941 | 3,868 | 3,854 |
| 1942 | 3,297 | 3,847 |
| 1943 | 3,199 | 3,429 |
| 1944 | 3,093 | 3,459 |
| 1945 | 3,116 | 3,148 |
| 1946 | 3,220 | 2,646 |
| 1947 | 3,043 | 2,545 |
| 1948 | 3,237 | 2,119 |
| 1949 | 3,865 | 2,099 |
| 1950 | 3,846 | 1,673 |
| 1951 | 3,622 | 1,729 |
| 1952 | 3,896 | 1,876 |
| 1953 | 3,790 | 2,174 |
| 1954 | 4,196 | 1,871 |
| 1955 | 4,643 | 1,973 |
| 1956 | ಅಂಕಿಗಳು ಲಭ್ಯವಿಲ್ಲ. | |
| 1957 | 5,272 | 2,286 |
| 1958 | 5,496 | 2,690 |

| ವರ್ಷ | ಜನನ ಸಂಖ್ಯೆಗಳು | ಮರಣ ಸಂಖ್ಯೆಗಳು |
|---|---|---|
| 1959 | 5,713 | 1,795 |
| 1960 | 3,163 | 1,189 |
| 1961 | 3,195 | 1,132 |
| 1962 | 3,383 | 1,385 |
| 1971 | 2,273 | 704 |
| 1972 | 3,384 | 1,228 |
| 1973 | 2,354 | 817 |
| 1974 | 1,346 | 404 |
| 1975 | 3,009 | 1,027 |
| 1976 | 3,621 | 1,262 |
| 1977 | 3,535 | 1,116 |
| 1978 | 3,801 | 997 |
| 1979 | 4,044 | 1,227 |
| 1980 | 3,982 | 281 |
| 1981 | 3,909 | 911 |
| 1982 | 3,774 | 969 |
| 1983 | 3,845 | 1,180 |
| 1984 | 6,689 | 1,412 |
| 1985 | 4,460 | 1,406 |
| 1986 | 5,037 | 1,204 |

ಒಂದು ನಿರ್ದಿಷ್ಟ ಪ್ರದೇಶದಲ್ಲಿ ಒಂದು ಸಾವಿರ ಜನಸಂಖ್ಯೆಗೆ ಒಂದು ವರ್ಷದಲ್ಲಿ ಆಗುವ ಜನನಗಳಿಗೆ ಜನನ ಪ್ರಮಾಣವೆಂದೂ, ಮರಣಗಳಿಗೆ ಮರಣ ಪ್ರಮಾಣವೆಂದು ಕರೆಯುತ್ತಾರೆ. ಅದೇ ರೀತಿ ಜನಸಂಖ್ಯಾ ಅಧ್ಯಯನದಲ್ಲಿ ಶಿಶುಗಳ ಮರಣ ಪ್ರಮಾಣ, ಮೊದಲಾದ ಇತರ ಪ್ರಮಾಣಗಳೂ ಇವೆ. ಸತ್ತು ಹುಟ್ಟುವ ಮಕ್ಕಳ, ಹೆರಿಗೆ ಸಮಯದಲ್ಲಿ ತಾಯಂದಿರ ಸಾವು, ಮೊದಲಾದವುಗಳೆಲ್ಲವೂ ಸಾಮಾಜಿಕ ಆರೋಗ್ಯ ಸಮಸ್ಯೆಗಳಾಗಿದ್ದು ಅವುಗಳಿಗೆ ಅನೇಕ ಕಾರಣಗಳಿರುತ್ತವೆ. ಆದುದರಿಂದ ಈ ಪ್ರಮಾಣಗಳು ಸಮಾಜದ ಆರೋಗ್ಯ ಸ್ವಾಸ್ಥ್ಯಗಳ ಸೂಚಿಯಂತೆ ಇವೆ. ಜನನ ಮತ್ತು ಮರಣ ಪ್ರಮಾಣಗಳನ್ನು ವಲಯಗಳ ಆಧಾರದ ಮೇಲೆ ತಿಳಿಸುವುದರಿಂದ ಜಿಲ್ಲೆಗಳಿಗೆ ಪ್ರತ್ಯೇಕವಾಗಿ ದೊರೆಯುತ್ತಿಲ್ಲ. ಆದುದರಿಂದ ಕರ್ನಾಟಕ ರಾಜ್ಯದ ಜನನ ಮತ್ತು ಮರಣ ಪ್ರಮಾಣಗಳನ್ನು ಗ್ರಾಮಾಂತರ ಹಾಗೂ ಪಟ್ಟಣ ಪ್ರದೇಶಗಳಿಗೆ ಬೇರೆ ಬೇರೆಯಾಗಿ ಮತ್ತು ಒಟ್ಟಾಗಿಯೂ 1971 ರಿಂದ 1986ರ ವರೆವಿಗೆ ಮುಂದಿನ ಪಟ್ಟಿಯಲ್ಲಿ ಕೊಡಲಾಗಿದೆ. ಆ ಮುಂದಿನ ಪಟ್ಟಿಯಲ್ಲಿ 1971 ರಿಂದ 1986ರ ವರೆವಿಗೆ ಕೊಡಗು ಜಿಲ್ಲೆಯಲ್ಲಿ ಸತ್ತು ಹುಟ್ಟಿದ ಮಕ್ಕಳ ಸಂಖ್ಯೆ, ಹೆರಿಗೆ ಸಮಯದಲ್ಲಿ ಸತ್ತ ತಾಯಂದಿರ ಸಂಖ್ಯೆ, ಶಿಶುಗಳ ಸಾವಿನ ಸಂಖ್ಯೆಗಳನ್ನೂ ಜೊತೆಗೆ ಕರ್ನಾಟಕ ರಾಜ್ಯದ ಶಿಶುಗಳ ಮರಣ ಪ್ರಮಾಣವನ್ನೂ (ಪುಟ 752 ರಲ್ಲಿ) ಕೊಡಲಾಗಿದೆ.

ಈ ಕೆಳಗಿನ ಪಟ್ಟಿಯಲ್ಲಿ ಕರ್ನಾಟಕ ರಾಜ್ಯದ ಜನನ ಪ್ರಮಾಣ ಮತ್ತು ಮರಣ ಪ್ರಮಾಣಗಳನ್ನು ಗ್ರಾಮಾಂತರ ಹಾಗೂ ಪಟ್ಟಣ ಪ್ರದೇಶಗಳಿಗೆ ಬೇರೆ ಬೇರೆಯಾಗಿ 1971 ರಿಂದ 1986ರ ವರೆವಿಗೆ ಕೊಟ್ಟಿದೆ. ಕೊಡಗು ಜಿಲ್ಲೆಗೆ ಪ್ರತ್ಯೇಕವಾಗಿ ಈ ಪ್ರಮಾಣಗಳು ಲಭ್ಯವಿಲ್ಲ. ರಾಜ್ಯದ ಪ್ರಮಾಣಗಳನ್ನು ಜಿಲ್ಲೆಗೂ ಅನ್ವಯಿಸಿಕೊಳ್ಳಬೇಕು.

| ವರ್ಷಗಳು | ಜನನ ಪ್ರಮಾಣ | | | ಮರಣ ಪ್ರಮಾಣ | | |
|---|---|---|---|---|---|---|
| | ಗ್ರಾಮಾಂತರ | ಪಟ್ಟಣ ಪ್ರದೇಶ | ಎರಡೂ ಸೇರಿ | ಗ್ರಾಮಾಂತರ | ಪಟ್ಟಣ ಪ್ರದೇಶ | ಎರಡೂ ಸೇರಿ |
| 1 | 2 | 3 | 4 | 5 | 6 | 7 |
| 1971 | 34.6 | 25.3 | 31.7 | 14.0 | 7.2 | 12.1 |
| 1972 | 32.8 | 28.0 | 31.5 | 14.3 | 8.7 | 12.8 |
| 1973 | 30.1 | 26.1 | 28.9 | 14.3 | 7.7 | 12.4 |
| 1974 | 29.5 | 24.3 | 28.0 | 12.4 | 7.0 | 10.8 |
| 1975 | 29.7 | 22.5 | 27.7 | 12.5 | 7.5 | 11.1 |
| 1976 | 31.1 | 25.2 | 29.4 | 13.4 | 7.7 | 11.7 |
| 1977 | 27.2 | 24.0 | 26.3 | 12.5 | 7.8 | 11.1 |
| 1978 | 30.2 | 26.4 | 29.2 | 13.6 | 8.2 | 12.0 |

| 1 | 2 | 3 | 4 | 5 | 6 | 7 |
|---|---|---|---|---|---|---|
| 1979 | 29.0 | 25.9 | 28.1 | 11.8 | 6.4 | 10.4 |
| 1980 | 28.9 | 24.4 | 27.6 | 10.7 | 6.6 | 9.6 |
| 1981 | 29.2 | 25.7 | 28.3 | 10.2 | 6.3 | 9.1 |
| 1982 | 28.8 | 25.7 | 27.9 | 10.2 | 6.3 | 9.2 |
| 1983 | 30.2 | 26.0 | 29.1 | 10.6 | 6.0 | 9.3 |
| 1984 | 30.9 | 28.5 | 30.3 | 10.7 | 6.6 | 9.6 |
| 1985 | 30.9 | 26.2 | 29 6 | 9.8 | 6.1 | 8.8 |
| 1986 | 29.9 | 26.8 | 29.0 | 9.4 | 6.8 | 8.7 |

ಈ ಕೆಳಗಿನ ಪಟ್ಟಿಯನ್ನು ಕೊಡಗು ಜಿಲ್ಲೆಯಲ್ಲಿ 1971 ರಿಂದ 1986ರ ವರೆಗೆ ಸತ್ತು ಹುಟ್ಟಿದ ಮಕ್ಕಳು, ಶಿಶುಗಳ ಸಾವು ಮತ್ತು ಹೆರಿಗೆಯ ಕಾಲದಲ್ಲಿ ತಾಯಂದಿರ ಸಾವಿನ ಸಂಖ್ಯೆಗಳನ್ನು ಹಾಗೂ ಅದೇ ಅವಧಿಗೆ ಕರ್ನಾಟಕದ ಶಿಶುಗಳ ಸಾವಿನ ಪ್ರಮಾಣವನ್ನು ಕೊಟ್ಟಿದೆ.

| ವರ್ಷಗಳು | ಕೊಡಗು ಜಿಲ್ಲೆಯ ಸತ್ತು ಹುಟ್ಟಿದ ಮಕ್ಕಳ ಸಂಖ್ಯೆ | ಕೊಡಗು ಜಿಲ್ಲೆಯ ಹೆರಿಗೆ ಕಾಲದಲ್ಲಿ ಸತ್ತ ತಾಯಂದಿರ ಸಂಖ್ಯೆ | ಕೊಡಗು ಜಿಲ್ಲೆಯ ಶಿಶುಗಳ ಸಾವಿನ ಸಂಖ್ಯೆ | ಕರ್ನಾಟಕ ರಾಜ್ಯದ ಶಿಶುಗಳ ಮರಣ ಪ್ರಮಾಣ (ಪ್ರತೀ ಸಾವಿರಕ್ಕೆ) ಗ್ರಾಮಾಂತರ | ಪಟ್ಟಣ ಪ್ರದೇಶ | ಎರಡೂ ಸೇರಿ |
|---|---|---|---|---|---|---|
| 1971 | 76 | 04 | 36 | 105 | 54 | 95 |
| 1972 | 154 | 19 | 66 | 102 | 68 | 95 |
| 1973 | 52 | ಇಲ್ಲ | 27 | 96 | 68 | 90 |
| 1974 | 25 | ಇಲ್ಲ | 20 | 98 | 52 | 86 |
| 1975 | 43 | 03 | 53 | 86 | 60 | 80 |
| 1976 | 82 | 04 | 62 | 99 | 60 | 89 |
| 1977 | 54 | 04 | 58 | 89 | 64 | 83 |
| 1978 | 23 | 04 | 44 | 90 | 58 | 82 |
| 1979 | 48 | 09 | 68 | 94 | 51 | 83 |
| 1980 | 37 | 07 | 21 | 79 | 45 | 71 |
| 1981 | 36 | 05 | 62 | 77 | 45 | 69 |
| 1982 | 09 | 05 | 69 | 71 | 47 | 65 |
| 1983 | 52 | ಇಲ್ಲ | 39 | 80 | 41 | 71 |
| 1984 | 44 | 04 | 42 | 84 | 43 | 74 |
| 1985 | 7 | 06 | 41 | 80 | 41 | 71 |
| 1986 | 61 | 03 | 20 | 82 | 47 | 73 |

ಮೂಲ—ಜನನ, ಮರಣ ಮತ್ತು ಮದುವೆಗಳ ಮುಖ್ಯ ರಿಜಿಸ್ಟ್ರಾರ್‌ರವರ ಕಚೇರಿ, ಬೆಂಗಳೂರು.

## ಸಾಂಕ್ರಾಮಿಕ ರೋಗಗಳು

ಕೊಡಗು ಜಿಲ್ಲೆಯ ಜನರು ಮಲೇರಿಯಾ ಜ್ವರದಿಂದ ಹೆಚ್ಚು ಸಾವು ನೋವುಗಳನ್ನು ಅನುಭವಿಸಿದ್ದಾರೆ. ಒಟ್ಟು ಮರಣಗಳಲ್ಲಿ ಶೇಕಡಾ 32ರಷ್ಟು ಮಲೇರಿಯಾ ಜ್ವರದಿಂದ ಉಂಟಾಗುತ್ತಿತ್ತೆಂದು ಹಿಂದಿನ ವರದಿಗಳು ತಿಳಿಸುತ್ತವೆ. ಪಕ್ಕದ ಪ್ರಾಂತ್ಯಗಳಿಂದ ಜನರು ಕೊಡಗಿಗೆ ಬರಲು ಹೆದರುತ್ತಿದ್ದರು. ಮಲೇರಿಯಾದಂತೆ ಕ್ಷಯವೂ ಕೂಡ ಜಿಲ್ಲೆಯಲ್ಲಿ ಎದ್ದು ಕಾಣುವ ಸಾಂಕ್ರಾಮಿಕ ರೋಗವಾಗಿದೆ. ಮಲೇರಿಯಾ ನಿರ್ಮೂಲನ ಕಾರ್ಯಕ್ರಮ ಹಾಗು ಇತರ ರೋಗಗಳ ನಿವಾರಣಾ ಕಾರ್ಯಕ್ರಮಗಳ ಫಲವಾಗಿ ಜಿಲ್ಲೆಯ ಜನರು ಈಗ ಹೆಚ್ಚು ಆರೋಗ್ಯವಂತರಾಗಿದ್ದಾರೆ. ಗಾಯಿಟರ್ (ಗಳಗಂಡ) ರೋಗವು ಈಗ ಜಿಲ್ಲೆಯ ಜನರನ್ನು ಹೆಚ್ಚಾಗಿ ಪೀಡಿಸುತ್ತಿದೆಯೆಂದು ವರದಿಯಾಗಿದೆ. ಜಿಲ್ಲೆಯಲ್ಲಿ 1989–90ರಲ್ಲಿ ಮೆದುಳು ಜ್ವರವೆಂದು ಸಂಶಯಿಸಲಾದ ರೋಗವು ಕಂಡು ಬಂದಿದ್ದು ಇದರಿಂದ ಐದು ಮರಣಗಳು ಸಂಭವಿಸಿದ್ದವು. ಜಿಲ್ಲೆಯಲ್ಲಿ ಕಂಡುಬರುತ್ತಿದ್ದ ಕೆಲವು ಸಾಂಕ್ರಾಮಿಕ ರೋಗಗಳನ್ನು ಮುಂದೆ ಸ್ಥೂಲವಾಗಿ ತಿಳಿಸಲಾಗಿದೆ.

### ಮಲೇರಿಯಾ

ಹಿಂದೆ ಕೊಡಗಿನಲ್ಲಿ ಮಲೇರಿಯಾ ಜ್ವರವು ಸಾಮಾನ್ಯವಾಗಿ ಎಲ್ಲಾ ಕಡೆಗಳಲ್ಲೂ ಕಂಡು ಬರುತ್ತಿತ್ತು. ಆಗ ಪಕ್ಕದ ರಾಜ್ಯಗಳಿಂದ ಜನ ಇಲ್ಲಿಗೆ ಬರಲು ಹೆದರುತ್ತಿದ್ದರು. ಇದು ಸೊಳ್ಳೆಗಳಿಂದ ಹರಡುವ ರೋಗ. ಮಲೇರಿಯಾ ಜ್ವರವು 1870ರ ಬೇಸಿಗೆಯಲ್ಲಿ ತುಂಬಾ ಕಳವಳಕಾರಿಯಾಗಿತ್ತೆಂದು ರಿಕ್ಟರ್ ತಿಳಿಸುತ್ತಾರೆ. ಕಳೆದ ಶತಮಾನದ ಎಪ್ಪತ್ತು, ಎಂಬತ್ತು, ತೊಂಬತ್ತರ ದಶಕಗಳಲ್ಲಿ ಮಲೇರಿಯಾ ಜ್ವರವು ಹೆಚ್ಚು ಜನರನ್ನು ಬಲಿ ತೆಗೆದುಕೊಂಡಿತ್ತು. ಪ್ರತೀ ವರ್ಷವೂ ಸುಮಾರು 2,500 ರಿಂದ 3,000ರ ವರೆಗೆ ಜನರು ಈ ಜ್ವರದಿಂದ ಸಾಯುತ್ತಿದ್ದರು. ಐದು ಗ್ರೈನ್ ಪ್ಯಾಕೆಟ್ಟುಗಳ ಕ್ವಿನೈನನ್ನು 1896ರಲ್ಲಿ 20 ಅಂಚೆ ಕಚೇರಿಗಳಲ್ಲಿ ಮಾರುತ್ತಿದ್ದುದು ಕಂಡುಬಂದಿದೆ. ಈ ಪದ್ಧತಿಯು 1938ರವರೆಗೂ ಮುಂದುವರಿದಿತ್ತು. ಇಂತಹ 48,756 ಪ್ಯಾಕೆಟ್ಟುಗಳನ್ನು 1903–04ರಲ್ಲಿ ಹಂಚಲಾಗಿತ್ತು. ವ್ಯವಸ್ಥಿತವಾದ ಮಲೇರಿಯಾ ನಿರೋಧ ಕಾರ್ಯಕ್ರಮವು 1928ರಲ್ಲಿ ಶುರುವಾಯಿತು.

ಮೇಜರ್ ಜನರಲ್ ಸರ್ ಗೋರ್ಡನ್ ಕೋವೆಲ್‌ರವರು ಕೊಡಗಿನಲ್ಲಿ ಮಲೇರಿಯಾ ನಿರೋಧ ಘಟಕವೊಂದನ್ನು ಸ್ಥಾಪಿಸಲು ಬ್ರಿಟಿಷ್ ಸರ್ಕಾರಕ್ಕೆ ಒತ್ತಾಯಪೂರ್ವಕ ಮನವಿಯೊಂದನ್ನು ಮಾಡಿದ್ದರು. ಅದರ ಮೇರೆಗೆ 1947ರಲ್ಲಿ ಸಣ್ಣ ಮಲೇರಿಯ ನಿರ್ಮೂಲನ ಘಟಕವೊಂದನ್ನು ಸ್ಥಾಪಿಸಲಾಯಿತು. ಕೊಡಗನ್ನು ಎಂಟು ವೃತ್ತಗಳಾಗಿ ವಿಂಗಡಿಸಿ ಪ್ರತಿಯೊಂದಕ್ಕೂ ಒಬ್ಬೊಬ್ಬ ವೀಕ್ಷಕನನ್ನು ನೇಮಿಸಿ ಅವನ ಕೈಕೆಳಗೆ ಕಾರ್ಯಕರ್ತರನ್ನು ನೇಮಿಸಲಾಯಿತು. ರೋಗವನ್ನು ನಿಯಂತ್ರಿಸಲು ಮಂಜೂರು ಮಾಡಿದ್ದ 1.73 ಲಕ್ಷ ರೂಪಾಯಿಗಳಲ್ಲಿ 5,000 ರೂ. ವೆಚ್ಚದಲ್ಲಿ ಒಂದು ಪ್ರಯೋಗ ಶಾಲೆಯನ್ನು ಸ್ಥಾಪಿಸಲಾಯಿತು. ಸರ್ಕಾರವು 1947 ರಿಂದ 1952ರ ವರೆವಿಗೆ ರೋಗ ನಿರ್ಮೂಲನಕ್ಕೆ 6.63 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿತ್ತು. ಇದರಲ್ಲಿ ಭಾರತ ಸರ್ಕಾರವು 5.47 ಲಕ್ಷ ರೂ.ಗಳನ್ನು ನೀಡಿತ್ತು. ರೋಗ ಹರಡುವ ಕಾಲವಾದ ಅಕ್ಟೋಬರ್ ಒಂದರಿಂದ ಜೂನ್ ಐದರವರೆಗೆ ಪ್ರತೀ ವರ್ಷವೂ ಮನೆಯೊಳಗೆ ಹಾಗೂ ಹೊರಗೆ ಸೊಳ್ಳೆಗಳ ನಾಶಕ್ಕೆ ಡಿ.ಡಿ.ಟಿ.ಯನ್ನು ಸಿಂಪಡಿಸಲಾಗುತ್ತಿತ್ತು. ಇದರಿಂದ 1952ರ ವೇಳೆಗೆ ಸ್ಪ್ಲೀನ್ (ಪ್ಲೀಹ ಅಥವಾ ಗುಲ್ಮ) ರೇಟು ಶೇ. 5ಕ್ಕೆ ಇಳಿದಿತ್ತು. ಸಾವಿರಕ್ಕೆ 17 ಮಂದಿ ರೋಗಕ್ಕೆ ತುತ್ತಾಗುತ್ತಿದ್ದರು. ಭಾರತ ಸರ್ಕಾರವು 1953ರಲ್ಲಿ ರಾಷ್ಟ್ರೀಯ ಮಲೇರಿಯಾ ನಿಯಂತ್ರಣದ ಒಂದು ಸಣ್ಣ ಘಟಕವನ್ನು ಸ್ಥಾಪಿಸಿ ಡಿ.ಡಿ.ಟಿ. ಯನ್ನು ಪೂರೈಸುತ್ತಿತ್ತು. ಈ ಘಟಕವು ರಾಷ್ಟ್ರದಲ್ಲಿ ಸ್ಥಾಪಿಸಲ್ಪಟ್ಟ 200 ಘಟಕಗಳಲ್ಲಿ ಒಂದು ಸಣ್ಣ ಘಟಕವಾಗಿತ್ತು. 1947ಕ್ಕೆ ಮುಂಚೆ ಪ್ರತೀ ಸಾವಿರಕ್ಕೆ 247 ಜನರು ಮಲೇರಿಯಾದಿಂದ ನರಳುತ್ತಿದ್ದರು. ಇದು ಸಾವಿರಕ್ಕೆ 19ಕ್ಕೆ ಇಳಿಯಿತು. ಜುಲೈ ಒಂದು, 1957 ರಿಂದ ಡಿ. ಡಿ. ಟಿ. ಯನ್ನು ಸಿಂಪಡಿಸುವುದನ್ನು ನಿಲ್ಲಿಸಲಾಯಿತು. ತೀಕ್ಷ್ಣವೀಕ್ಷಣೆ (ಸರ್ವಿಲೆನ್ಸ್) ಕಾರ್ಯಕ್ರಮವು ಶುರುವಾಗಿ ಅವಶ್ಯಕತೆಯಿದ್ದೆಡೆ ಮಾತ್ರ ಡಿ. ಡಿ. ಟಿ. ಯನ್ನು ಸಿಂಪಡಿಸಲಾಗುತ್ತಿತ್ತು; 54 ಸರ್ವಿಲೆನ್ಸ್ ಕಾರ್ಯಕರ್ತರು ಪಕ್ಷಕ್ಕೊಮ್ಮೆ 14 ಜನ ಇನ್ಸ್‌ಪೆಕ್ಟರುಗಳ ಕೈಕೆಳಗೆ ಈ ಕಾರ್ಯ ಕೈಗೊಳ್ಳುತ್ತಿದ್ದರು.

1946ರ ಕೊನೆಯಲ್ಲಿ ಪ್ರಾಂತ್ಯದಲ್ಲಿ ಮಲೇರಿಯಾ ಅಧಿಕಾರಿಗಳ ಹುದ್ದೆ ಸ್ಥಾಪಿತವಾಗಿ ಸಾರ್ವಜನಿಕ ಆರೋಗ್ಯ ಇಲಾಖೆಯು 1949ನೇ ಜನವರಿ 15 ರಿಂದ ಈ ಅಧಿಕಾರಿಗಳ ಆಡಳಿತಕ್ಕೆ ಒಳಪಟ್ಟಿತು. ವ್ಯಾಕ್ಸಿನೇಟರುಗಳನ್ನು ಸ್ಯಾನಿಟರಿ (ನೈರ್ಮಲ್ಯ) ಸಹಾಯಕರೆಂದು ಹೆಸರಿಸಲಾಯಿತು. 1940–50ರ ದಶಕದಲ್ಲಿ ಸರ್ಕಾರವು ನಾಲ್ಕೂವರೆ ಲಕ್ಷ ರೂಪಾಯಿಗಳನ್ನು ಆರೋಗ್ಯ ಇಲಾಖೆಗೆ ಖರ್ಚು ಮಾಡಿತ್ತು. ಕೊಡಗಿನ ಮಲೇರಿಯ ನಿರ್ಮೂಲನಾ ಘಟಕವನ್ನು ಉತ್ತರ

ಕೊಡಗಿನ ವಿಭಾಗ, ದಕ್ಷಿಣ ಕೊಡಗಿನ ವಿಭಾಗವೆಂದು ಎರಡು ವಿಭಾಗ ಮಾಡಲಾಯಿತು. ಕೀಟಗಳ ಸಮೀಕ್ಷೆ, ಪ್ರಯೋಗ ಶಾಲೆ, ಡಿ. ಡಿ. ಟಿ. ಸಿಂಪಡಿಸುವಿಕೆ, ರೋಗಿಗಳಿಗೆ ಚಿಕಿತ್ಸೆ ನೊಡಲಾದ ಕಾರ್ಯಗಳನ್ನು ಘಟಕವು ಹೊಂದಿತ್ತು. ಜಿಲ್ಲೆಯಲ್ಲಿ 1960-61ರಲ್ಲಿ 13,425 ಜ್ವರ ಪ್ರಕರಣಗಳ ಪೈಕಿ 12,670 ಜನರ ರಕ್ತಗಳನ್ನು ಪರೀಕ್ಷಿಸಿದಾಗ ಕೇವಲ 7 ಜನರಲ್ಲಿ ಮಾತ್ರ ಮಲೇರಿಯಾ ರೋಗವು ಪತ್ತೆಯಾಗಿತ್ತು. 342 ಮಕ್ಕಳ ಗುಲ್ಮಗಳನ್ನು ಪರೀಕ್ಷಿಸಿದಾಗ 12ರಲ್ಲಿ ಮಾತ್ರ ಮಲೇರಿಯಾ ಕಂಡುಬಂದಿತ್ತು. 34,021 ಮಕ್ಕಳ ಪೈಕಿ ರಕ್ತ ಪರೀಕ್ಷೆಯಲ್ಲಿ ಕೇವಲ ಇಬ್ಬರಲ್ಲಿ ಮಾತ್ರ ಮಲೇರಿಯಾ ರೋಗವಿರುವುದು ಪತ್ತೆಯಾಗಿತ್ತು. 1959-60ರಲ್ಲಿ 148 ಮಲೇರಿಯಾ ರೋಗಿಗಳು ಚಿಕಿತ್ಸೆ ಪಡೆದಿದ್ದರೆ 1960-61 ರಲ್ಲಿ 22 ಮಲೇರಿಯಾ ರೋಗಿಗಳಿದ್ದರು. 1964ನೇ ಏಪ್ರಿಲ್‌ನಲ್ಲಿ ಕೊಡಗಿನ ಮಲೇರಿಯಾ ನಿರ್ಮೂಲನ ಘಟಕವು ಕನ್ಸಾಲಿಡೇಟ್ ಹಂತದಿಂದ 'ಮೇಂಟೆನೆನ್ಸ್' ಹಂತವನ್ನು ತಲುಪಿತು. 1989-90ರಲ್ಲಿ 38 ಮಲೇರಿಯಾ ಪ್ರಕರಣಗಳು ವರದಿಯಾಗಿದ್ದವು. ಇವರಲ್ಲಿ ಏಳು ಜನರು ಜಿಲ್ಲೆಯ ಹೊರಗಿನಿಂದ ಬಂದವರು. ನಿರೋಧಾತ್ಮಕ ಕ್ರಮವಾಗಿ 3,077 ಸಾಮೂಹಿಕ ರಕ್ತಲೇಪನ ಮತ್ತು ಸಂಪರ್ಕ ರಕ್ತ ಲೇಪನಗಳನ್ನು ತೆಗೆಯಲಾಯಿತು ; 7,187 ಮನೆಗಳಿಗೆ, 998 ದನದ ಕೊಟ್ಟಿಗೆಗಳಿಗೆ ಕ್ರಿಮಿನಾಶಕವನ್ನು ಸಿಂಪಡಿಸಲಾಯಿತು. 1990-91ರಲ್ಲಿ ಕೇವಲ ಒಂಬತ್ತು ಮಲೇರಿಯಾ ರೋಗ ಪ್ರಕರಣಗಳು ಜಿಲ್ಲೆಯ ಗಡಿಗ್ರಾಮಗಳಲ್ಲಿ ವರದಿಯಾಗಿದ್ದವು. ಇವರಲ್ಲಿ ಆರು ಮಂದಿ ಹೊರಗಿನಿಂದ ಬಂದವರಾಗಿದ್ದರು. ಆ ವರ್ಷ 50,137 ಸ್ಯಾಂಪಲ್ ರಕ್ತಗಳನ್ನು ಸಂಗ್ರಹಿಸಿ ಪರೀಕ್ಷಿಸಲಾಯಿತು.

### ಕ್ಷಯರೋಗ

ಕ್ಷಯರೋಗ ಚಿಕಿತ್ಸೆಗೆ ಕೊಡಗು ಪ್ರಾಂತ್ಯವಾಗಿದ್ದಾಗಲೇ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿತ್ತು. ಪ್ರಾಂತ್ಯದಲ್ಲಿ 1952 ರಿಂದಲೇ ಒಬ್ಬ ಪ್ರಾಂತೀಯ ಕ್ಷಯರೋಗ ಅಧಿಕಾರಿಯಿದ್ದರು. ಅವರು ಪ್ರಾಂತ್ಯದ ಎಲ್ಲಾ ಕ್ಷಯರೋಗದ ವಾರ್ಡುಗಳನ್ನು ನೋಡಿಕೊಳ್ಳುತ್ತಿದ್ದರು. ಮೊದಲು ಮಡಿಕೇರಿ, ವೀರರಾಜಪೇಟೆ ಮತ್ತು ಸೋಮವಾರಪೇಟೆಗಳಲ್ಲಿ ಕ್ಷಯ ರೋಗಿಗಳಿಗಾಗಿ ಪ್ರತ್ಯೇಕ ವಾರ್ಡುಗಳನ್ನು ತೆರೆಯಲಾಗಿತ್ತು. ಪ್ರಾಂತದ ಕ್ಷಯ ರೋಗಾಧಿಕಾರಿಯ ವಿಭಾಗವನ್ನು ಮಡಿಕೇರಿಯ ಸಿವಿಲ್ ಆಸ್ಪತ್ರೆಗೆ ಲಗತ್ತಿಸಿದ್ದು ಅದು ಜಿಲ್ಲಾ ಸರ್ಜನರ ಅಧೀನದಲ್ಲಿತ್ತು. ಮಡಿಕೇರಿಯಲ್ಲಿ 37, ವೀರರಾಜಪೇಟೆಯಲ್ಲಿ 28 ಮತ್ತು ಸೋಮವಾರಪೇಟೆ ಆಸ್ಪತ್ರೆಯಲ್ಲಿ 16 ಹಾಸಿಗೆಗಳನ್ನು ಕ್ಷಯರೋಗಿಗಳಿಗಾಗಿ ಪ್ರತ್ಯೇಕಿಸಲಾಗಿತ್ತು. ಕ್ಷಯರೋಗದ ವಿರುದ್ಧ ಬಿ.ಸಿ.ಜಿ. ವ್ಯಾಕ್ಸಿನೇಶನ್ನನ್ನು 1953ನೇ ನವೆಂಬರ್‌ನಲ್ಲಿ ಶುರು ಮಾಡಿ, 1956ರ ವೇಳೆಗೆ 28,259 ವಿದ್ಯಾರ್ಥಿಗಳನ್ನು ಪರೀಕ್ಷಿಸಿ 19,245 ಮಂದಿಗೆ ಬಿ.ಸಿ.ಜಿ. ವ್ಯಾಕ್ಸಿನೇಶನ್ ಮಾಡಲಾಗಿತ್ತು. ಇದೇ ಅವಧಿಯಲ್ಲಿ ತೋಟದ ಕಾರ್ಮಿಕರಲ್ಲಿ 30,235 ಜನರನ್ನು ಪರೀಕ್ಷಿಸಿ 13,817 ಜನಕ್ಕೆ ಬಿ. ಸಿ. ಜಿ. ವ್ಯಾಕ್ಸಿನೇಶನ್ ಮಾಡಲಾಗಿತ್ತು. ಎರಡನೇಯ ಪಂಚವಾರ್ಷಿಕ ಯೋಜನೆಯಲ್ಲಿ ಮಡಿಕೇರಿಯ ಸಿವಿಲ್ ಆಸ್ಪತ್ರೆಯಲ್ಲಿ ಒಂದು ಕ್ಷಯ ರೋಗ ಚಿಕಿತ್ಸಾ ಕೇಂದ್ರವನ್ನು ತೆರೆಯಲಾಯಿತು. ಜಿಲ್ಲೆಯಲ್ಲಿ 1960ರಲ್ಲಿ 1,578 ಕ್ಷಯರೋಗಿಗಳೂ, ಹೊರ ರೋಗಿಗಳಾಗಿಯೂ 71 ಜನ ಒಳರೋಗಿಗಳಾಗಿಯೂ ಚಿಕಿತ್ಸೆ ಪಡೆಯುತ್ತಿದ್ದರು. ಕ್ಷಯರೋಗ ವಿಭಾಗದಲ್ಲಿ 1962ರಲ್ಲಿ ಒಬ್ಬ ಸಹಾಯಕ ಸರ್ಜನರು (ಗ್ರೇಡ್ ಒಂದು), ಒಬ್ಬ ಸಹಾಯಕ ಸರ್ಜನ್ (ಗ್ರೇಡ್ ಮೂರು) ಒಬ್ಬ ಶುಶ್ರೂಷಕಿ, ಇಬ್ಬರು ಔಷಧ ವಿತರಕರೂ, ಒಬ್ಬ ಕ್ಷ-ಕಿರಣ ತಂತ್ರಜ್ಞ, ಒಬ್ಬ ಪ್ರಯೋಗಶಾಲಾ ತಂತ್ರಜ್ಞ ಮತ್ತು ನಾಲ್ಕು ಜನ ಜವಾನರಿದ್ದರು. ಜಿಲ್ಲೆಯಲ್ಲಿ 1989-90ರಲ್ಲಿ 711 ಹೊಸ ರೋಗಿಗಳನ್ನು ಪತ್ತೆ ಹಚ್ಚಲಾಗಿತ್ತು. ಅವರಲ್ಲಿ 613 ಜನ ಚಿಕಿತ್ಸೆಗೆ ಒಳಗಾಗಿದ್ದರು. ಆ ವರ್ಷ 4,306 ಜನರ ಕಫಗಳ ಮಾದರಿ ಪರೀಕ್ಷೆ ಮಾಡಲಾಗಿತ್ತು. 138 ಜನರಲ್ಲಿ ಕ್ಷಯರೋಗಾಣುಗಳಿರುವುದು ಪತ್ತೆಯಾಗಿತ್ತು; ಕ್ಷ-ಕಿರಣ ಪರೀಕ್ಷೆ ಮೂಲಕ 456 ಜನರಿಗೆ ಕ್ಷಯರೋಗವಿರುವುದು ಪತ್ತೆಯಾಗಿತ್ತು; 117 ಜನರಿಗೆ ಇತರೇ ರೀತಿಯ ಕ್ಷಯ ರೋಗವಿತ್ತು. ಕ್ಷಯರೋಗದ ವಿರುದ್ಧ ಬಿ. ಸಿ. ಜಿ. ವ್ಯಾಕ್ಸಿನೇಶನ್‌ನನ್ನು 1990-91ರಲ್ಲಿ 13,177 ಜನರಿಗೆ ಮಾಡಲಾಗಿತ್ತು.

### ಜಿಲ್ಲಾ ಕ್ಷಯರೋಗ ನಿವಾರಣಾ ಕೇಂದ್ರ, ಮಡಿಕೇರಿ

ಕೊಡಗು ಜಿಲ್ಲಾ ಕ್ಷಯರೋಗ ನಿವಾರಣಾ ಕೇಂದ್ರವು ಮಡಿಕೇರಿಯಲ್ಲಿ1967ರಲ್ಲಿ ಪ್ರಾರಂಭವಾಯಿತು. ಇಲ್ಲಿ ಕ್ಷಯ ರೋಗಿಗಳನ್ನು ಪರೀಕ್ಷಿಸಿ ಪತ್ತೆ ಮಾಡಲಾಗುತ್ತದೆ. ಹಾಗೂ ಔಷಧಿಯನ್ನು ವಿತರಣೆ ಮಾಡಲಾಗುತ್ತದೆ. ಈ ಕೇಂದ್ರವನ್ನು ಒಬ್ಬ ವೈದ್ಯಾಧಿಕಾರಿಗಳು ನೋಡಿಕೊಳ್ಳುತ್ತಿದ್ದು, ಅವರಿಗೆ ಸಹಾಯಕರಾಗಿ ಕೈಕೆಳಗೆ ಒಬ್ಬ ಅಂಕಿ ಅಂಶ ಸಂಗ್ರಾಹಕ ಇಬ್ಬರು ಪ್ರಯೋಗಶಾಲಾ ತಂತ್ರಜ್ಞರು, ಒಬ್ಬ ಕ್ಷ-ಕಿರಣ ತಂತ್ರಜ್ಞರು ಮತ್ತು ಇತರ ಸಹಾಯಕ ಸಿಬ್ಬಂದಿಯವರಿದ್ದಾರೆ.

ವೈದ್ಯಾಧಿಕಾರಿಗಳು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಅಧೀನದಲ್ಲಿ ಕೆಲಸ ಮಾಡುತ್ತಾರೆ. ಈ ಕೇಂದ್ರದಲ್ಲಿ 1990-91ರಲ್ಲಿ 381 ಜನ ಕ್ಷಯರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದರು. ಆ ವರ್ಷ 965 ಕ್ಷ-ಕಿರಣ ಪರೀಕ್ಷೆಗಳನ್ನು ಮತ್ತು 3,674 ಕಫ ಪರೀಕ್ಷೆಗಳನ್ನು ಕೇಂದ್ರ ದಲ್ಲಿ ಮಾಡಲಾಗಿತ್ತು. ಅದರ ಹಿಂದಿನ ವರ್ಷ 1989-90 ರಲ್ಲಿ 4,064 ಜನರ ಕಫ ಪರೀಕ್ಷೆಗಳನ್ನು ಮಾಡಲಾಗಿತ್ತು; 1,481 ಕ್ಷ-ಕಿರಣ ಪರೀಕ್ಷೆಗಳನ್ನು ಮಾಡಲಾಗಿತ್ತು.

**ಸಿಡುಬು**

ಜಿಲ್ಲೆಯಲ್ಲಿ ಸಿಡುಬು ರೋಗವು ಹಿಂದೆ ಒಂದು ಮಾರಕ ರೋಗವಾಗಿತ್ತು. ಸಿಡುಬಿನ ವಿರುದ್ಧ ಕೊಡಗಿನಲ್ಲಿ ವ್ಯಾಕ್ಸಿನೇಶನ್ ಹಾಕುವುದನ್ನು 1865ರಲ್ಲಿ ಪ್ರಾರಂಭಿಸ ಲಾಯಿತು. ವ್ಯಾಕ್ಸಿನೇಶನ್ ಮಾಡಲು ಕೊಡಗನ್ನು ಮೂರು ವೃತ್ತಗಳಾಗಿ ವಿಂಗಡಿಸಿ ತಿಂಗಳಿಗೆ 15 ರೂ. ವೇತನದ ಮೇಲೆ ಇಬ್ಬರು ವ್ಯಾಕ್ಸಿನೇಟರುಗಳನ್ನು ನೇಮಿಸಲಾಗಿತ್ತು. 1871-72 ರಿಂದ 1875-76ರ ವರೆವಿಗೆ ವ್ಯಾಕ್ಸಿನೇಶನ್ ಮಾಡಿಸಿಕೊಂಡವರ ಸಂಖ್ಯೆ ಈ ರೀತಿ ಇದೆ; 952, 1,628 1,810, 1,258 ಮತ್ತು 1,237. ಸಿಡುಬಿನಿಂದ 1870-71ರಲ್ಲಿ 25 ಜನರೂ, 1871-72ರಲ್ಲಿ 43 ಜನರೂ, 1872-73ರಲ್ಲಿ 391 ಜನರೂ 1873-74 ರಲ್ಲಿ 596 ಜನರೂ ಮತ್ತು 1874-75ರಲ್ಲಿ 66 ಜನರೂ ಮೃತಪಟ್ಟಿದ್ದರು. ಸಿಡುಬು (ವ್ಯಾಕ್ಸಿನೇಶನ್) ಹಾಕುವ ಇಲಾಖೆಯನ್ನು 1879ರಲ್ಲಿ ಪುನರ್ ರಚಿಸಲಾಯಿತು. ಪಟ್ಟಣ ಪ್ರದೇಶಗಳಲ್ಲಿ 1883ರ ಹೊತ್ತಿಗೆ ಸಿಡುಬು ಹಾಕಿಸಿ ಕೊಳ್ಳುವುದನ್ನು ಕಡ್ಡಾಯ ಮಾಡಲಾಗಿತ್ತು. ಪ್ರಾಂತದಲ್ಲಿ 1888 ರಿಂದ 1906ರ ವರೆವಿಗೆ ಸ್ಯಾನಿಟರಿ ಬೋರ್ಡೊಂದು ಕೆಲಸ ಮಾಡುತ್ತಿತ್ತು. ಸಾರ್ವಜನಿಕ ಆರೋಗ್ಯ ಇಲಾಖೆಯು ಹಳ್ಳಿಗಳಲ್ಲಿ ಹಾಗೂ ಶಾಲಾ ಮಕ್ಕಳಿಗೆ ಸಿಡುಬು ದಾಕು ಹಾಕುವ ಜವಾಬ್ದಾರಿಯನ್ನು ಈ ಬೋರ್ಡ್ ಹೊಂದಿತ್ತು. ಸಿಡುಬು ರೋಗಕ್ಕೆ 1952 ರಿಂದ 1956ರ ವರೆವಿಗೆ 160 ಜನರು ಗುರಿಯಾಗಿದ್ದರು. ಅವರಲ್ಲಿ 45 ಜನರು ಸತ್ತಿದ್ದರು. ಬಹುತೇಕ ರೋಗಿಗಳು ಹೊರಗಿನಿಂದ ಬಂದಿದ್ದ ಕಾರ್ಮಿಕರಾಗಿದ್ದರೆಂದು ವರದಿಯಾಗಿದೆ. ಈ ರೋಗದಿಂದ ಜಿಲ್ಲೆಯಲ್ಲಿ 1971 ರಿಂದೀಚೆಗೆ ಯಾರೂ ಸತ್ತಿದ್ದು ವರದಿ ಯಾಗಿಲ್ಲ.

**ಕುಷ್ಠರೋಗ**

ಕೊಡಗು ಜಿಲ್ಲೆಯಲ್ಲಿ ಕುಷ್ಠರೋಗವು ಕ್ಷಯ, ಮಲೇರಿಯಾ ರೋಗಗಳಂತೆ ಹೆಚ್ಚು ಭಯೋತ್ಪಾದಕ ಸಾಂಕ್ರಾಮಿಕ ರೋಗವಾಗಿಲ್ಲ. ಆದರೂ ತೋಟಗಳ ಕೆಲಸ ಗಳಿಗೆ ಹೊರಗಡೆಯಿಂದ ಕಾರ್ಮಿಕರು ಬರುವುದರಿಂದ ಈ ಸೋಂಕು ಅಲ್ಲಲ್ಲೇ ಕಂಡು ಬರುತ್ತಿದೆ. ರಾಜ್ಯದ ಜಿಲ್ಲೆಗಳಲ್ಲಿ ಕೊಡಗು ಜಿಲ್ಲೆಯಲ್ಲಿ ಈ ರೋಗವು ತುಂಬಾ ಕಡಿಮೆ ಪ್ರಮಾಣದಲ್ಲಿದೆ. ಕುಷ್ಠರೋಗ ನಿವಾರಣಾ ಕಾರ್ಯ ಕ್ರಮವು ಈ ಜಿಲ್ಲೆಯಲ್ಲಿ ಏಪ್ರಿಲ್, 1987ರಲ್ಲಿ ಪ್ರಾರಂಭ ವಾಯಿತು. ರಾಷ್ಟ್ರೀಯ ಕುಷ್ಠರೋಗ ನಿವಾರಣಾ ಕಾರ್ಯ ಕ್ರಮದಡಿಯಲ್ಲಿ ಮಡಿಕೇರಿಯ ಕೊಡಗು ಜಿಲ್ಲಾ ಕುಷ್ಠರೋಗ ನಿವಾರಣಾ ಅಧಿಕಾರಿಯೊಬ್ಬರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕೈಕೆಳಗೆ ಕೆಲಸ ಮಾಡುತ್ತಿದ್ದಾರೆ. ಅವರ ಕಚೇರಿಯಲ್ಲಿ ಅವರ ಕೈಕೆಳಗೆ ಸಹಾಯಕ ರಾಗಿ ಒಬ್ಬ ಹಿರಿಯ ವೈದ್ಯೇತರ ಮೇಲ್ವಿಚಾರಕರೂ, ಒಬ್ಬ ಅಂಕಿ ಅಂಶ ಸಹಾಯಕರೂ, ಒಬ್ಬೊಬ್ಬ ಪ್ರಯೋಗಶಾಲಾ ತಜ್ಞ, ಆರೋಗ್ಯ ಶಿಕ್ಷಕ, ಕಿರಿಯ ವೈದ್ಯೇತರ ಮೇಲ್ವಿಚಾರಕ, ಆರೋಗ್ಯ ಶಿಕ್ಷಕ,ಕಿರಿಯ ವೈದ್ಯೇತರ ಮೇಲ್ವಿಚಾರಕ, ಪ್ರಥಮ ಮತ್ತು ದ್ವಿತೀಯ ದರ್ಜೆ ಕಚೇರಿ ಸಹಾಯಕರು ಇದ್ದಾರೆ. ಜಿಲ್ಲೆಯಲ್ಲಿ ಹೆಬ್ಬಾಲೆ, ಸೋಮವಾರಪೇಟೆ, ನಾಪೋಕ್ಲು ಮತ್ತು ಹುದಿಕೇರಿಗಳಲ್ಲಿ ಕುಷ್ಠರೋಗ ಎಸ್.ಇ.ಟಿ. ಕೇಂದ್ರ ಗಳಿವೆ. ಜಿಲ್ಲೆಯಲ್ಲಿ ಯಾವುದೇ ಖಾಸಗೀ ಸಂಸ್ಥೆಯು ಕುಷ್ಠರೋಗ ನಿವಾರಣಾ ಕೆಲಸ ಮಾಡುತ್ತಿಲ್ಲವೆಂದು ತಿಳಿದು ಬಂದಿದೆ.

ಕೊಡಗು ಜಿಲ್ಲೆಯಲ್ಲಿ ಇತ್ತೀಚಿಗಿನ ವರ್ಷಗಳಲ್ಲಿ ನಡೆದ ಸಮೀಕ್ಷೆ, ರೋಗಿಗಳ ಪತ್ತೆ ಹಾಗೂ ಚಿಕಿತ್ಸೆ ಪಡೆಯುತ್ತಿರು ವವರ ವಿವರಗಳನ್ನು ಈ ಮುಂದಿನ ಪಟ್ಟಿಯಲ್ಲಿ ಕೊಡಲಾಗಿದೆ.

| ವರ್ಷಗಳು | ವರ್ಷಾರಂಭದಲ್ಲಿದ್ದ ರೋಗಿಗಳು | ಹೊಸ ರೋಗಿಗಳು | ಗುಣವಾದವರು | ಕಡಿಮೆ ಯಾದವರು* | ಹಾಲಿ ಚಿಕಿತ್ಸೆ ಪಡೆಯು ತ್ತಿರುವವರ ಸಂಖ್ಯೆ |
|---|---|---|---|---|---|
| 1987–88 | 84 | 63 | 50 | 2 | 95 |
| 1988–89 | 95 | 30 | 33 | 1 | 91 |
| 1989–90 | 91 | 24 | 50 | — | 65 |
| 1990–91 | 65 | 18 | 17 | 17 | 49 |

* ವಲಸೆ, ಸಾವು ಹಾಗೂ ಇತರ ಕಾರಣಗಳಿಂದ ಕಡಿಮೆಯಾದ ಸಂಖ್ಯೆ.

**ಪ್ಲೇಗು :** ದಕ್ಷಿಣ ಕೊಡಗಿನಲ್ಲಿ ಪ್ಲೇಗು 1901–1902 ರಲ್ಲಿ ತುಂಬಾ ಭೀಕರವಾಗಿತ್ತೆಂದು ವರದಿಯಾಗಿದೆ. ಆಗ ಈ ರೋಗವನ್ನು ನಿಯಂತ್ರಿಸಲು ಸಿವಿಲ್ ಸರ್ಜನರಾಗಿದ್ದ ಡಾ|| ಬ್ರೈನ್ ಎಂಬವರು 1908ರ ವರೆವಿಗೂ ಅಧಿಕಾರಿಗಳಾ ಗಿದ್ದರು. ವೀರರಾಜಪೇಟೆ ಮತ್ತು ಇತರ ಕಡೆಗಳಲ್ಲಿ 1902 ರಿಂದ 1905ರ ವರೆವಿಗೂ ಪ್ಲೇಗು ಹರಡಿದ್ದು ಅದನ್ನು ನಿಯಂತ್ರಿಸಲು ಕಮೀಷನರಾಗಿದ್ದ ಡೇವಿಡ್‌ಸನ್ ಮತ್ತು ಪಿ. ಎಲ್. ಮುಕ್ರಿ ಎಂಬವರು ಶ್ಲಾಘ್ಯ ಸೇವೆಯನ್ನು ಸಲ್ಲಿಸಿದ್ದಾರೆ. 1898 ರಿಂದ 1901ರ ವರೆವಿಗೂ ಅಪರೇಷನ್ ಕ್ಯಾಂಪೊಂದನ್ನು ತೆರೆಯಲಾಗಿತ್ತು. ಮಲೇರಿಯಾ ನಿರ್ಮೂಲನ ಕಾರ್ಯಕ್ರಮದಡಿಯಲ್ಲಿ ಡಿ. ಡಿ. ಟಿ. ಸಿಂಪಡಿಸುವುದನ್ನು ಕೈಕೊಂಡಾಗ ಪ್ಲೇಗಿನ ಉಪದ್ರವವು ಕಡಿಮೆಯಾಗಿ ಕ್ರಮೇಣ ಸಂಪೂರ್ಣವಾಗಿ ನಿಂತುಹೋಯಿತು.

**ಕಾಲರಾ :** ಕಾಲರಾ ಸಾಂಕ್ರಾಮಿಕ ಬೇನೆಯು ಕೊಡಗಿನಲ್ಲಿ ಹಿಂದಿನಿಂದಲೂ ಇದೆ. 1989–90ರಲ್ಲಿ 206 ಜನರಲ್ಲಿ ಕರಳು ಬೇನೆ ಕಂಡು ಬಂದು 21 ಜನರು ಮರಣ ಹೊಂದಿದ್ದಾರೆ. ಇವರಲ್ಲಿ ಮೂರು ಜನರಿಗೆ ಕಾಲರಾರೋಗ ತಗಲಿತ್ತೆಂದು ದೃಢ ಪಟ್ಟಿದೆ. 5,887 ಜನರಿಗೆ ಕಾಲರಾ ನಿರೋಧ ಚುಚ್ಚುಮದ್ದನ್ನು ಹಾಕಲಾಗಿದೆ. 23 ಜನರ ಮಲ ಇತ್ಯಾದಿಗಳನ್ನು ಪರೀಕ್ಷಿಸಲಾಯಿತು. ಕೊಡಗಿನಲ್ಲಿ ಹಿಂದೆ ಜನರು ಹೆಚ್ಚಾಗಿ ರಕ್ತಹೀನತೆ, ಇನ್‌ಫ್ಲುಯೆಂಜ, ಕಜ್ಜಿ, ಅಮಿಬಿಕ್ ಬೇಧಿ, ಹಲ್ಲಿನ ರೋಗಗಳು, ಕಣ್ಣಿನ ರೋಗಗಳು ಮತ್ತು ಜೀರ್ಣಾಂಗ ರೋಗಗಳಿಗೆ ಒಳಗಾಗುತ್ತಿದ್ದರು.

ಕೊಡಗು ಜಿಲ್ಲೆಯಲ್ಲಿ 1971 ರಿಂದ 1986ರ ವರೆಗೆ ವಿವಿಧ ಕಾರಣ/ರೋಗಗಳಿಂದ ಸತ್ತವರ ಸಂಖ್ಯೆಗಳ ಪಟ್ಟಿಯನ್ನು ಪುಟ 758–759 ರಲ್ಲಿ ಕೊಡಲಾಗಿದೆ.

## ಆರೋಗ್ಯ ಸಂಸ್ಥೆಗಳು

### ಜಿಲ್ಲಾ ಆಸ್ಪತ್ರೆ ಮಡಿಕೇರಿ

ಜಿಲ್ಲಾ ಆಸ್ಪತ್ರೆ ಮಡಿಕೇರಿಯು 1863ರಲ್ಲಿ ಮಾರುಕಟ್ಟೆ (ಮಾರ್ಕೆಟ್)ಯ ಬಳಿ ಒಂದು ಹಾಸಿಗೆಯ ಆಸ್ಪತ್ರೆಯಾಗಿ ಪ್ರಾರಂಭವಾಯಿತು. ಆ ವರ್ಷ ಆಸ್ಪತ್ರೆಯಲ್ಲಿ 166 ಜನ ಒಳರೋಗಿಗಳು ಚಿಕಿತ್ಸೆ ಪಡೆದಿದ್ದರೆ, ಮುಂದೆ 1874–75 ರಲ್ಲಿ 299 ಒಳರೋಗಿಗಳು, 5,416 ಜನ ಹೊರರೋಗಿಗಳು ವೈದ್ಯಕೀಯ ಸೌಲಭ್ಯ ಪಡೆದಿದ್ದರು. ಮರುವರ್ಷ ಅಂದರೆ 1864ರಲ್ಲಿ ಈ ಆಸ್ಪತ್ರೆಯನ್ನು ಈಗಿರುವ ಸ್ಥಳಕ್ಕೆ ಸ್ಥಳಾಂತರಿಸಲಾಯಿತು. ಆ ಕಾಲದಲ್ಲಿ ಆಸ್ಪತ್ರೆಯ ಸಮಿತಿಯೊಂದಿದ್ದು ಆಸ್ಪತ್ರೆಯನ್ನು ಮುಂದುವರೆಸಿಕೊಂಡು ಹೋಗಲು ಹಣ ಸಂಗ್ರಹಣೆ ಮಾಡುತ್ತಿತ್ತು. ಈ ಆಸ್ಪತ್ರೆಯಲ್ಲಿ 1880ರಲ್ಲಿ 303 ಜನ ಒಳರೋಗಿಗಳು, 6,756 ಜನ ಹೊರರೋಗಿಗಳೂ ಚಿಕಿತ್ಸೆ ಪಡೆದಿದ್ದರೆ, 1881ರಲ್ಲಿ 5,100 ಜನರು ಔಷಧೋಪಚಾರ ಪಡೆದಿದ್ದರು. ಮುಂದೆ 1886ರಲ್ಲಿ ಇವರ ಸಂಖ್ಯೆ 15,565 ಏರಿತ್ತು. ಆದರೆ 1900ರಲ್ಲಿ ಈ ಆಸ್ಪತ್ರೆಯಲ್ಲಿ 561 ಜನ ಒಳರೋಗಿಗಳು, 8,812 ಜನ ಹೊರರೋಗಿಗಳು ಮಾತ್ರ ವೈದ್ಯಕೀಯ ಸೌಲಭ್ಯ ಪಡೆದಿದ್ದರು. ಮೊದಲಿಗೆ ಮದರಾಸು ಸರ್ಕಾರದಿಂದ ವೈದ್ಯರ ಸೇವೆಯನ್ನು ಎರವಲು ಪಡೆಯಲಾಗುತ್ತಿತ್ತು. ಆಸ್ಪತ್ರೆಯು 1881ರ ವರೆಗೂ ರೆಜಿಮೆಂಟಲ್ ವೈದ್ಯಾಧಿಕಾರಿ ಅಧೀನದಲ್ಲಿತ್ತು. ಈ ಆಸ್ಪತ್ರೆಯನ್ನು ಮಡಿಕೇರಿ ಪುರಸಭೆಗೆ 1883ರಲ್ಲಿ ವಹಿಸಿಕೊಡಲಾಯಿತು. ಮತ್ತೆ 1908ರಲ್ಲಿ ಪುರಸಭೆಯಿಂದ ಸರ್ಕಾರವೇ ಹಿಂದಕ್ಕೆ ಪಡೆಯಿತು. ಭಾರತ ಸರ್ಕಾರವು 1904ರಲ್ಲಿ ಜಿಲ್ಲೆಯ ಆಸ್ಪತ್ರೆಗಳ ಅಭಿವೃದ್ಧಿಗೆ ನೀಡಿದ್ದ 1,75 ಲಕ್ಷ ರೂಪಾಯಿಗಳಲ್ಲಿ ಆಸ್ಪತ್ರೆಯ ಜಾಗವನ್ನು ವಿಸ್ತರಿಸಿ ಸುತ್ತಲೂ ಕಾಂಪೌಂಡ್ ಹಾಕಲಾಯಿತು. ಮುಂದೆ 1907ರಲ್ಲಿ 67,000 ರೂಪಾಯಿಗಳನ್ನು ಖರ್ಚು ಮಾಡಿ ಹೊಸ ಕಟ್ಟಡವನ್ನು ನಿರ್ಮಿಸಿ ಹಾಸಿಗೆಗಳ ಸಂಖ್ಯೆಯನ್ನು 70ಕ್ಕೆ ಹೆಚ್ಚಿಸಲಾಯಿತು. ಕ್ಷ–ಕಿರಣ ಯಂತ್ರವನ್ನು 1940ರಲ್ಲಿ ಸ್ಥಾಪಿಸಲಾಯಿತು. ಹೊರ ರೋಗಿಗಳ ದೈನಂದಿನ ಸರಾಸರಿ ಸಂಖ್ಯೆ 1951–52ರಲ್ಲಿ 152 ಆಗಿದ್ದು ಆ ವರ್ಷ

222 ಜನ ಒಳರೋಗಿಗಳ ಚಿಕಿತ್ಸೆ ಪಡೆದಿದ್ದರು. ಹಾಸಿಗೆಗಳ ಸಂಖ್ಯೆ 1957ರಲ್ಲಿ 251 ಇತ್ತು.

ನವೆಂಬರ್ 1953ರಲ್ಲಿ ಸಿವಿಲ್ ಆಸ್ಪತ್ರೆಯ ಸಹಾಯಕ ಸರ್ಜನ್‌ರ ಹುದ್ದೆಯನ್ನು ಪತ್ರಾಂಕಿತರಾಗಿ ಮಾಡಿ ಅಧೀಕ್ಷಕ ರೆಂದು ಕರೆಯಲಾಯಿತು. ಜಿಲ್ಲಾ ಆಸ್ಪತ್ರೆಯ ಕಟ್ಟಡಗಳನ್ನು ವಿವಿಧ ಹಂತಗಳಲ್ಲಿ ಕಟ್ಟಲಾಗಿದೆ. 1907ರಲ್ಲಿ 67,000 ರೂಪಾಯಿಗಳ ವೆಚ್ಚದಲ್ಲಿ ಒಂದು ಹೊಸ ಕಟ್ಟಡವನ್ನು ನಿರ್ಮಿಸಲಾಯಿತು. ಸಿದ್ದಾಪುರದ ರಾಣಿಗೋಡ್ ಎಸ್ಟೇಟಿನ ದಿ. ಶ್ರೀ ಜಾನ್ ವಿರಡ್ ಎಂಬವರು 1955ರಲ್ಲಿ 5 ಕೊಠಡಿ ಗಳ ಒಂದು ವಿಶೇಷ ವಾರ್ಡನ್ನು ಕಟ್ಟಿಸಿ ಕೊಟ್ಟರು. ಆಸ್ಪತ್ರೆಯ ಈಗಿನ ಹೊಸ ಕಟ್ಟಡವನ್ನು 1989ರಲ್ಲಿ ಮುಗಿಸ ಲಾಗಿದೆ. ಇದು ಮೂರು ಹಂತಗಳ ಕಟ್ಟುವಿಕೆಯಲ್ಲಿ ಮೊದಲನೇ ಹಂತವಾಗಿದೆ.

ಸಿವಿಲ್ ಆಸ್ಪತ್ರೆಗೆ ಸೇರಿದಂತೆ ನರ್ಸಿಂಗ್ ಸ್ಕೂಲೊಂದು 1959ರಲ್ಲಿ ಪ್ರಾರಂಭವಾಯಿತು. ಮೊದಲನೇ ತಂಡದಲ್ಲಿ 20 ಜನರೂ ಎರಡನೇ ತಂಡದಲ್ಲಿ 10 ಜನರೂ ತರಬೇತಿ ಪಡೆದರು. ಆಗ 80 ರೂಪಾಯಿ ವಿದ್ಯಾರ್ಥಿ ವೇತನ ಕೊಡ ಲಾಗುತ್ತಿತ್ತು. ನಂತರ ಈ ತರಬೇತಿ ಕೇಂದ್ರವನ್ನು ನಿಲ್ಲಿಸ ಲಾಯಿತು. ಔಷಧಿ ವಿತರಕರ ತರಬೇತಿ ಕೇಂದ್ರವೊಂದನ್ನು 1960ರಲ್ಲಿ ಸ್ಥಾಪಿಸಲಾಗಿತ್ತು. ಮೊದಲ ಮೂರು ತಂಡ ಗಳಲ್ಲಿ ಕ್ರಮವಾಗಿ 7, 10 ಮತ್ತು 6 ಜನರು ತರಬೇತಿ ಪಡೆದಿದ್ದರು. (ಈಗ ಅದು ನಿಂತು ಹೋಗಿದೆ). ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ತರಬೇತಿ ಕೇಂದ್ರ ವೊಂದು 1960ರಲ್ಲಿ ಪ್ರಾರಂಭವಾಗಿ ಈಗಲೂ ಮುಂದು ವರೆಯುತ್ತಿದೆ. ಮೊದಲಿಗೆ ಪ್ರತೀಯೊಂದು ತಂಡದಲ್ಲೂ ತರಬೇತಿ ಪಡೆಯುವವರ ಸಂಖ್ಯೆಯನ್ನು 20ಕ್ಕೆ ಸೀಮಿತ ಗೊಳಿಸಲಾಗಿತ್ತು. ನಂತರ 50ಕ್ಕೆ ಹೆಚ್ಚಿಸಲಾಯಿತು. ಈಗ 30ಕ್ಕೆ ಸೀಮಿತಗೊಳಿಸಲಾಗಿದೆ. ತರಬೇತಿ ಕೇಂದ್ರವು ಶುರು ವಾದಾಗ ಒಬ್ಬ ಸಿಸ್ಟರ್ ಟ್ಯೂಟರ್, ಒಬ್ಬ ಜವಾನ ಮಾತ್ರ ಇದ್ದರು. ಈಗ ಈ ತರಬೇತಿ ಕೇಂದ್ರದ ಸಿಬ್ಬಂದಿ ವರ್ಗದಲ್ಲಿ ಒಬ್ಬ ಪತ್ರಾಂಕಿತ ಪ್ರಾಚಾರ್ಯರು, ಮೂರು ಎರಡನೇ ಶ್ರೇಣಿಯ ಶುಶ್ರೂಷಕ ಅಧೀಕ್ಷಕರು, ಒಬ್ಬ ಹಿರಿಯ ಆರೋಗ್ಯ ಪರಿವೀಕ್ಷಕರು, ಒಬ್ಬ ಶುಶ್ರೂಷಾ ದಾದಿ, ಮೂರು ಜನ ಹಿರಿಯ ಮಹಿಳಾ ಆರೋಗ್ಯ ಸಹಾಯಕಿಯರು ಮತ್ತು ಒಬ್ಬೊಬ್ಬ ಅಡಿಗೆಯವ, ಜವಾನ, ನೈರ್ಮಲ್ಯಗಾರ ಮತ್ತು ಆಯಾಗಳಿದ್ದಾರೆ.

ಸಿವಿಲ್ ಆಸ್ಪತ್ರೆ ಮಡಿಕೇರಿಯಲ್ಲಿ 1964ರಲ್ಲಿ 22 ಜನ ವೈದ್ಯರೂ 26 ಜನ ನರ್ಸ್‌ಗಳೂ, 12 ಜನ ಔಷಧ ವಿತರ ಕರೂ, 20 ಜನ ದಾದಿಯರು (ಮಿಡ್‌ವೈಫ್) ನಾಲ್ಕು ಜನ ತಂತ್ರಜ್ಞರು, ಏಳು ಜನ ಗುಮಾಸ್ತರೂ, ಒಬ್ಬ ಮೂರನೇ ವರ್ಗದ ಗುಮಾಸ್ತ ಮತ್ತು 101 ಜನ ನಾಲ್ಕನೇ ವರ್ಗದ ನೌಕರರಿದ್ದರು.

ಮಡಿಕೇರಿಯ ಸಿವಿಲ್ ಆಸ್ಪತ್ರೆಯಲ್ಲಿ 1963ರಲ್ಲಿ 84,315 ಜನ ಹೊರರೋಗಿಗಳೂ (ದೈನಿಕ ಸರಾಸರಿ 231), 61,695 ಜನ ಒಳರೋಗಿಗಳೂ (ದೈನಿಕ ಸರಾಸರಿ 169) ಚಿಕಿತ್ಸೆ ಪಡೆದಿದ್ದರು, 119 ದೊಡ್ಡ 2,751 ಸಣ್ಣ ಶಸ್ತ್ರಚಿಕಿತ್ಸೆಗಳು ನಡೆಸಲ್ಪಟ್ಟವು. ಅದೇ ವರ್ಷ (1963–64) 22,445 ಪ್ರಯೋಗಶಾಲಾ ಪರೀಕ್ಷೆಗಳು ನಡೆ ಸಲ್ಪಟ್ಟವು. 1,275 ಜನ ಕ್ಷಯರೋಗಿಗಳು (ಒಳರೋಗಿ ಗಳು 108) ಚಿಕಿತ್ಸೆ ಪಡೆದಿದ್ದರು ; 15 ಜನ ಮಧುಮೇಹ ರೋಗಕ್ಕೂ, 480 ಜನ ಹಲ್ಲು ಚಿಕಿತ್ಸೆಗೂ (ಒಳರೋಗಿಗಳು 15), 403 ಜನ ನೇತ್ರ ಚಿಕಿತ್ಸೆಗೂ (ಒಳರೋಗಿಗಳು 3), 615 ಜನ ಕಿವಿ, ಗಂಟಲು, ಮೂಗು ರೋಗಗಳಿಗೂ (ಒಳ ರೋಗಿಗಳು 36), 21 ಜನ ಗುಹ್ಯರೋಗಗಳಿಗೂ ಚಿಕಿತ್ಸೆ ಪಡೆದಿದ್ದರು; 566 ಕ್ಷ–ಕಿರಣ ಚಿತ್ರಗಳನ್ನು ತೆಗೆಯ ಲಾಗಿತ್ತು. ಈಗ (1991ರಲ್ಲಿ) ಆಸ್ಪತ್ರೆಯಲ್ಲಿರುವ ಹಾಸಿಗೆ ಗಳ ಸಂಖ್ಯೆ 410. ಆಸ್ಪತ್ರೆಯಲ್ಲಿ 1990ರಲ್ಲಿ 6,808 ಒಳರೋಗಿಗಳು, 1,41,942 ಹೊರರೋಗಿಗಳು (ಹೊಸ ಮತ್ತು ಹಳೆಯ) ಚಿಕಿತ್ಸೆ ಪಡೆದಿದ್ದರು, 1,002 ಹೆರಿಗೆ ಗಳನ್ನು ಮಾಡಲಾಗಿತ್ತು. 1,008 ಶಸ್ತ್ರಚಿಕಿತ್ಸೆಗಳನ್ನು ನಡೆ ಸಲಾಗಿತ್ತು, 4,826 ಕ್ಷ–ಕಿರಣ ಚಿತ್ರಣ ಮತ್ತು ಸ್ಕ್ರೀನಿಂಗ್‌ಗಳನ್ನು ಮಾಡಲಾಗಿತ್ತು, 207 ಕ್ಷಯರೋಗಿ ಗಳು ಚಿಕಿತ್ಸೆ ಪಡೆಯುತ್ತಿದ್ದರು. ಕುಟುಂಬ ಕಲ್ಯಾಣಕಾರ್ಯ ಕ್ರಮದಲ್ಲಿ 1990–91ರಲ್ಲಿ 8 ವ್ಯಾಸೆಕ್ಟಮಿ ಮತ್ತು 208 ಟ್ಯುಬೆಕ್ಟಮಿ ಶಸ್ತ್ರಚಿಕಿತ್ಸೆಗಳನ್ನು ಮಾಡಲಾಗಿತ್ತು. 192 ವಂಕಿಗಳನ್ನು ಅಳವಡಿಸಲಾಗಿತ್ತು. ಅದೇ ವರ್ಷ ಮಕ್ಕಳ ಮತ್ತು ಸ್ತ್ರೀಯರ ಕಾರ್ಯಕ್ರಮದಲ್ಲಿ 950 ಡಿಪಿಟಿ, 604 ಡಿ ಮತ್ತು ಟಿ 791 ತಾಯಂದಿರಿಗೆ ಟಿ.ಟಿ. ರೋಗ ನಿರೋಧ ಲಸಿಕೆಯನ್ನು ಹಾಕಲಾಗಿತ್ತು. ಜಿಲ್ಲಾ ಆಸ್ಪತ್ರೆಯಲ್ಲಿ ಸಾಮಾನ್ಯ ಶಸ್ತ್ರ ಚಿಕಿತ್ಸೆ, ಸಾಮಾನ್ಯ ಔಷಧ (ಜನರಲ್ ಮೆಡಿಸಿನ್), ಕಿವಿ, ಗಂಟಲು, ಮೂಗು ಚಿಕಿತ್ಸೆ, ನೇತ್ರ ಚಿಕಿತ್ಸೆ, ಅಸ್ಥಿ ಚಿಕಿತ್ಸೆ, ಮಕ್ಕಳ ಚಿಕಿತ್ಸೆ, ಚರ್ಮ ಚಿಕಿತ್ಸೆ, ಸ್ತ್ರೀಯರ ಚಿಕಿತ್ಸಾ ವಿಭಾಗಗಳಿವೆ. ಕ್ಷ–ಕಿರಣ, ಪ್ರಯೋಗ

ಈ ಕೆಳಗಿನ ಪಟ್ಟಿಯಲ್ಲಿ ಕೊಡಗು ಜಿಲ್ಲೆಯಲ್ಲಿ 1971 ರಿಂದ 1986ರ

| ರೋಗಗಳು | 1971 | 1972 | 1973 | 1974 | 1975 | 1976 | 1977 |
|---|---|---|---|---|---|---|---|
| ಕಾಲರಾ | 4 | 2 | 3 | — | 1 | 2 | — |
| ಮಲೇರಿಯಾ | 47 | 36 | 5 | — | 12 | 33 | 20 |
| ವಿಷಮ ಶೀತಜ್ವರ | 5 | 9 | 3 | 4 | 24 | 9 | 4 |
| ಬೇರೆ ಜ್ವರಗಳು | 85 | 291 | 156 | 39 | 157 | 68 | 8 |
| ಕರುಳುಬೇನೆ (ಬೇಧಿ, ಆಮಶಂಕೆ) | 19 | 35 | 21 | 17 | 16 | 40 | 38 |
| ಉಸಿರಾಟದ ರೋಗಗಳು | 13 | 38 | 30 | 15 | 22 | 48 | 44 |
| ಕ್ಷಯ | 20 | 31 | 5 | 3 | 37 | 18 | 18 |
| ಕುಷ್ಟರೋಗ | — | 4 | — | — | — | — | 1 |
| ತಾಯಂದಿರ ಮರಣ (ಹೆರಿಗೆ ಕಾಲದಲ್ಲಿ) | 4 | 19 | — | — | 3 | 4 | 4 |
| ಆತ್ಮಹತ್ಯೆ | 9 | 3 | 5 | 2 | 8 | 3 | 9 |
| ನೀರಿನಲ್ಲಿ ಮುಳುಗುವಿಕೆ | 4 | 1 | 2 | 4 | 4 | 6 | 6 |
| ಗಾಯಗಳು ಮತ್ತು ಆಕಸ್ಮಿಕಗಳು | 10 | 19 | 7 | 6 | 12 | 9 | — |
| ಕಾಡುಪ್ರಾಣಿಗಳಿಂದ ಮರಣ | 3 | 1 | — | 1 | — | — | — |
| ಹಾವಿನ ಕಡಿತ | — | — | — | — | 1 | 1 | 3 |
| ಹುಚ್ಚುನಾಯಿ ಕಡಿತ | 1 | 1 | 1 | — | 1 | — | — |
| ಧನುರ್ವಾಯು | 5 | — | 5 | 3 | 7 | 1 | — |
| ಗಂಟಲುಮಾರಿ (ಡಿಫ್ತಿರಿಯಾ) | 1 | 7 | 4 | 3 | — | — | — |
| ನಾಯಿ ಕೆಮ್ಮು | 2 | — | — | 7 | — | — | — |
| ಪೋಲಿಯೋ | — | — | — | — | 1 | — | — |
| ಹೃದಯರೋಗಗಳು | — | — | 6 | 4 | 1 | 6 | 3 |
| ಬೇರೆ ಕಾರಣಗಳು | 467 | 721 | 556 | 277 | 692 | 907 | 888 |
| ಕಾರಣಗಳು ಗೊತ್ತಿಲ್ಲದ್ದು | 5 | 10 | 8 | 19 | 28 | 107 | 70 |
| ಜಿಲ್ಲೆಯ ಮೊತ್ತ | 704 | 1,228 | 817 | 404 | 1,027 | 12,62 | 1,116 |

ಜಿಲ್ಲೆಯಲ್ಲಿ ಪ್ಲೇಗು, ಸಿಡುಬುಗಳ ಪ್ರಕರಣಗಳು ಇಲ್ಲ.

ಆಧಾರ : ಜನನ, ಮರಣ ಮತ್ತು ಮದುವೆಗಳು ಮುಖ್ಯ ರಿಜಿಸ್ಟ್ರಾರ್‌ರವರ ಕಚೇರಿ, ಬೆಂಗಳೂರು

ವರೆಗೂ ವಿವಿಧ ರೋಗಗಳಿಂದ ಸತ್ತವರ ಸಂಖ್ಯೆಯನ್ನು ಕೊಡಲಾಗಿದೆ.

| 1978 | 1979 | 1980 | 1981 | 1982 | 1983 | 1984 | 1985 | 1986 |
|---|---|---|---|---|---|---|---|---|
| — | — | — | — | 13 | — | 6 | 3 | 12 |
| 18 | 9 | 2 | — | — | 1 | 4 | 1 | — |
| 1 | 7 | — | 5 | 2 | — | — | 1 | 2 |
| 3 | 2 | 24 | 52 | 49 | 133 | 20 | 23 | 19 |
| 33 | 20 | 45 | 23 | 9 | 24 | 9 | 17 | 10 |
| 55 | 29 | 35 | 5 | 1 | 16 | 7 | — | 26 |
| 12 | 17 | 16 | — | 7 | 11 | 20 | 6 | 5 |
| 1 | 2 | — | 1 | — | 1 | 6 | — | 1 |
| 4 | 9 | 7 | 5 | 5 | — | 4 | 6 | 3 |
| 10 | 10 | 34 | 18 | 13 | 29 | 15 | 14 | 14 |
| 6 | 9 | 5 | 1 | 10 | 3 | 12 | 11 | 8 |
| 10 | 35 | 35 | 17 | 23 | 22 | 26 | 16 | 27 |
| — | 1 | — | — | — | — | — | — | — |
| 2 | 2 | 2 | 2 | 1 | 4 | 4 | 5 | 5 |
| 1 | 3 | 1 | — | — | — | 4 | — | 2 |
| 2 | — | 1 | 2 | 2 | 3 | 4 | 2 | 2 |
| — | 2 | — | 1 | — | 1 | 2 | 1 | — |
| — | — | — | — | — | — | 2 | — | — |
| 1 | — | 3 | — | — | — | — | — | — |
| 4 | 1 | — | 6 | 4 | — | — | — | — |
| 738 | 957 | 38 | 689 | 564 | 677 | 1,163 | 857 | 743 |
| 96 | 112 | 33 | 84 | 266 | 255 | 104 | 437 | 325 |
| 997 | 1,227 | 281 | 911 | 969 | 1,180 | 1,412 | 1,400 | 1,204 |

ಶಾಲೆ, ರಕ್ತನಿಧಿಗಳ ಸೌಲಭ್ಯಗಳೂ ಇವೆ. ಜಿಲ್ಲಾ ಸರ್ಜನ್‌ರು ಆಸ್ಪತ್ರೆಯ ಆಡಳಿತವನ್ನು ನೋಡಿಕೊಳ್ಳುತ್ತಾರೆ. ಅವರಿಗೆ ಸಹಾಯಕರಾಗಿ, ಒಬ್ಬ ಮಹಿಳಾ ಸರ್ಜನ್‌ರೂ 9 ಜನ ಆರೋಗ್ಯಾಧಿಕಾರಿಗಳೂ (ಒಂದನೇ ಶ್ರೇಣಿ), 14 ಜನ ಸಹಾಯಕ ಆರೋಗ್ಯಾಧಿಕಾರಿಗಳೂ, ಒಬ್ಬ ಶುಶ್ರೂಷಾ ಅಧೀಕ್ಷಕರು (ಮೊದಲನೇ ಶ್ರೇಣಿ), ಒಬ್ಬ ಕಾರ್ಯದರ್ಶಿಗಳು ಮತ್ತು 216 ಮಂದಿ ವಿವಿಧ ದರ್ಜೆಯ ಹಾಗೂ ಶ್ರೇಣಿಯ ತಾಂತ್ರಿಕ, ಕಚೇರಿ ಮತ್ತು ಇತರ ಸಿಬ್ಬಂದಿ ವರ್ಗದವರಿದ್ದರು. ಈಗ ಜಿಲ್ಲಾ ಆಸ್ಪತ್ರೆ ಹಾಗೂ ಮಕ್ಕಳ ಮತ್ತು ಸ್ತ್ರೀಯರ ಆಸ್ಪತ್ರೆಗಳಿಗೆ ಬೇರೆ ಬೇರೆ ಅಧೀಕ್ಷಕರಿದ್ದಾರೆ. ಆಸ್ಪತ್ರೆಗೆ ಸೇರಿದಂತೆ ಬಾಣಂತಿ ಸೇವಾ ಕೇಂದ್ರವಿದೆ. ಇಲ್ಲಿ ಇಬ್ಬರು ಸಹಾಯಕ ಆರೋಗ್ಯಾಧಿಕಾರಿಗಳು, ಐದು ಜನ ಇತರ ಸಹಾಯಕ ಸಿಬ್ಬಂದಿ ವರ್ಗದವರು ಕೆಲಸ ಮಾಡುತ್ತಿದ್ದಾರೆ.

### ಸ್ತ್ರೀಯರ ಮತ್ತು ಮಕ್ಕಳ ಆಸ್ಪತ್ರೆ

ಸ್ತ್ರೀಯರ ಮತ್ತು ಮಕ್ಕಳ ಆಸ್ಪತ್ರೆಯು 1956ರಲ್ಲಿ ಮಡಿಕೇರಿಯಲ್ಲಿ ಪ್ರಾರಂಭವಾಯಿತು. ಮೊದಲಿಗೆ ಇದು ಸಿವಿಲ್ ಆಸ್ಪತ್ರೆಗೇ ಸೇರಿಕೊಂಡಿತ್ತು. ನಂತರ 1958ರಲ್ಲಿ ಈಗಿರುವ ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲಾಯಿತು. ಈಗ ಈ ಆಸ್ಪತ್ರೆಯಲ್ಲಿ 200 ಹಾಸಿಗೆಗಳ ಸೌಕರ್ಯವಿದೆ. ಕಟ್ಟಡ ವನ್ನು ಮೂರು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕಟ್ಟಲಾಗಿದೆ. ಇಲ್ಲಿ ಏಳು ವಿಶೇಷ ವಾರ್ಡುಗಳಿದ್ದು, ಅವುಗಳಿಗೆ ಸೇರಿ ಕೊಂಡಂತೆ ಒಂದು ವಿಶೇಷ ಹೆರಿಗೆ ಕೊಠಡಿಯೂ ಇದೆ. ಈ ಏಳು ವಾರ್ಡುಗಳಲ್ಲಿ 14 ಹಾಸಿಗೆಗಳವೆ. ಇವುಗಳಲ್ಲಿ ನಾಲ್ಕು ಕೊಠಡಿಯ ಒಂದು ವಿಶೇಷ ವಾರ್ಡನ್ನು 1958ರಲ್ಲಿ ಪಾಪಯ್ಯನಾಯುಡು ಮತ್ತು ಮಕ್ಕಳು ಕಟ್ಟಿಸಿಕೊಟ್ಟರು ; ಎರಡು ಕೊಠಡಿಗಳ ಒಂದು ವಾರ್ಡನ್ನು ಎ. ಸಿ. ಅಪ್ಪಯ್ಯ ನವರು ದಿವಂಗತ ಡಾ|| ಎನ್. ಸಿ. ಅಪ್ಪಯ್ಯನವರ ಹೆಸರಿನಲ್ಲಿ 1958ರಲ್ಲಿ ಕಟ್ಟಿಕೊಟ್ಟರು ; ಎರಡು ಕೊಠಡಿಗಳ ಇನ್ನೊಂದು ವಾರ್ಡನ್ನು ಡೇರಿಯನ್ ಮರ್ಕೆರಾ ಸಮಿತಿಯು 1959ರಲ್ಲಿ ಕಟ್ಟಿಸಿ ಕೊಟ್ಟಿತು. ಮಕ್ಕಳ ವಾರ್ಡನ್ನು ಮಡಿಕೇರಿಯ ಸಿ. ಎಂ. ತಿಮ್ಮಯ್ಯನವರು 1958ರಲ್ಲಿ ಕಟ್ಟಿಸಿದರು. ಈ ಆಸ್ಪತ್ರೆಯಲ್ಲಿ 1961ರಲ್ಲಿ ಸಿಬ್ಬಂದಿ ವರ್ಗದಲ್ಲಿ ಒಬ್ಬ ಪ್ರಥಮ ಶ್ರೇಣಿಯ ಸಹಾಯಕ ಸರ್ಜನ್‌ರೂ, ನಾಲ್ಕು ಜನ ದ್ವಿತೀಯ ದರ್ಜೆಯ ಸಹಾಯಕ ಸರ್ಜನ್‌ರೂ, ಒಬ್ಬ ದ್ವಿತೀಯ ದರ್ಜೆಯ ನರ್ಸಿಂಗ್ ಅಧೀಕ್ಷಕರು 11 ಜನ ನರ್ಸ್‌ಗಳು, 10 ಜನ ದಾದಿಯರು, ಮೂರು ಜನ ಔಷಧ ವಿತರಕರೂ ಹಾಗೂ ಇತರ ಆಡಳಿತ ಮತ್ತು ಸೇವಾ ಸಿಬ್ಬಂದಿಯವರೂ ಇದ್ದರು. ಆ ವರ್ಷ ದೈನಂದಿನ ಸರಾಸರಿ 141 ಹೊರ ರೋಗಿಗಳು, 70 ಜನ ಒಳರೋಗಿಗಳೂ ಚಿಕಿತ್ಸೆ ಪಡೆದರು. ಈಗ ಈ ಆಸ್ಪತ್ರೆಗೆ ಬೇರೆಯಾಗಿಯೇ ಒಬ್ಬ ವೈದ್ಯಕೀಯ ಅಧೀಕ್ಷಕರಿದ್ದಾರೆ. ಈ ಆಸ್ಪತ್ರೆಯ ಅಂಕಿ ಅಂಶಗಳನ್ನು ಜಿಲ್ಲಾ ಆಸ್ಪತ್ರೆಯ ಜೊತೆಯಲ್ಲಿಯೇ ಕೊಡಲಾಗಿದೆ.

### ಸಾರ್ವಜನಿಕ ಆಸ್ಪತ್ರೆ ವೀರರಾಜಪೇಟೆ

ವೀರರಾಜಪೇಟೆಯ ಸಾರ್ವಜನಿಕ ಆಸ್ಪತ್ರೆಯು ಔಷಧಾ ಲಯದ ರೂಪದಲ್ಲಿ 1870ರಲ್ಲಿ ಪ್ರಾರಂಭವಾಯಿತು. ಈ ಆಸ್ಪತ್ರೆಯಲ್ಲಿ 1874–75ರಲ್ಲಿ 12 ಜನ ಒಳರೋಗಿಗಳೂ 3,276 ಜನ ಹೊರರೋಗಿಗಳೂ ಚಿಕಿತ್ಸೆ ಪಡೆದಿದ್ದಾರೆ. ಮುಂದೆ 1878–79ರಲ್ಲಿ 1,507 ಜನರು ವೈದ್ಯಕೀಯ ಸೌಲಭ್ಯವನ್ನು ಪಡೆದಿದ್ದರು. ಈ ಆಸ್ಪತ್ರೆಗೆ 1880ರಲ್ಲಿ 25 ಹಾಸಿಗೆಗಳ ಸೌಲಭ್ಯವನ್ನು ಕಲ್ಪಿಸಿಕೊಡಲಾಯಿತು. ಆ ವರ್ಷ 309 ಜನ ಒಳರೋಗಿಗಳೂ 4,086 ಜನ ಹೊರ ರೋಗಿಗಳು ಚಿಕಿತ್ಸೆ ಪಡೆದರೆಂದು ದಾಖಲೆಗಳು ತಿಳಿಸುತ್ತವೆ. ಶಸ್ತ್ರಚಿಕಿತ್ಸೆಗೆ ಒಂದು ಕೊಠಡಿಯನ್ನು ಕಟ್ಟಿಸಲಾಯಿತು. ಇದರ ಜೊತೆಗೆ ವೈದ್ಯಾಧಿಕಾರಿಗಳಿಗೆ ಒಂದು ವಾಸದ ಮನೆ ಯನ್ನು ಕಟ್ಟಿಸಲಾಯಿತು. ಪಕ್ಕದಲ್ಲಿನ ಕ್ರಿಶ್ಚಿಯನ್ ಮಿಶನ್ನಿನ ಕಟ್ಟಡವನ್ನು 4,000 ರೂಪಾಯಿಗಳಿಗೆ ಆಸ್ಪತ್ರೆ ಗೋಸ್ಕರ ಖರೀದಿಸಲಾಯಿತು. ಈ ಆಸ್ಪತ್ರೆಯನ್ನು 1883ರಲ್ಲಿ ವೀರರಾಜಪೇಟೆಪುರಸಭೆಗೆ ವಹಿಸಿಕೊಡಲಾಯಿತು. ನಂತರ ಸರ್ಕಾರವು 1908ರಲ್ಲಿ ಪುನಃ ಅದನ್ನು ತನ್ನ ವಶಕ್ಕೆ ತೆಗೆದುಕೊಂಡಿತು. ಆ ಆಸ್ಪತ್ರೆಯಲ್ಲಿ 1900ರಲ್ಲಿ 873 ಜನ ಒಳರೋಗಿಗಳು ಹಾಗೂ 10,602 ಜನ ಹೊರ ರೋಗಿಗಳೂ ಚಿಕಿತ್ಸೆ ಪಡೆದಿದ್ದರು. ಹೊಸ ಕಟ್ಟಡವೊಂದನ್ನು 1908ರಲ್ಲಿ 63,500 ರೂಪಾಯಿ ವೆಚ್ಚದಲ್ಲಿ ಕಟ್ಟಿಸಿ, 56 ಜನ ಒಳರೋಗಿಗಳಿಗೆ ಅವಕಾಶ ಮಾಡಿಕೊಡಲಾಯಿತು. ಕ್ಷ–ಕಿರಣ ವಿಭಾಗವನ್ನು 1950ರಲ್ಲಿ ಪ್ರಾರಂಭಿಸಲಾಯಿತು. ಸಹಾಯಕ ಸರ್ಜನ್‌ರ ಹುದ್ದೆಯನ್ನು 1953ರಲ್ಲಿ ಪತ್ರಾಂಕಿತ ಹುದ್ದೆಗೆ ಏರಿಸಿ ಅವರನ್ನು ಅಧೀಕ್ಷಕರೆಂದು ಕರೆಯಲಾಯಿತು. ಮಿಡ್‌ವೈಫ್‌ಗಳ ತರಬೇತಿ ಕೇಂದ್ರವೊಂದನ್ನು 1959ರಲ್ಲಿ ಈ ಆಸ್ಪತ್ರೆಯಲ್ಲಿ ಪ್ರಾರಂಭಿಸಲಾಗಿತ್ತು. ಮುಂದೆ ಅದನ್ನು ನಿಲ್ಲಿಸಲಾಯಿತು. ಕ್ಷಯ ರೋಗಿಗಳ ಪ್ರತ್ಯೇಕ ವಾರ್ಡೊಂದಿದ್ದು ಅದರಲ್ಲಿ 1963–64 ರಲ್ಲಿ 95 ಜನ ಒಳ ರೋಗಿಗಳೂ, 213 ಜನ ಹೊರರೋಗಿಗಳೂ ಚಿಕಿತ್ಸೆ ಪಡೆ ದಿದ್ದರು. ಆ ವರ್ಷ ಆಸ್ಪತ್ರೆಯಲ್ಲಿ 230 ಹಾಸಿಗೆಗಳ ಸೌಕರ್ಯವಿದ್ದು, 75 ಸೇವಾ ಸಿಬ್ಬಂದಿಯವರಿದ್ದರು ಮತ್ತು 1,80,440 ರೂಪಾಯಿಗಳು ಖರ್ಚಾಗಿತ್ತು. ಆಸ್ಪತ್ರೆ ಯಲ್ಲಿ ಆ ವರ್ಷ 5,446 ಒಳರೋಗಿಗಳೂ 55,986 ಜನ

ಹೊರರೋಗಿಗಳೂ ಚಿಕಿತ್ಸೆ ಪಡೆದಿದ್ದರು ; 2,233 ಜನ ದಂತ ರೋಗಗಳಿಗೆ ಚಿಕಿತ್ಸೆ ಪಡೆದಿದ್ದರು ; 605 ಪ್ರಸವಗಳನ್ನು ಮಾಡಲಾಗಿತ್ತು ಮತ್ತು 3,990 ದೊಡ್ಡ ಮತ್ತು ಸಣ್ಣ ಪ್ರಮಾಣದ ಶಸ್ತ್ರಚಿಕಿತ್ಸೆಗಳನ್ನು ನಡೆಸಲಾಗಿತ್ತು.

ಈಗ ಈ ಆಸ್ಪತ್ರೆಯಲ್ಲಿ 240 ಹಾಸಿಗೆಗಳ ಸೌಲಭ್ಯವಿದೆ. ಕ್ಷ-ಕಿರಣ, ರಕ್ತನಿಧಿ, ಪ್ರಯೋಗಶಾಲೆ, ದಂತ ಚಿಕಿತ್ಸೆ, ಸುಸಜ್ಜಿತ ಶಸ್ತ್ರಚಿಕಿತ್ಸಾ ಕೊಠಡಿಗಳ ಸೌಲಭ್ಯಗಳೂ ಇವೆ. ಇವುಗಳ ಜೊತೆಗೆ ಆಸ್ಪತ್ರೆಯಲ್ಲಿ ಬಾಣಂತಿ ಸೇವಾ ಕೇಂದ್ರವೊಂದನ್ನು ಸ್ಥಾಪಿಸಲಾಗಿದೆ. ನೇತ್ರತಜ್ಞರ, ಹೃದಯತಜ್ಞರ ಸೇವೆಯು ಸೌಲಭ್ಯವೂ ಲಭ್ಯವಿದೆ. ಈ ಆಸ್ಪತ್ರೆಯ ಮಿತಿಯೊಳಗೆ ಬರುವ ಪ್ರದೇಶದಲ್ಲಿ ಯಾವಾಗಲಾದರೊಮ್ಮೆ ಕರುಳುಬೇನೆ, ಕಾಲರಾ ಸೋಂಕು ರೋಗಗಳು ಕಾಣಿಸಿಕೊಳ್ಳುತ್ತವೆ. ಈ ಆಸ್ಪತ್ರೆಯು ಈಗ (1990-91ರಲ್ಲಿ) ಸರ್ಜನ್‌ರೊಬ್ಬರ ಆಡಳಿತಾಧಿಕಾರಕ್ಕೆ ಒಳಪಟ್ಟಿದೆ. ಇವರಿಗೆ ಸಹಾಯಕರಾಗಿ ನಾಲ್ಕು ಜನ ಆರೋಗ್ಯಾಧಿಕಾರಿಗಳು, ನಾಲ್ಕು ಜನ ಸಹಾಯಕ ವೈದ್ಯಾಧಿಕಾರಿಗಳು, ಒಬ್ಬ ದಂತ ವೈದ್ಯರು, ಒಬ್ಬ ಮೂರನೇ ದರ್ಜೆ ವೈದ್ಯಾಧಿಕಾರಿಗಳು, ಒಬ್ಬ ನರ್ಸಿಂಗ್ ಅಧೀಕ್ಷಕರೂ, 25 ಜನ ನರ್ಸುಗಳು, 13 ಜನ ದಾದಿಯರು, ಒಬ್ಬೊಬ್ಬ ಪ್ರಯೋಗ ತಜ್ಞರು, ಕ್ಷ-ಕಿರಣ ತಜ್ಞರು, ನಾಲ್ಕು ಜನ ಔಷಧವಿತರಕರು, ಕಚೇರಿಯಲ್ಲಿ ಮೂರು ಜನ ಗುಮಾಸ್ತರು ಮತ್ತು 28ಜನ ಇತರ ಸಿಬ್ಬಂದಿ ವರ್ಗದವರೂ ಇದ್ದರು. ಆಸ್ಪತ್ರೆಯಲ್ಲಿ 1989ರಲ್ಲಿ 85,301 ಜನ ಹೊರರೋಗಿಗಳಿಗೂ, 5,513 ಜನ ಒಳರೋಗಿಗಳಿಗೂ ವೈದ್ಯಕೀಯ ಸೌಲಭ್ಯವನ್ನು ಒದಗಿಸಿದೆಯಲ್ಲದೆ 932 ಪ್ರಸವಗಳು, 161 ದೊಡ್ಡ 177 ಸಣ್ಣ ಶಸ್ತ್ರಚಿಕಿತ್ಸೆಗಳನ್ನು ನಡೆಸಿದೆ. 1,303 ಕ್ಷ-ಕಿರಣ ಪರೀಕ್ಷೆಗಳನ್ನೂ, 794 ಸ್ಕ್ರೀನಿಂಗ್‌ಗಳನ್ನು ಮಾಡಲಾಗಿದೆ. ಆ ವರ್ಷ 61 ಕ್ಷಯರೋಗಿಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಕುಟುಂಬ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ ಮೂರು ವ್ಯಾಸೆಕ್ಟಮಿ, 186 ಟ್ಯುಬೆಕ್ಟಮಿ ಮತ್ತು ನಾಲ್ಕು ಲೆಪ್ರೋಸ್ಕೊಪಿ ಶಸ್ತ್ರಚಿಕಿತ್ಸೆಗಳನ್ನು ಮಾಡಲಾಗಿದೆ. ಆ ವರ್ಷ ಮಕ್ಕಳ ಮತ್ತು ಸ್ತ್ರೀಯರ ಕಾರ್ಯಕ್ರಮದಲ್ಲಿ 453 ಡಿ.ಪಿ.ಟಿ., 333 ಡಿ ಮತ್ತು ಟಿ, 688 ತಾಯಂದಿರಿಗೆ ಮತ್ತು 450 ಮಕ್ಕಳಿಗೆ ಟಿ.ಟಿ. ರೋಗ ನಿರೋಧಕ ಲಸಿಕೆಗಳನ್ನೂ, 453 ಮಕ್ಕಳಿಗೆ ಪೋಲಿಯೋ ನಿರೋಧಕ ಲಸಿಕೆಯನ್ನೂ ಕೊಡಲಾಗಿದೆ.

**ಸಾರ್ವಜನಿಕ ಆಸ್ಪತ್ರೆ, ಸೋಮವಾರಪೇಟೆ**

ಸೋಮವಾರಪೇಟೆಯ ಸಾರ್ವಜನಿಕ ಆಸ್ಪತ್ರೆಯು 14 ಹಾಸಿಗೆಗಳ ಆಸ್ಪತ್ರೆಯಾಗಿ 1892ರಲ್ಲಿ ಆರಂಭವಾಯಿತು. ಇದು ಮೊದಲಿಗೆ ಜಿಲ್ಲಾ ಬೋರ್ಡಿನ ಅಧೀನದಲ್ಲಿತ್ತು. ಮುಂದೆ 1953ರಲ್ಲಿ ಸರ್ಕಾರದ ವಶಕ್ಕೆ ಬಂದಿತು. ಮೊದಲಿಗೆ ಈ ಆಸ್ಪತ್ರೆಗೆ ಸಹಾಯಕ ಸರ್ಜನರೊಬ್ಬರು ಮುಖ್ಯಸ್ಥರಾಗಿದ್ದರು. ಅವರು ವೀರರಾಜಪೇಟೆಯ ಸಿವಿಲ್ ಆಸ್ಪತ್ರೆಯ ಸರ್ಜನ್‌ರ ಅಧೀನದಲ್ಲಿದ್ದರು. ಅವರ ಹುದ್ದೆಯನ್ನು 1956ರಲ್ಲಿ ಪತ್ರಾಂಕಿತಗೊಳಿಸಿ ಅಧೀಕ್ಷಕರೆಂದು ನಾಮಕರಣ ಮಾಡಿ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವಂತೆ ಮಾಡಲಾಯಿತು. ಏಪ್ರಿಲ್ ಒಂದು, 1968ರ ವರೆವಿಗೆ ಈ ಆಸ್ಪತ್ರೆಯು ಮಡಿಕೇರಿಯಲ್ಲಿನ ಜಿಲ್ಲಾ ಸರ್ಜನ್‌ರ ಆಡಳಿತಾಧಿಕಾರಕ್ಕೆ ಒಳಪಟ್ಟಿತ್ತು. ಅಲ್ಲಿಂದ ಮುಂದೆ ಸ್ವತಂತ್ರವಾಗಿ ಮೈಸೂರು ವಿಭಾಗೀಯ ಸಂಯುಕ್ತ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇವರ ಅಧೀನಕ್ಕೆ ಒಳಪಟ್ಟಿದೆ. ಆಸ್ಪತ್ರೆಯ ಕಟ್ಟಡಗಳನ್ನು 1951 ರಿಂದ 1964ರ ವರೆಗೂ ವಿವಿಧ ಹಂತಗಳಲ್ಲಿ ಕಟ್ಟಲಾಗಿದೆ. ಈಗ ಹಾಸಿಗೆಗಳ ಸಂಖ್ಯೆ 120 ಇದ್ದು, ಆಸ್ಪತ್ರೆಯಲ್ಲಿ ಯಂತ್ರ, ರಕ್ತನಿಧಿ ಮೊದಲಾದವುಗಳ ಸೌಲಭ್ಯಗಳಿವೆ. ಫೆಬ್ರವರಿ, 1983 ರಿಂದ ಬಾಣಂತಿ ಸೇವಾ ಕೇಂದ್ರವು ಕೆಲಸ ಮಾಡುತ್ತಿದೆ. ಒಂದು ಹವಾ ನಿಯಂತ್ರಿತ ಶಸ್ತ್ರಚಿಕಿತ್ಸಾ ಕೊಠಡಿಯಿದೆ. ಕ್ಷಯರೋಗಿಗಳಿಗೆ ಪ್ರತ್ಯೇಕ 20 ಹಾಸಿಗೆಗಳ ವಾರ್ಡನ್ನು ಕಟ್ಟಲಾಗಿದೆ. ಆಸ್ಪತ್ರೆಯ ಕ್ಷೇತ್ರ ಮಿತಿಯಲ್ಲಿ ಕರುಳುಬೇನೆ ರೋಗವು ಪ್ರತೀವರ್ಷವೂ ಕಾಣಿಸಿ ಕೊಳ್ಳುವುದೆಂದು ವರದಿಯಾಗಿದೆ.

ಈ ಆಸ್ಪತ್ರೆಯಲ್ಲಿ 1963ರಲ್ಲಿ 61,478 ಹೊರರೋಗಿಗಳು, 39,535 ಒಳರೋಗಿಗಳೂ ಚಿಕಿತ್ಸೆ ಪಡೆದಿದ್ದರು; 15 ದೊಡ್ಡ 350 ಸಣ್ಣ ಶಸ್ತ್ರಚಿಕಿತ್ಸೆಗಳನ್ನು, 363 ಹೆರಿಗೆಗಳನ್ನು ಮಾಡಲಾಗಿತ್ತು; 35 ಕ್ಷಯದ ಒಳರೋಗಿಗಳಿದ್ದರು; 498 ದಂತ ಚಿಕಿತ್ಸಾ, 500 ನೇತ್ರ ಚಿಕಿತ್ಸಾ ಹೊರರೋಗಿಗಳು ವೈದ್ಯಕೀಯ ಸೇವೆಯನ್ನು ಪಡೆದಿದ್ದರು; 250 ಕ್ಷ-ಕಿರಣ ಚಿತ್ರಗಳನ್ನು ತೆಗೆಯಲಾಗಿತ್ತು; 625 ಮೂತ್ರ ಹಾಗೂ 200 ಮಲಪರೀಕ್ಷೆಗಳನ್ನು ನಡೆಸಲಾಗಿತ್ತು, ಮುಂದೆ 1989ರಲ್ಲಿ 1,11,080 ಹೊರರೋಗಿಗಳೂ, 34,493 ಒಳರೋಗಿಗಳೂ ಚಿಕಿತ್ಸೆ ಪಡೆದಿದ್ದರು; 530 ಹೆರಿಗೆಗಳನ್ನು ಮಾಡಲಾಗಿತ್ತು; 40 ದೊಡ್ಡ 176 ಸಣ್ಣ ಶಸ್ತ್ರಚಿಕಿತ್ಸೆಗಳನ್ನು ನಡೆಸಲಾಯಿತು; 932 ಕ್ಷ-ಕಿರಣ ಚಿತ್ರಗಳನ್ನು ತೆಗೆಯಲಾಗಿತ್ತು; 456 ಸ್ಕ್ರೀನಿಂಗ್‌ಗಳನ್ನು ಮಾಡಲಾಗಿತ್ತು. ಆ ವರ್ಷ 123 ಕ್ಷಯರೋಗಿಗಳೂ, 9 ಕುಷ್ಠರೋಗಿಗಳೂ ಚಿಕಿತ್ಸೆ ಪಡೆಯುತ್ತಿದ್ದರು. ಕುಟುಂಬ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ 1989-90ರಲ್ಲಿ ಒಂದು ವ್ಯಾಸೆ

ಕ್ಷಯಿ, 175 ಟ್ಯುಬೆಕ್ಟಮಿ ಶಸ್ತ್ರಚಿಕಿತ್ಸೆಗಳನ್ನೂ 54ವಂಕಿ ಧಾರಣೆಗಳನ್ನೂ ಮಾಡಲಾಗಿತ್ತು. ಮಕ್ಕಳ ಮತ್ತು ಸ್ತ್ರೀಯರ ಆರೋಗ್ಯ ಕಾರ್ಯಕ್ರಮದಲ್ಲಿ 371 ಡಿ.ಪಿ.ಟಿ., 150 ಡಿ. ಮತ್ತು ಟಿ., 285 ತಾಯಂದಿರಿಗೆ ಟಿ.ಟಿ. 85 ಮಕ್ಕಳಿಗೆ ಟಿ.ಟಿ. ಮತ್ತು 371 ಮಕ್ಕಳಿಗೆ ಪೋಲಿಯೋ ರೋಗ ನಿರೋಧಕ ಲಸಿಕೆಗಳನ್ನು ಹಾಕಲಾಗಿತ್ತು.

ಬಾಣಂತಿ ಸೇವಾ ಕೇಂದ್ರದ ಸಿಬ್ಬಂದಿ ವರ್ಗದವರನ್ನು ಬಿಟ್ಟು 1991ರಲ್ಲಿ ಆಸ್ಪತ್ರೆಯಲ್ಲಿ 62 ಸಿಬ್ಬಂದಿ ವರ್ಗದವರಿದ್ದರು. ಅವರಲ್ಲಿ ಒಬ್ಬರು ಸರ್ಜನ್‌ರು, ಇಬ್ಬರು ಮೊದಲನೇಯ ಶ್ರೇಣಿಯ ಆರೋಗ್ಯಾಧಿಕಾರಿಗಳೂ, ಮೂರು ಸಹಾಯಕ ಸರ್ಜನ್‌ರೂ, ಒಬ್ಬ ದಂತ ವೈದ್ಯರೂ, ಒಬ್ಬ ನರ್ಸಿಂಗ್ ಅಧೀಕ್ಷಕರೂ, 12 ಜನ ನರ್ಸ್‌ಗಳೂ, ಮೂರು ಜನ ಔಷಧ ವಿತರಕರೂ ಸೇರಿದ್ದಾರೆ. ಇವರಲ್ಲದೆ ಕಚೇರಿ ಗುಮಾಸ್ತರೂ, ಪ್ರಯೋಗ ಮತ್ತು ಕ್ಷ-ಕಿರಣ ತಜ್ಞರೂ ಮತ್ತು ಇತರ ಸೇವಾ ವರ್ಗದವರಿದ್ದಾರೆ. ಬಾಣಂತಿ ಸೇವಾ ಕೇಂದ್ರದಲ್ಲಿ ಇಬ್ಬರು ವೈದ್ಯಾಧಿಕಾರಿಗಳು, ಒಬ್ಬ ಮಹಿಳಾ ಆರೋಗ್ಯ ಸಂದರ್ಶಕಿ, ಮೂರು ಜನ ಆರೋಗ್ಯ ಕಾರ್ಯಕರ್ತರು, ಒಬ್ಬ ಪ್ರಥಮ ದರ್ಜೆ ಗುಮಾಸ್ತರಿದ್ದಾರೆ.

**ಜಿಲ್ಲಾ ಆರೋಗ್ಯ ಪ್ರಯೋಗ ಶಾಲೆ, ಮಡಿಕೇರಿ**

ಮಡಿಕೇರಿಯಲ್ಲಿ ಜಿಲ್ಲಾ ಆರೋಗ್ಯ ಪ್ರಯೋಗ ಶಾಲೆಯೊಂದಿದ್ದು ಅದರ ಈಗಿನ ಕಟ್ಟಡವನ್ನು 1969ರಲ್ಲಿ ಕಟ್ಟಲಾಗಿದೆ. ಈ ಪ್ರಯೋಗ ಶಾಲೆಯಲ್ಲಿ ಒಬ್ಬ ವೈದ್ಯಾಧಿಕಾರಿಗಳು, ನಾಲ್ಕು ಜನ ಹಿರಿಯ ಪ್ರಯೋಗ ತಜ್ಞರು ನಾಲ್ಕು ಜನ ಪ್ರಯೋಗ ಸಹಾಯಕರು, ಒಬ್ಬ ಜವಾನ, ಹಾಗೂ ನೈರ್ಮಲ್ಯ ಸಿಬ್ಬಂದಿ ಇದ್ದಾರೆ. ಈ ಪ್ರಯೋಗಶಾಲೆಯು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಆಡಳಿತದ ಅಧೀನಕ್ಕೆ ಒಳಪಟ್ಟಿದೆ. ಇಲ್ಲಿ ಮಲೇರಿಯಾ ರೋಗಾಣುಗಳ ವೀಕ್ಷಣೆ, ಮಲಮೂತ್ರ ಪರೀಕ್ಷೆ ಮೊದಲಾದವುಗಳನ್ನು ಮಾಡಲಾಗುತ್ತದೆ. ಈಗ ಹಿರಿಯ ಪ್ರಯೋಗತಜ್ಞರು ಇಲ್ಲವಾದ ಕಾರಣ ಕೇವಲ ಮಲೇರಿಯಾ ರಕ್ತ ಪರೀಕ್ಷೆಯನ್ನು ಮಾತ್ರ ಮಾಡಲಾಗುತ್ತಿದೆ. ಪ್ರಯೋಗಶಾಲೆಯಲ್ಲಿ 1990-91ರಲ್ಲಿ 6,142 ಮೂತ್ರ ಹಾಗೂ 93 ಮಲ ಪರೀಕ್ಷೆಗಳನ್ನು, 3,137 ರಕ್ತ ಪರೀಕ್ಷೆಗಳನ್ನು (ಬ್ಲಡ್‌ಕೌಂಟ್) 1,012 ಈ.ಎಸ್.ಆರ್.ಗಳನ್ನು, 166 ಎಫ್.ಬಿ.ಎಸ್.ಗಳನ್ನು 121 ಪಿ.ಪಿ.ಬಿ.ಎಸ್.ಗಳನ್ನು 28 ಯೂರಿಯಾ ಪರೀಕ್ಷೆಗಳನ್ನು, 77 ವಿ.ಡಿ.ಆರ್.ಎಲ್. 9 ಕೊಲೆಸ್ಟರಾಲ್ ಪರೀಕ್ಷೆಗಳನ್ನು ಮತ್ತು 3,269 ಮಲೇರಿಯಾ ರಕ್ತ ಪರೀಕ್ಷೆಗಳನ್ನು ಮಾಡಲಾಗಿತ್ತು.

**ರಾಮಕೃಷ್ಣ ಸೇವಾಶ್ರಮ ಆಸ್ಪತ್ರೆ, ಪೊನ್ನಂಪೇಟೆ**

ಶ್ರೀ ರಾಮಕೃಷ್ಣ ಶಾರದಾಶ್ರಮವು ಪೊನ್ನಂಪೇಟೆಯಲ್ಲಿ ರಾಮಕೃಷ್ಣ ಸೇವಾಶ್ರಮ ಆಸ್ಪತ್ರೆಯನ್ನು ಹೋಮಿಯೋಪತಿ ಔಷಧಾಲಯವಾಗಿ 1942ರಲ್ಲಿ ಪ್ರಾರಂಭಿಸಿತು. ನಂತರ ಅದು 1947ರಲ್ಲಿ ಅಲೋಪತಿ ಔಷಧಾಲಯವಾಗಿ ಪರಿವರ್ತಿಸಲ್ಪಟ್ಟು, 1958ರಲ್ಲಿ ಆಸ್ಪತ್ರೆಯಾಗಿ ಮಾರ್ಪಾಟಾಯಿತು. ಔಷಧಾಲಯವು 1947ರ ಹೊತ್ತಿಗೆ ಪೊನ್ನಂಪೇಟೆಯ ಸುತ್ತಮುತ್ತಲ ಸುಮಾರು 25 ಗ್ರಾಮಗಳ ಜನರಿಗೆ ವೈದ್ಯಕೀಯ ಸೇವೆಯನ್ನು ನೀಡುತ್ತಿತ್ತು. ಆಸ್ಪತ್ರೆಯ ಕಟ್ಟಡವನ್ನು 1958ರಲ್ಲಿ ಸುಮಾರು 75,000 ರೂಪಾಯಿಗಳ ವೆಚ್ಚದಲ್ಲಿ ಕಟ್ಟಲಾಯಿತು. ಈ ಆಸ್ಪತ್ರೆಯಲ್ಲಿ ಈಗ 30 ಹಾಸಿಗೆಗಳ ಸೌಕರ್ಯವಿದೆ. ಕ್ಷ-ಕಿರಣ, ಪ್ರಯೋಗ ಶಾಲೆ, ಶಸ್ತ್ರಚಿಕಿತ್ಸಾ ಕೊಠಡಿ, ಈ. ಸಿ. ಜಿ. ಮೊದಲಾದ ಸೌಕರ್ಯಗಳನ್ನು ಹೊಂದಿದ್ದು, ಮಕ್ಕಳಿಗೆ, ರೋಗಿಗಳಿಗೆ ಕಣ್ಣಿನ, ಹಲ್ಲಿನ, ಗಂಟಲು, ಕಿವಿ, ಮೂಗು, ಮೊದಲಾದ ರೋಗಗಳಿಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರಗಳನ್ನು ಕಾಲಕಾಲಕ್ಕೆ ಆಸ್ಪತ್ರೆಯಲ್ಲಿ ಏರ್ಪಡಿಸಲಾಗುತ್ತದೆ. ಸಾಮಾನ್ಯವಾಗಿ ಈ ಆಸ್ಪತ್ರೆಗೆ ಬರುವ ರೋಗಿಗಳಲ್ಲಿ ಹೆಚ್ಚು ಮಂದಿ ವಿಷಮಶೀತ ಜ್ವರ, ಕ್ಷಯ ಮತ್ತು ಬೇಧಿಗಳಿಗೆ ಚಿಕಿತ್ಸೆಗಾಗಿ ಬರುತ್ತಾರೆ. ಈ ಆಸ್ಪತ್ರೆಯಲ್ಲಿ ನಿವಾಸಿ ವೈದ್ಯಾಧಿಕಾರಿಗಳ ಜೊತೆಗೆ, ಒಬ್ಬ ಶಿಶುತಜ್ಞರು, ಒಬ್ಬ ಸರ್ಜನ್‌ರು ಇದ್ದು ಅವರ ಸಹಾಯಕ್ಕೆ ಆರು ಜನ ಮಹಿಳಾ ಸಹಾಯಕಿಯರು, ಒಬ್ಬ ನರ್ಸ್, ಒಬ್ಬ ಪರಿಚಾರಕಿ, ಹಾಗೂ ಒಬ್ಬೊಬ್ಬ ಪ್ರಯೋಗಶಾಲೆ ಮತ್ತು ಕ್ಷ-ಕಿರಣ ತಜ್ಞರು ಮತ್ತು ಇತರ ಸೇವಾ ಸಿಬ್ಬಂದಿಯವರಿದ್ದಾರೆ. ಈ ಆಸ್ಪತ್ರೆಯಲ್ಲಿ 1989ರಲ್ಲಿ 16,138 ಹೊರ ರೋಗಿಗಳೂ, 1,298 ಒಳರೋಗಿಗಳೂ ಚಿಕಿತ್ಸೆ ಪಡೆದಿದ್ದಾರೆ; 28 ಹೆರಿಗೆಗಳು ನಡೆದಿವೆ, 177 ಕ್ಷ-ಕಿರಣ ಚಿತ್ರಗಳನ್ನು ತೆಗೆಯಲಾಯಿತು; ಒಂಬತ್ತು ಸ್ಕ್ರೀನಿಂಗ್‌ಗಳನ್ನು ಮಾಡಲಾಯಿತು. ಆ ವರ್ಷ ಆಸ್ಪತ್ರೆಯಲ್ಲಿ ಹತ್ತು ಜನ ಕ್ಷಯರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದರು. ಪ್ರತೀ ತಿಂಗಳೂ ಆಸ್ಪತ್ರೆಯಲ್ಲಿ 25-30 ಮಕ್ಕಳಿಗೆ ಪೋಲಿಯೋ ನಿರೋಧ ಲಸಿಕೆಯನ್ನು ಕೊಡಲಾಗುತ್ತದೆ ಮತ್ತು ಡಿ.ಪಿ.ಟಿ. ನಿರೋಧಕ ಚುಚ್ಚುಮದ್ದನ್ನು ಕೊಡಲಾಗುತ್ತಿದೆ. ಈ ಆಸ್ಪತ್ರೆಗೆ ದೂರದ ಬಿರುನಾಣಿ, ಕುಟ್ಟದ ಕಡೆಗಳಿಂದ ಹೆಚ್ಚಾಗಿ ಕಾಫಿ ತೋಟಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಬರುತ್ತಾರೆಂದು ವರದಿಯಾಗಿದೆ.

ಅಶ್ವಿನಿ ಆಸ್ಪತ್ರೆ, ಮಡಿಕೇರಿ

ಅಶ್ವಿನಿ ಆಸ್ಪತ್ರೆಯು ವಿಶ್ವಹಿಂದೂ ಪರಿಷತ್ತಿನ ಪ್ರಕಲ್ಪವಾಗಿ (ಪ್ರೋಜೆಕ್ಟ್), ಶ್ರೀಕಾವೇರಿಕೃಪ ವಿಶ್ವ ಕಲ್ಯಾಣ ಸೇವಾ ಸಮಿತಿಯ ಆಶ್ರಯದಲ್ಲಿ ಮಡಿಕೇರಿಯ 1977ರಲ್ಲಿ ಪ್ರಾರಂಭವಾಯಿತು. ಸದ್ಯಕ್ಕೆ ಇದೊಂದು 40 ಹಾಸಿಗೆಗಳ ಆಸ್ಪತ್ರೆಯಾಗಿದ್ದು ಇದುವರೆವಿಗೂ ಕಟ್ಟಡಗಳಿಗಾಗಿ ಸುಮಾರು 13 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಆಸ್ಪತ್ರೆಯಲ್ಲಿ ಕ್ಷ-ಕಿರಣ, ಕಾರ್ಡಿಯಾಕ್ ಮಾನಿಟರ್, ಪ್ರಯೋಗಶಾಲೆ, ಶಸ್ತ್ರಚಿಕಿತ್ಸಾಗಾರ, ರಕ್ತದಾನಿಗಳ ಸಂಘ, ಫಿಜಿಯೋ ಥೆರಪಿ ಮೊದಲಾದ ಸೌಕರ್ಯಗಳಿವೆ. ಆಸ್ಪತ್ರೆಯು ಹೊರ ರೋಗಿಗಳ ಚಿಕಿತ್ಸಾ ಘಟಕಗಳನ್ನು ಹೊಂದಿರುವುದರ ಜೊತೆಗೆ ಉಚಿತ ನೇತ್ರ ಚಿಕಿತ್ಸಾ ಶಿಬಿರ, ಸ್ತ್ರೀರೋಗ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸಾ ಶಿಬಿರ, ದಂತ ಚಿಕಿತ್ಸಾ ಶಿಬಿರ, ಮೊದಲಾದ ಶಿಬಿರಗಳನ್ನು ಏರ್ಪಡಿಸುವುದಲ್ಲದೆ, ಹಿಂದುಳಿದ ಗ್ರಾಮಾಂತರ ಪ್ರದೇಶಗಳಿಗೆ ಉಚಿತ ಸಂಚಾರಿ ಆಸ್ಪತ್ರೆಯ ಸೌಲಭ್ಯವನ್ನು ಒದಗಿಸಿದೆ. ಈ ಆಸ್ಪತ್ರೆಯ ಸಿಬ್ಬಂದಿಯವರು 1974 ರಿಂದ 1977ರ ವರೆವಿಗೆ ಕೊಡಗಿನ ಮೂಲೆ ಮೂಲೆಯ ಹಳ್ಳಿಗಳಿಗೆ ಸಂಚರಿಸಿ ವೈದ್ಯಕೀಯ ಸೌಲಭ್ಯವನ್ನು ಒದಗಿಸಿದ್ದಾರೆ. ಲಂಡನ್ನಿನ ಕಲ್ಯಾಣ ಆಶ್ರಮ ಟ್ರಸ್ಟ್ ಈ ಆಸ್ಪತ್ರೆಗೆ ಲ್ಯಾಂಡ್ ರೋವರ್ ಎಂಬ ಸಂಚಾರಿ ಘಟಕವನ್ನು ಒದಗಿಸಿದೆ. ಬೊಂಬಾಯಿಯ ಆರ್. ಡಿ. ಬಿರ್ಲಾ ಸ್ಮಾರಕ ಕೋಶವು (ಟ್ರಸ್ಟ್) ಅಶ್ವಿನಿ ಆಸ್ಪತ್ರೆಗೆ ನೆರವು ನೀಡಿ ಆರೋಗ್ಯ ಶಿಬಿರಗಳನ್ನು ಏರ್ಪಡಿಸುವಂತೆ ಧನಸಹಾಯ ಮಾಡಿದೆ. ಆಸ್ಪತ್ರೆಯ ಮಿತಿಯಲ್ಲಿ ವಿಷಮಶೀತ ಜ್ವರ, ವಾಂತಿ, ಬೇಧಿ, ಶ್ವಾಸಕೋಶದ ಕ್ಷಯ ಮೊದಲಾದ ರೋಗಗಳು ಸಾಮಾನ್ಯವೆಂದು ವರದಿಯಾಗಿದೆ. ಆಸ್ಪತ್ರೆಯು ಬಸವನಹಳ್ಳಿ, ಆನೆಕಾಡುಗಳಲ್ಲಿ ವನವಾಸಿಗಳ ಆರೋಗ್ಯ ಮತ್ತು ವೈದ್ಯಕೀಯ ತಪಾಸಣೆಗಳನ್ನು ಮಾಡಿದೆ. ಅಧ್ಯಯನದ ವರದಿಗಳ ಪ್ರಕಾರ ಪರಿಶಿಷ್ಟ ವರ್ಗದವರು ಹೆಚ್ಚಾಗಿ ರಾತ್ರಿ ಕುರುಡಿನಿಂದ ನರಳುತ್ತಿದ್ದಾರೆಂದು ಕಂಡು ಬಂದಿದೆಯೆಂದು ವರದಿಯಾಗಿದೆ. ಅನೇಕ ಅನ್ನಾಂಗಗಳ ಕೊರತೆಯಿಂದಲೂ, ವಿಶೇಷ ಮದ್ಯಪಾನ ಮಾಡುವುದರಿಂದಲೂ, ಆಹಾರದಲ್ಲಿ ತೈಲಾಂಶ ಕಡಿಮೆಯಿರುವುದರಿಂದಲೂ ಕುರುಡತನಕ್ಕೆ ಕಾರಣವಾಗಿದೆಯೆಂದು ಅಧ್ಯಯನವು ತಿಳಿಸುತ್ತದೆ. ಇದಲ್ಲದೆ ಕೊಕ್ಕೆ ಹುಳು, ಜಂತು ಹುಳು ಮೊದಲಾದವುಗಳಿಂದ ರಕ್ತಹೀನತೆಯೂ ಹೆಚ್ಚಾಗಿ ಕಂಡು ಬರುತ್ತಿದ್ದು, ಇವೆರಡೂ ರೋಗಗಳು ಪರಿಶಿಷ್ಟ ವರ್ಗದ ಜನರಲ್ಲಿ ವಿಶೇಷವಾಗಿವೆಯೆಂದು ವರದಿಯು ತಿಳಿಸುತ್ತದೆ.

ಈ ಆಸ್ಪತ್ರೆಯಲ್ಲಿ ಮುಖ್ಯಾಧಿಕಾರಿಗಳಿಗೆ ಸಹಾಯಕರಾಗಿ ವೈದ್ಯರು, ಶಸ್ತ್ರ ತಜ್ಞರು, ಪ್ರಯೋಗಶಾಲಾ ತಜ್ಞರು, ಔಷಧಿ ವಿತರಕರು, ದಾದಿಯರು, ಪರಿಚಾರಿಕೆಯರು ಮೊದಲಾದವರಿದ್ದಾರೆ. ಆಸ್ಪತ್ರೆಯಲ್ಲಿ 1990ರಲ್ಲಿ 6,565 ಜನ ಹೊರ ರೋಗಿಗಳಿಗೂ, 1,149 ಜನ ಒಳರೋಗಿಗಳಿಗೂ ಚಿಕಿತ್ಸೆ ನೀಡಲಾಗಿತ್ತು. ಸ್ತ್ರೀರೋಗ ಶಿಬಿರಗಳಲ್ಲಿ 910 ಸ್ತ್ರೀಯರು, ಕಣ್ಣಿನ ಶಿಬಿರಗಳಲ್ಲಿ 1,405 ಜನರೂ ಚಿಕಿತ್ಸೆ ಪಡೆದಿದ್ದರು. ಆಸ್ಪತ್ರೆಯಲ್ಲಿ 102 ಹೆರಿಗೆಗಳು ಮಾಡಲ್ಪಟ್ಟಿದ್ದವು, 431 ದೊಡ್ಡ ಪ್ರಮಾಣದ ಶಸ್ತ್ರಚಿಕಿತ್ಸೆಗಳನ್ನು ಮಾಡಲಾಗಿತ್ತು. 1,545 ಕ್ಷ-ಕಿರಣ ಚಿತ್ರಗಳನ್ನು ತೆಗೆಯಲಾಗಿತ್ತು; 300 ಸ್ಕ್ರೀನಿಂಗ್‌ಗಳನ್ನು ಮಾಡಲಾಗಿತ್ತು. ಇದೇ ವರ್ಷ 96 ಹೊಸ ಕ್ಷಯ ರೋಗಿಗಳೂ, 200 ಹಳೇ ಕ್ಷಯ ರೋಗಿಗಳೂ ಚಿಕಿತ್ಸೆ ಪಡೆಯುತ್ತಿದ್ದರು. ಕುಟುಂಬ ಕಲ್ಯಾಣ ಯೋಜನೆಯಡಿಯಲ್ಲಿ ಒಂದು ವ್ಯಾಸೆಕ್ಟಮಿ, 13 ಟ್ಯುಬೆಕ್ಟಮಿ ಶಸ್ತ್ರಚಿಕಿತ್ಸೆಗಳನ್ನು, 61 ವಂಕಿಧಾರಣೆಗಳನ್ನು ಮಾಡಲಾಗಿತ್ತು. ಮಕ್ಕಳ ಮತ್ತು ಸ್ತ್ರೀಯರ ಆರೋಗ್ಯ ಕಾರ್ಯಕ್ರಮದಲ್ಲಿ 125 ಮಕ್ಕಳಿಗೆ ಡಿ. ಪಿ. ಟಿ. ಲಸಿಕೆಯನ್ನು ಹಾಕಲಾಗಿತ್ತು ಮತ್ತು 134 ತಾಯಂದಿರಿಗೆ ಟಿ. ಟಿ. ಲಸಿಕೆಯನ್ನು ಕೊಡಲಾಗಿತ್ತು.

ರೂರಲ್ ಇಂಡಿಯಾ ಹೆಲ್ತ್ ಪ್ರಾಜೆಕ್ಟ್ ಆಸ್ಪತ್ರೆ, ಅಮ್ಮತ್ತಿ

ರೂರಲ್ ಇಂಡಿಯಾ ಹೆಲ್ತ್ ಪ್ರಾಜೆಕ್ಟ್ ಆಸ್ಪತ್ರೆಯು ಅಮ್ಮತ್ತಿಯಲ್ಲಿ ಕೊಡಗಿನ ಹಾಗೂ ಸುತ್ತಮುತ್ತಲ ಪ್ರದೇಶಗಳ ಜನರಿಗೆ ಉನ್ನತ ಮಟ್ಟದ ವೈದ್ಯಕೀಯ ಸೌಲಭ್ಯಗಳನ್ನು ಕಲ್ಪಿಸಲು, ರೂರಲ್ ಹೆಲ್ತ್ ಇಂಡಿಯಾ ಪ್ರಾಜೆಕ್ಟ್ ಚಿಕಾಗೊ ಮತ್ತು ಅಮೆರಿಕಾ ಇಂಡಿಯಾ ಡಿಸ್ಪೆನ್ಸರಿ ಟ್ರಸ್ಟ್, ಅಮ್ಮತ್ತಿ ಇವರ ಜಂಟೀ ಸ್ವಾಮ್ಯದಲ್ಲಿ 1968ರಲ್ಲಿ ಪ್ರಾರಂಭವಾಯಿತು. ಮೊದಲು ಇದನ್ನು ಅಮೆರಿಕಾ-ಇಂಡಿಯಾ ಔಷಧಾಲಯವೆಂದು ಕರೆಯುತ್ತಿದ್ದರು. ಮೊದಲಿಗೆ ಈ ಆಸ್ಪತ್ರೆಯ ವೆಚ್ಚವನ್ನು ಚಿಕಾಗೊ ರೂರಲ್ ಹೆಲ್ತ್ ಇಂಡಿಯಾ ಪ್ರಾಜೆಕ್ಟ್‌ನವರೇ ನೋಡಿಕೊಳ್ಳುತ್ತಿದ್ದರು ; ಆದರೆ 1971 ರಿಂದೀಚೆಗೆ ಅಮ್ಮತ್ತಿ ಟ್ರಸ್ಟ್‌ನವರೇ ಪೂರ್ಣ ಜವಾಬ್ದಾರಿಯನ್ನು ಹೊಂದಿದ್ದಾರೆ. ಈಗ ಕನ್ಸಾಲಿಡೇಟೆಡ್ ಕಾಫಿ ಲಿಮಿಟೆಡ್, ಪೊಲ್ಲಿಬೆಟ್ಟ, ಬೊಂಬಾಯಿ ಬರ್ಮಾ ಟ್ರೇಡಿಂಗ್ ಕಾರ್ಪೊರೇಷನ್, ಸಿದ್ದಾಪುರ, ಎಲ್ಕ್‌ಹಿಲ್ ಎಸ್ಟೇಟ್, ಕಾಫಿ ಬೋರ್ಡ್ ಮತ್ತು ಕೆಲವು ಕಾಫಿ ಪ್ಲಾಂಟರುಗಳ ಸಹಾಯದಿಂದ ನಡೆಯುತ್ತಿದೆ. ಚಿಕಾಗೋ ಪ್ರಾಜೆಕ್ಟ್‌ನವರು 1981ರಲ್ಲಿ ಸ್ಥಳೀಯ ಟ್ರಸ್ಟಿಗೆ ಆಸ್ಪತ್ರೆಯನ್ನು ಪೂರ್ಣವಾಗಿ ವಹಿಸಿಕೊಟ್ಟರು. ಆಸ್ಪತ್ರೆಯ ಕಟ್ಟಡ, ಸಿಬ್ಬಂದಿ ವರ್ಗದವರಿಗೆ ವಸತಿಗಳನ್ನು 1968ರಲ್ಲಿ

ಸುಮಾರು 22 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕಟ್ಟಲಾಗಿದೆ. ಈ ಆಸ್ಪತ್ರೆಯಲ್ಲಿ 57 ಹಾಸಿಗೆಗಳ ಸೌಕರ್ಯವಿದ್ದು, ಅವುಗಳಲ್ಲಿ 40 ಹಾಸಿಗೆಗಳನ್ನು ಸಾರ್ವಜನಿಕರ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಆಸ್ಪತ್ರೆಯಲ್ಲಿ 1990ರಲ್ಲಿ ಒಬ್ಬ ಮುಖ್ಯ ವೈದ್ಯಾಧಿಕಾರಿಗಳ ಜೊತೆಗೆ ನಾಲ್ಕು ಮಂದಿ ವೈದ್ಯರು ಆರು ಜನ ನರ್ಸ್‌ಗಳು, ಇಬ್ಬರು ಅರೆ ವೈದ್ಯ ಕಾರ್ಯಕರ್ತರು ಇಬ್ಬರು ಔಷಧ ವಿತರಕರು, ಮೂರು ಜನ ಗುಮಾಸ್ತರು ಮತ್ತು ಇತರ ಸೇವಾ ವರ್ಗದವರಿದ್ದರು. ಆಸ್ಪತ್ರೆಯು ಪ್ರಯೋಗಶಾಲೆ, ಕ್ಷ-ಕಿರಣ ಯಂತ್ರ, ಪೂರ್ಣ ಪ್ರಮಾಣದ ಶಸ್ತ್ರ ಚಿಕಿತ್ಸಾ ಕೊಠಡಿ, ಮಕ್ಕಳಿಗೆ ಇನ್‌ಕ್ಯುಬೇಟರ್ ಮೊದಲಾದ ಅನುಕೂಲಗಳನ್ನು ಹೊಂದಿದೆ. ಈ ಆಸ್ಪತ್ರೆಗೆ ಬರುವ ರೋಗಿಗಳಲ್ಲಿ ಕೊಕ್ಕೆಹುಳುವಿನಿಂದ (ಹುಕ್‌ವರ್ಮ್) ಬರುವ ರಕ್ತಹೀನತೆ ಸಾಮಾನ್ಯವಾಗಿ ಕಂಡುಬರುವುದೆಂದು ವರದಿಯಾಗಿದೆ. ಬೇಧಿ, ಆಮಶಂಕೆ, ವಿಷಮಶೀತಜ್ವರಗಳೂ ಸಾಮಾನ್ಯವಾಗಿ ಕಂಡು ಬರುವ ರೋಗಗಳು. ಬರುವ ರೋಗಿಗಳು ಕಾಫಿ ತೋಟಗಳಲ್ಲಿ ಕೆಲಸ ಮಾಡುವುದರಿಂದ ಮೃದು ಅಂಗಭಾಗಗಳ ಮತ್ತು ಮೂಳೆಗಳ ಗಾಯಗಳಿಗೆ ಚಿಕಿತ್ಸೆಗೆ ಹೆಚ್ಚಾಗಿ ಬರುತ್ತಾರೆಂದು ವರದಿಯಾಗಿದೆ. ಆಸ್ಪತ್ರೆಯಲ್ಲಿ 1989ರಲ್ಲಿ 11,755 ಹೊರ ರೋಗಿಗಳೂ, 1,371 ಒಳ ರೋಗಿಗಳೂ ಚಿಕಿತ್ಸೆ ಪಡೆದಿದ್ದರು, 81 ಹೆರಿಗೆಗಳನ್ನು ಮಾಡಲಾಗಿತ್ತು, 641 ಶಸ್ತ್ರಚಿಕಿತ್ಸೆಗಳನ್ನು ಮಾಡಲಾಗಿತ್ತು, 770 ಕ್ಷ-ಕಿರಣ ಚಿತ್ರಗಳನ್ನು ತೆಗೆಯಲಾಗಿತ್ತು ಮತ್ತು ಒಂದು ಸ್ಕ್ರೀನಿಂಗ್ ಮಾಡಲಾಗಿತ್ತು. ಆ ವರ್ಷ 119 ಕ್ಷಯ ರೋಗಿಗಳೂ, ನಾಲ್ಕು ಜನ ಕುಷ್ಠರೋಗಿಗಳೂ ಚಿಕಿತ್ಸೆ ಪಡೆಯುತ್ತಿದ್ದರು. ಕುಟುಂಬ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ 1989-90ರಲ್ಲಿ 49 ಶಸ್ತ್ರಚಿಕಿತ್ಸೆಗಳೂ, 9 ವಂಕಿ ಧಾರಣೆಗಳೂ ಮಾಡಲ್ಪಟ್ಟಿವೆ. ಆ ವರ್ಷ ಮಕ್ಕಳ ಮತ್ತು ಸ್ತ್ರೀಯರ ಆರೋಗ್ಯ ಕಾರ್ಯಕ್ರಮದಡಿಯಲ್ಲಿ 171 ಡಿ. ಪಿ. ಟಿ., 350 ಟಿ. ಟಿ. ಲಸಿಕೆಗಳನ್ನು, 170 ಮಕ್ಕಳಿಗೆ ಬಾಯಿ ಮೂಲಕ ಪೋಲಿಯೋ ರೋಗನಿರೋಧಕಗಳನ್ನು ಹಾಕಲಾಯಿತು.

### ಸಿ. ಸಿ. ಆಸ್ಪತ್ರೆ, ಪೊಲ್ಲಿಬೆಟ್ಟ

ಕನ್ಸಾಲಿಡೇಟೆಡ್ ಕಾಫಿ ಎಸ್ಟೇಟ್ ಆಸ್ಪತ್ರೆ, ಪೊಲ್ಲಿಬೆಟ್ಟ, 1952ರಲ್ಲಿ ಪ್ರಾರಂಭವಾಯಿತು. ಇದು ಈಗ 30 ಹಾಸಿಗೆಗಳ ಆಸ್ಪತ್ರೆಯಾಗಿದ್ದು, ಕಾಫಿ ತೋಟಗಳಲ್ಲಿ ಕೆಲಸ ಮಾಡುವವರಿಗೆ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುತ್ತದೆ. ಈ ಆಸ್ಪತ್ರೆಯ ಅಧೀನದಲ್ಲಿ 16 ಉಪಕೇಂದ್ರಗಳಿವೆ. ಈ ಆಸ್ಪತ್ರೆಯಲ್ಲಿ ಇಬ್ಬರು ವೈದ್ಯರುಗಳಿದ್ದು ಅವರ ಸಹಾಯಕ್ಕಾಗಿ ಐದು ಜನ ನರ್ಸ್‌ಗಳು, ಇಬ್ಬರು ಔಷಧ ವಿತರಕರು ಕೆಲಸ ಮಾಡುತ್ತಿದ್ದಾರೆ. ಆಸ್ಪತ್ರೆಯಲ್ಲಿ ಕ್ಷ-ಕಿರಣ ಮತ್ತು ಪ್ರಯೋಗಶಾಲೆಯು ಸೌಲಭ್ಯವಿದ್ದು ಅವುಗಳಲ್ಲಿ ಒಬ್ಬೊಬ್ಬ ತಾಂತ್ರಿಕ ಸಹಾಯಕರು ಕೆಲಸ ಮಾಡುತ್ತಿದ್ದಾರೆ. ಈ ಆಸ್ಪತ್ರೆಯಲ್ಲಿ 1989ರಲ್ಲಿ 11,250 ಜನ ಹೊರರೋಗಿಗಳೂ, 410 ಜನ ಒಳರೋಗಿಗಳೂ ಚಿಕಿತ್ಸೆ ಪಡೆದಿದ್ದರು, 122 ಪ್ರಸವಗಳಾಗಿದ್ದವು, 850 ಕ್ಷ-ಕಿರಣ ಚಿತ್ರಗಳನ್ನು ತೆಗೆಯಲಾಗಿತ್ತು ಮತ್ತು ಐದು ಸ್ಕ್ರೀನಿಂಗ್‌ಗಳನ್ನು ಮಾಡಲಾಗಿತ್ತು. ಆ ವರ್ಷ 10 ಜನ ಕ್ಷಯರೋಗಿಗಳು, ಒಬ್ಬ ಕುಷ್ಠರೋಗಿಯು ಚಿಕಿತ್ಸೆ ಪಡೆಯುತ್ತಿದ್ದರು. ಕುಟುಂಬ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ 1989-90ರಲ್ಲಿ 67 ಶಸ್ತ್ರಚಿಕಿತ್ಸೆಗಳನ್ನು ಮಾಡಲಾಗಿತ್ತು. ಎರಡು ವಂಕಿಧಾರಣೆಗಳಾಗಿದ್ದವು. ಮಕ್ಕಳ ಮತ್ತು ಸ್ತ್ರೀಯರ ಕಾರ್ಯಕ್ರಮದಡಿಯಲ್ಲಿ 440 ಡಿ.ಪಿ.ಟಿ. ರೋಗ ನಿರೋಧಕ ಚುಚ್ಚುಮದ್ದನ್ನು ಹಾಕಲಾಗಿತ್ತು.

### ಸಾಯಿಶಂಕರ ಆರೋಗ್ಯ ಕೇಂದ್ರ, ಪೊನ್ನಂಪೇಟೆ

ಸಾಯಿಶಂಕರ ಆರೋಗ್ಯ ಕೇಂದ್ರವು ಪ್ರಶಾಂತ ನಿಲಯದ ಆಶ್ರಯದಲ್ಲಿ ಪೊನ್ನಂಪೇಟೆಯಲ್ಲಿ 1990ರಲ್ಲಿ ಪ್ರಾರಂಭವಾಯಿತು. ಇದು ಗ್ರಾಮೀಣ ಜನರಿಗೆ ವೈದ್ಯಕೀಯ ಸೌಲಭ್ಯವನ್ನು ಒದಗಿಸುವ, ಆರೋಗ್ಯದ ಬಗ್ಗೆ ಸೂಕ್ತ ಅರಿವು ಮೂಡಿಸುವ ಉದ್ದೇಶಗಳನ್ನು ಹೊಂದಿದೆ. ಇದರ ಕಟ್ಟಡವನ್ನು 5.75 ಲಕ್ಷ ರೂ. ವೆಚ್ಚದಲ್ಲಿ 1989ರಲ್ಲಿ ಕಟ್ಟಲಾಗಿದ್ದು 18 ಹಾಸಿಗೆಗಳ ಸೌಕರ್ಯವನ್ನು ಹೊಂದಿದೆ. ಸದ್ಯದಲ್ಲಿ ಸಿಬ್ಬಂದಿ ವರ್ಗದಲ್ಲಿ ಒಬ್ಬ ಮುಖ್ಯ ವೈದ್ಯಾಧಿಕಾರಿಗಳು, ಒಬ್ಬ ಉಪ ವೈದ್ಯಾಧಿಕಾರಿಗಳು ಮೂರು ಆರೋಗ್ಯ ಸಹಾಯಕಿಯರು ಒಬ್ಬ ಗುಮಾಸ್ತ ಮತ್ತು ಒಬ್ಬ ಆಯಾ ಇದ್ದಾರೆ. ಒಳರೋಗಿಗಳಿಗೆ ಸದ್ಯದಲ್ಲಿಯೇ ಅವಕಾಶ ಮಾಡಿಕೊಡುವ ಯೋಜನೆ ಇದ್ದು ಈಗ ಹೊರರೋಗಿಗಳನ್ನು ಮಾತ್ರ ಪರೀಕ್ಷಿಸಲಾಗುತ್ತದೆ.

### ಸಮುದಾಯ ಆರೋಗ್ಯ ಕೇಂದ್ರಗಳು

ಸಮುದಾಯ ಆರೋಗ್ಯ ಕೇಂದ್ರಗಳನ್ನು ತಾಲೂಕು ಕೇಂದ್ರಗಳಲ್ಲೂ ಅಥವಾ ಇತರ ಪ್ರದೇಶಗಳಲ್ಲೂ ಪ್ರಾರಂಭಿಸಲಾಗುತ್ತಿವೆ. ಇವುಗಳು ಪ್ರತಿಯೊಂದೂ ಸುಮಾರು ಒಂದು ಲಕ್ಷ ಪ್ರಜಾ ಸಂಖ್ಯೆಗೆ ಅಥವಾ ನಾಲ್ಕು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಒಂದರಂತೆ ಸ್ಥಾಪಿಸಲ್ಪಡುತ್ತವೆ. ಸಾಮಾನ್ಯವಾಗಿ ಇವುಗಳಲ್ಲಿ 50 ಹಾಸಿಗೆಗಳ ಸೌಕರ್ಯವಿದ್ದು ಆ ಪ್ರದೇಶದ ಇತರ ಔಷಧಾಲಯ/ಆಸ್ಪತ್ರೆಗಳಿಗೆ ಮಾರ್ಗ

ದರ್ಶಕ (ರೆಫರಲ್)ವಾಗಿರುತ್ತದೆ. ಜೊತೆಗೆ ಆನೇಕ ವೈದ್ಯಕೀಯ ತಜ್ಞರನ್ನು ಒಳಗೊಂಡಿರುತ್ತವೆ. ಜಿಲ್ಲೆಯಲ್ಲಿ ಪೊಲ್ಲಿಬೆಟ್ಟ ಮತ್ತು ಶನಿವಾರಸಂತೆಗಳಲ್ಲಿ ಸಮುದಾಯ ಆರೋಗ್ಯ ಕೇಂದ್ರಗಳಿವೆ. ಅವುಗಳ ಕೆಲವು ಮುಖ್ಯ ಅಂಕಿ ಅಂಶಗಳನ್ನು 1989–90ಕ್ಕೆ ಈ ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ.

| ವಿಷಯಗಳು | ಪೊಲ್ಲಿಬೆಟ್ಟ | ಶನಿವಾರ ಸಂತೆ |
|---|---|---|
| ಸ್ಥಾಪಿತವಾದ ವರ್ಷ | — | 1942 |
| ಹಾಸಿಗೆಗಳ ಸಂಖ್ಯೆ | 52 | 30 |
| ಉಪ ಕೇಂದ್ರಗಳು | — | 13 |
| ಚಿಕಿತ್ಸೆ ಪಡೆದ ಹೊರ ರೋಗಿಗಳು | 7,279 | 20,036 |
| ಚಿಕಿತ್ಸೆ ಪಡೆದ ಒಳರೋಗಿಗಳು | 36 | 960 |
| ಹೆರಿಗೆಗಳು | 26 | 236 |
| ಶಸ್ತ್ರಚಿಕಿತ್ಸೆ | ಇಲ್ಲ | 400 |
| ವೆಸೆಕ್ಟಮಿ | ಇಲ್ಲ | ಇಲ್ಲ |
| ಟ್ಯುಬೆಕ್ಟಮಿ | 111 | 403 |
| ವಂಕಿಧಾರಣೆಗಳು | 51 | 192 |
| ಡಿ. ಪಿ. ಟಿ. | 154 | 828 |
| ಡಿ ಮತ್ತು ಟಿ. | 110 | 880 |
| ಟಿ. ಟಿ. ತಾಯಂದಿರಿಗೆ | 70 | 960 |
| ಟಿ. ಟಿ. ಮಕ್ಕಳಿಗೆ | — | — |
| ಪೋಲಿಯೋ | 154 | 828 |
| ಕ್ಷಯರೋಗಿಗಳು | 4 | 34 |
| ಕುಷ್ಟರೋಗಿಗಳು | ಇಲ್ಲ | 02 |
| ಕ್ಷ-ಕಿರಣ ಬಳಕೆ | ಇಲ್ಲ | 03 |

ಪೊಲ್ಲಿಬೆಟ್ಟದ ಸಮುದಾಯ ಆರೋಗ್ಯ ಕೇಂದ್ರವು 1989ಕ್ಕೆ ಮುಂಚೆ ಪ್ರಾಥಮಿಕ ಆರೋಗ್ಯ ಘಟಕವಾಗಿತ್ತು. ಈ ಕೇಂದ್ರದಲ್ಲಿ ಕ್ಷ–ಕಿರಣ, ಪ್ರಯೋಗಶಾಲೆ, ಮತ್ತು ದಂತ ಚಿಕಿತ್ಸೆಯ ಸೌಕರ್ಯಗಳಿವೆ. ಇಲ್ಲಿ ಒಟ್ಟು ನಾಲ್ಕು ಜನ ವೈದ್ಯಾಧಿಕಾರಿಗಳಿದ್ದು, ಸಹಾಯಕ್ಕೆ ಮೂರು ಜನ ಶುಶ್ರೂಷಾದಾದಿಯರು (ಸ್ಟಾಫ್ ನರ್ಸ್), ಇಬ್ಬರು ಔಷಧ ವಿತರಕರು, ಒಬ್ಬೊಬ್ಬ ಕಚೇರಿ ಅಧೀಕ್ಷಕ ಮತ್ತು ಪ್ರಥಮ ದರ್ಜೆ ಗುಮಾಸ್ತರು, ಮೂರು ಜನ ದ್ವಿತೀಯ ದರ್ಜೆ ಗುಮಾಸ್ತರು, ಒಬ್ಬೊಬ್ಬ ಕ್ಷ–ಕಿರಣ ತಜ್ಞ, ಪ್ರಯೋಗತಜ್ಞ, ಕಿರಿಯ ಆರೋಗ್ಯ ಸಹಾಯಕಿಯರು ಮತ್ತು 20 ಇತರ ಸಿಬ್ಬಂದಿಯವರೂ 1989-90ರಲ್ಲಿ ಕೆಲಸ ಮಾಡುತ್ತಿದ್ದರು. ಈ ಕೇಂದ್ರದ ಮಿತಿಯಲ್ಲಿ ಕಜ್ಜಿ, ಅತಿಸಾರ, ಬೇಧಿ, ಕ್ಷಯ, ಸಾಮಾನ್ಯ ಜ್ವರ, ರಕ್ತಹೀನತೆ ಮೊದಲಾದವು ಸಾಮಾನ್ಯವಾಗಿ ಕಂಡು ಬರುವುದೆಂದು ವರದಿಯಾಗಿದೆ. ಶನಿವಾರಸಂತೆ ಸಮುದಾಯ ಆರೋಗ್ಯ ಕೇಂದ್ರದಲ್ಲಿ 1989–90ರಲ್ಲಿ ಇಬ್ಬರು ಪುರುಷ ವೈದ್ಯಾಧಿಕಾರಿಗಳು, ಒಬ್ಬ ಮಹಿಳಾ ವೈದ್ಯಾಧಿಕಾರಿ, ಒಬ್ಬ ದಂತ ವೈದ್ಯಾಧಿಕಾರಿಗಳು, ಮೂರು ಜನ ಶುಶ್ರೂಷಾದಾದಿಯರು, ನಾಲ್ಕು ಜನ ಕಿರಿಯ ಆರೋಗ್ಯ ಸಹಾಯಕರೂ, 11 ಜನ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು, ಒಬ್ಬೊಬ್ಬ ಮಹಿಳಾ ಆರೋಗ್ಯ ಸಂದರ್ಶಕಿ, ಕ್ಷೇತ್ರ ಆರೋಗ್ಯ ಶಿಕ್ಷಕ, ಹಿರಿಯ ಆರೋಗ್ಯ ಸಹಾಯಕ, ಕಿರಿಯ ಪ್ರಯೋಗ ತಜ್ಞ, ಕ್ಷ-ಕಿರಣ ತಜ್ಞ, ಔಷಧ ವಿತರಕರು, ಕಚೇರಿಯಲ್ಲಿ ಒಬ್ಬೊಬ್ಬ ಅಧೀಕ್ಷಕ, ಪ್ರಥಮ ದರ್ಜೆ ಗುಮಾಸ್ತ, ಬೆರಳಚ್ಚುಗಾರರು, ಮೂರು ಜನ ದ್ವಿತೀಯ ದರ್ಜೆ ಗುಮಾಸ್ತರು, 19 ಜನ ಗ್ರೂಪ್ ಡಿ ನೌಕರರೂ ಮತ್ತು ಚಾಲಕರಿದ್ದರು.

## ಪ್ರಾಥಮಿಕ ಆರೋಗ್ಯ ಕೇಂದ್ರಗಳು

ಪ್ರಾಥಮಿಕ ಆರೋಗ್ಯ ಕೇಂದ್ರಗಳು ಗ್ರಾಮಾಂತರ ಪ್ರದೇಶಗಳಲ್ಲಿ ಮೂಲಭೂತ ವೈದ್ಯಕೀಯ ಚಿಕಿತ್ಸೆ, ರೋಗಗಳ ತಡೆಗಟ್ಟುವಿಕೆ, ಸಾರ್ವಜನಿಕ ಆರೋಗ್ಯ ಸುಧಾರಣೆ, ಮುನ್ನೆಚ್ಚರಿಕೆಯ ಕಾರ್ಯಕ್ರಮ ಮೊದಲಾದ ಸೇವೆಗಳನ್ನು ಒದಗಿಸುತ್ತವೆ. ರಾಷ್ಟ್ರೀಯ ಮತ್ತು ರಾಜ್ಯಗಳ ಆರೋಗ್ಯ ಕಾರ್ಯಕ್ರಮಗಳಾದ ಮಲೇರಿಯಾ ನಿರ್ಮೂಲನೆ, ಕ್ಷಯ ಮತ್ತು ಕುಷ್ಟ ರೋಗಗಳ ನಿವಾರಣೆ, ರೋಗ ನಿರೋಧಕ ಲಸಿಕೆಗಳನ್ನು ಹಾಕುವ ಕಾರ್ಯಕ್ರಮ, ಕುಟುಂಬ ಕಲ್ಯಾಣ ಮೊದಲಾದವುಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತವೆ. ಇವುಗಳು ಗ್ರಾಮಾಂತರ ಪ್ರದೇಶಗಳಲ್ಲಿ ಆರೋಗ್ಯ ಕಾರ್ಯಕ್ರಮಗಳ ಕೇಂದ್ರಗಳಾಗಿವೆ. ಹಿಂದೆ ಎರಡು ರೀತಿಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಿದ್ದವು. ಭಾರತ ಸರ್ಕಾರದ ಮಾದರಿಯದು ಮತ್ತು ಮೈಸೂರು ಮಾದರಿಯದು. ಈಗ ಇವೆರಡನ್ನು ಒಂದೇ ಹೆಸರಿನಿಂದ ಕರೆಯುತ್ತಾರೆ. ಭಾರತ ಸರ್ಕಾರದ ಮಾದರಿಯ ಪ್ರಾಥಮಿಕ ಆರೋಗ್ಯ ಕೇಂದ್ರಗಳು 1957 ರಿಂದೀಚೆಗೆ ಸ್ಥಾಪಿಸಲ್ಪಟ್ಟಿವೆ. ಕೊಡಗು ಜಿಲ್ಲೆಯಲ್ಲಿ 1960ರ ಹೊತ್ತಿಗೆ ಸುಂಟಿಕೊಪ್ಪ, ಹುದಿಕೇರಿ, ಮತ್ತು ನಾಪೋಕ್ಲು ಗಳಲ್ಲಿ ಭಾರತ ಸರ್ಕಾರದ ಮಾದರಿಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಿದ್ದವು. ಸುಂಟಿಕೊಪ್ಪ ಮತ್ತು ಹುದಿಕೇರಿ ಕೇಂದ್ರಗಳಿಗೆ ಯುನಿಸೆಫ್ ಸಂಸ್ಥೆಯ ಹಣ ಸಹಾಯವಿತ್ತು. ಮೊದಲಿಗೆ

ಈ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಒಬ್ಬ ವೈದ್ಯಾಧಿಕಾರಿ, ನಾಲ್ಕು ಜನ ದಾದಿಯರು ಒಬ್ಬ ಶುಶ್ರೂಷಕಿ ಅಥವಾ ಆರೋಗ್ಯ ಸಂದರ್ಶಕಿ, ಒಬ್ಬ ಔಷಧ ವಿತರಕ, ಒಬ್ಬ ಕಿರಿಯ ಆರೋಗ್ಯ ಪರಿವೀಕ್ಷಕ ಮತ್ತು ಇಬ್ಬರು ಸೇವಕರು ಇದ್ದರು. ಆರೋಗ್ಯ ಕಾರ್ಯಕ್ರಮಗಳು ಹೆಚ್ಚಿದಂತೆಲ್ಲಾ ಸಿಬ್ಬಂದಿ ವರ್ಗದವರ ಮತ್ತು ವೈದ್ಯಾಧಿಕಾರಿಗಳ ಸಂಖ್ಯೆ ಹೆಚ್ಚುತ್ತಾ ಬಂತು. ಈಗ ಪ್ರತೀಯೊಂದು ಆರೋಗ್ಯ ಕೇಂದ್ರದಲ್ಲಿಯೂ ಕಡೆಯ ಪಕ್ಷ ಇಬ್ಬರು ವೈದ್ಯಾಧಿಕಾರಿಗಳಿರುತ್ತಾರೆ. ಅವರಲ್ಲಿ ಒಬ್ಬರು ಮಹಿಳಾ ವೈದ್ಯಾಧಿಕಾರಿಗಳು. ಇವರಿಗೆ ಸಹಾಯಕರಾಗಿ ಔಷಧ ವಿತರಕರೂ, ಶುಶ್ರೂಷಕಿಯರೂ, ದಾದಿಯರೂ, ಮಹಿಳಾ ಆರೋಗ್ಯ ಸಂದರ್ಶಕಿಯರು, ಹಿರಿಯ ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರೂ, ಪ್ರಯೋಗ ಶಾಲೆಯ ತಂತ್ರಜ್ಞರೂ, ಆರೋಗ್ಯ ಶಿಕ್ಷಕರೂ ಮತ್ತು ಮಹಿಳಾ ಮತ್ತು ಪುರುಷ ವಿವಿಧೊದ್ದೇಶ ಆರೋಗ್ಯ ಕಾರ್ಯಕರ್ತರೂ ಇದ್ದಾರೆ. ಜಿಲ್ಲೆಯಲ್ಲಿ 1989-90ರಲ್ಲಿ 15 ಪ್ರಾಥಮಿಕ ಆರೋಗ್ಯ ಕೇಂದ್ರಗಳಿದ್ದವು. ಸಾಮಾನ್ಯವಾಗಿ ಪ್ರತೀಯೊಂದು ಆರೋಗ್ಯ ಕೇಂದ್ರವು ಸುಮಾರು 30,000 ಜನರ ಆರೋಗ್ಯ ಮತ್ತು ವೈದ್ಯಕೀಯ ಅವಶ್ಯಕತೆಗಳನ್ನು ಪೂರೈಸುತ್ತದೆ. ವಾರ್ಷಿಕವಾಗಿ ಪ್ರತೀಯೊಂದು ಆರೋಗ್ಯ ಕೇಂದ್ರಕ್ಕೂ ಸುಮಾರು 30,000 ರೂಪಾಯಿ ಮೌಲ್ಯಗಳ ಔಷಧಿಗಳನ್ನು ಸರ್ಕಾರವು ಒದಗಿಸುತ್ತದೆ. ನಾಪೋಕ್ಲು, ಹುದಿಕೇರಿ, ಕುಟ್ಟ, ಬಾಳೆಲೆ ಮತ್ತು ಸುಂಟಿಕೊಪ್ಪ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಒಬ್ಬೊಬ್ಬ ಮಹಿಳಾ ವೈದ್ಯಾಧಿಕಾರಿಗಳಿದ್ದಾರೆ.

ಚೆಯ್ಯಂಡಾಣೆ, ಸಂಪಾಜೆ, ತಿತಿಮತಿ, ಮರೆನಾಡು, ಕೊಡ್ಲಿಪೇಟೆಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮೊದಲಿಗೆ ಆರೋಗ್ಯ ಘಟಕಗಳಾಗಿದ್ದು 1989ರಲ್ಲಿ ಅವುಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನಾಗಿ ಪರಿವರ್ತಿಸಲಾಯಿತು. ನಾಪೋಕ್ಲು ಪ್ರಾಥಮಿಕ ಆರೋಗ್ಯ ಕೇಂದ್ರವು 1892ರಲ್ಲಿ ಔಷಧಾಲಯವಾಗಿ ಪ್ರಾರಂಭಿಸಲ್ಪಟ್ಟು 1964ರಲ್ಲಿ ಭಾರತ ಸರ್ಕಾರ ಮಾದರಿಯ ಆರೋಗ್ಯ ಕೇಂದ್ರವಾಗಿ ಪರಿವರ್ತಿಸಲ್ಪಟ್ಟಿತು. ಈ ಕೇಂದ್ರದಲ್ಲಿ 1957ರಲ್ಲಿ ಹೆರಿಗೆ ವಾರ್ಡನ್ನೂ, 1965ರಲ್ಲಿ ಶಸ್ತ್ರಚಿಕಿತ್ಸಾ ಕೊಠಡಿಯನ್ನೂ 10 ಹಾಸಿಗೆಗಳ ವಾರ್ಡನ್ನೂ ಕಟ್ಟಿಸಲಾಗಿದೆ. ಇಲ್ಲಿ ಕ್ಷ-ಕಿರಣ ಹಾಗೂ ನೇತ್ರ ತಜ್ಞರ ಸೌಲಭ್ಯವಿದೆ. ಕುಟ್ಟ ಪ್ರಾಥಮಿಕ ಆರೋಗ್ಯ ಕೇಂದ್ರವು 1955ರಲ್ಲಿ 'ಗ್ರೂಪ್ ಆಸ್ಪತ್ರೆ'ಯಾಗಿ ಪ್ರಾರಂಭಿಸಲ್ಪಟ್ಟು, 1987ರಲ್ಲಿ ಪರಿಶಿಷ್ಟ ವರ್ಗದ ಜನರ ಆರೋಗ್ಯ ಕೇಂದ್ರವಾಗಿ, 1988ರಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವಾಯಿತು. ಭಾಗಮಂಡಲದಲ್ಲಿ ಆಯುರ್ವೇದ ಔಷಧಾಲಯವಾಗಿ ಪ್ರಾರಂಭಗೊಂಡ ಆಸ್ಪತ್ರೆಯು ಪ್ರಾಥಮಿಕ ಆರೋಗ್ಯ ಕೇಂದ್ರವಾಗಿ 1984ರಲ್ಲಿ ಪರಿವರ್ತನೆಗೊಂಡಿತು. ಈಗ ಇದು ಗಿರಿಜನ-ಉಪಯೋಜನೆಯಲ್ಲಿ ಸೇರ್ಪಡೆಯಾಗಿದ್ದು ಜಿಲ್ಲೆಯ ಗಡಿ ಪ್ರದೇಶದ ಜನರಿಗೆ ಆರೋಗ್ಯ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುತ್ತಿದೆ. ತುಲಾ ಸಂಕ್ರಮಣ ಕಾಲದಲ್ಲಿ ಈ ಕೇಂದ್ರವು ಆರೋಗ್ಯ ವಸ್ತು ಪ್ರದರ್ಶನವನ್ನು ಏರ್ಪಡಿಸುತ್ತಾ ಬಂದಿದೆ.

ಕೊಡಗು ಜಿಲ್ಲೆಗೆ 1989-90ರಲ್ಲಿ 389 ಆರೋಗ್ಯ ಮಾರ್ಗದರ್ಶಕರ ಹುದ್ದೆಗಳನ್ನು ಮಂಜೂರಾತಿ ಮಾಡಿದ್ದು ಅವುಗಳಲ್ಲಿ 317 ಹುದ್ದೆಗಳು ಭರ್ತಿಯಾಗಿದ್ದವು. ಪ್ರತೀಯೊಂದು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೂ ಸಂಬಂಧಿಸಿದಂತೆ ಕೆಲಸ ಮಾಡುತ್ತಿದ್ದ ಆರೋಗ್ಯ ಮಾರ್ಗದರ್ಶಕರ ಸಂಖ್ಯೆಗಳು ಈ ರೀತಿ ಇವೆ : ನಾಪೋಕ್ಲು-25, ಭಾಗಮಂಡಲ-36, ಮೂರ್ನಾಡು-13, ಶನಿವಾರಸಂತೆ-74, ಹುದಿಕೇರಿ-34, ಬಾಳೆಲೆ-32, ಕುಟ್ಟ-9, ಶಾಂತಳ್ಳಿ-28 ಮತ್ತು ಸುಂಟಿಕೊಪ್ಪ-66. ಕೆಲವು ಉಪಕೇಂದ್ರಗಳಿಗೆ ಕಟ್ಟಡಗಳಿದ್ದು 1989-90ರಲ್ಲಿ ಎಷ್ಟು ಉಪಕೇಂದ್ರಗಳಿಗೆ ಕಟ್ಟಡಗಳಿದ್ದವೆಂಬುದನ್ನು ಆಯಾಯ ಸಂಬಂಧಪಟ್ಟ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮುಂದೆ ಕೊಡಲಾಗಿದೆ. ಕುಟ್ಟ-5, ತಿತಿಮತಿ-16, ಭಾಗಮಂಡಲ-6, ಶಾಂತಳ್ಳಿ-11 ಸಂಪಾಜೆ-6, ಬಾಳೆಲೆ-8, ಶ್ರೀಮಂಗಲ-2, ಮೂರ್ನಾಡು-7, ಮರೆನಾಡು-5, ಹುದಿಕೇರಿ-12, ಹೆಬ್ಬಾಲೆ-4, ಕೊಡ್ಲಿಪೇಟೆ-3, ಶನಿವಾರಸಂತೆ-10, ನಾಪೋಕ್ಲು-4, ಚೆಯ್ಯಂಡಾಣೆ-2, ಸುಂಟಿಕೊಪ್ಪ-8.

ಪುಟ 768-769ರಲ್ಲಿ 1989-90ರ ಕೊಡಗು ಜಿಲ್ಲೆಯಲ್ಲಿದ್ದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕೆಲವು ಮುಖ್ಯ ಮಾಹಿತಿಗಳನ್ನು ಕೊಡಲಾಗಿದೆ.

## ಪ್ರಾಥಮಿಕ ಆರೋಗ್ಯ ಘಟಕಗಳು

ಜಿಲ್ಲೆಯಲ್ಲಿ ಹಿಂದೆಯಿದ್ದ ಕೆಲವು ಸಿವಿಲ್ ಆಸ್ಪತ್ರೆಗಳು, ಔಷಧಾಲಯಗಳು, ಅರಣ್ಯ ಇಲಾಖೆಯ ಔಷಧಾಲಯಗಳು, ಆಯುರ್ವೇದ ಔಷಧಾಲಯಗಳನ್ನು 1978 ರಿಂದ ಸರ್ಕಾರದವರು ಪ್ರಾಥಮಿಕ ಆರೋಗ್ಯ ಘಟಕಗಳೆಂದು ಕರೆದಿದ್ದಾರೆ. ಹೋಮಿಯೋಪತಿ, ಆಯುರ್ವೇದ ಔಷಧಾಲಯಗಳೂ ಕೂಡ ಪ್ರಾಥಮಿಕ ಆರೋಗ್ಯ ಘಟಕಗಳೆಂದು ಕರೆಯಲ್ಪಟ್ಟಿವೆ. ಈ ಪ್ರಾಥಮಿಕ ಆರೋಗ್ಯ ಘಟಕಗಳು ಪ್ರಾಥಮಿಕ ಆರೋಗ್ಯ

ಕೇಂದ್ರಗಳಂತೆ ಜನತೆಯ ವೈದ್ಯಕೀಯ ಚಿಕಿತ್ಸೆ, ಸಾರ್ವಜನಿಕ ಆರೋಗ್ಯ ಸುಧಾರಣೆ, ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ನಿರ್ವಹಣೆ ಹಾಗೂ ಸಾರ್ವಜನಿಕ ಆರೋಗ್ಯದ ಮುನ್ನೆಚ್ಚರಿಕೆಯ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತವೆ. ಇವುಗಳು ಸಾಮಾನ್ಯವಾಗಿ ಹದಿನೈದರಿಂದ ಇಪ್ಪತ್ತು ಸಾವಿರ ಜನರಿಗೆ ವೈದ್ಯಕೀಯ ಸೌಲಭ್ಯವನ್ನು ಒದಗಿಸಿಕೊಡುತ್ತವೆ. ಪ್ರಾಥಮಿಕ ಆರೋಗ್ಯ ಘಟಕಗಳು ಪ್ರತೀ ತಿಂಗಳು ತಮ್ಮ ಪ್ರದೇಶದ ಆರೋಗ್ಯ ಕಾರ್ಯಕ್ರಮಗಳ ವರದಿಯನ್ನು ಸಂಬಂಧಪಟ್ಟ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಕಳುಹಿಸಿ ಕೊಡುತ್ತವೆ. ಈ ಪ್ರಾಥಮಿಕ ಆರೋಗ್ಯ ಘಟಕಗಳಲ್ಲಿ ಸಾಮಾನ್ಯವಾಗಿ ಒಬ್ಬ ವೈದ್ಯಾಧಿಕಾರಿ ಇದ್ದು, ಸಹಾಯಕ್ಕೆ ಔಷಧ ವಿತರಕರು ಶುಶ್ರೂಷಕಿಯರು, ದಾದಿಯರು ಹಾಗೂ ಸೇವಕ, ಸೇವಕಿಯರಿರುತ್ತಾರೆ. ದೊಡ್ಡ ದೊಡ್ಡ ಘಟಕಗಳಲ್ಲಿ ಮಹಿಳಾ ವೈದ್ಯಾಧಿಕಾರಿಗಳಿರುತ್ತಾರೆ. ಜೊತೆಗೆ ಹೆರಿಗೆ ವಿಭಾಗವೂ ಇರುತ್ತದೆ. ಸಿದ್ದಾಪುರ, ಗೋಣಿಕೊಪ್ಪಲು ಮತ್ತು ಮಾದಾಪುರ ಪ್ರಾಥಮಿಕ ಆರೋಗ್ಯ ಘಟಕಗಳಲ್ಲಿ ಮಹಿಳಾ ವೈದ್ಯಾಧಿಕಾರಿಗಳಿದ್ದಾರೆ. ಹಿಂದೆ ವೈದ್ಯಕೀಯ ಉಪಕೇಂದ್ರಗಳಾಗಿದ್ದ ಘಟಕಗಳಲ್ಲಿ ವೈದ್ಯಾಧಿಕಾರಿಗಳು, ಒಬ್ಬ ಔಷಧ ವಿತರಕ ಹಾಗೂ ಸೇವಕ ಮಾತ್ರ ಇರುತ್ತಾರೆ. ಕೊಡಗು ಜಿಲ್ಲೆಯಲ್ಲಿ ಆಯುರ್ವೇದ, ಹೋಮಿಯೋಪತಿ ಮತ್ತು ಸಂಚಾರಿ ಘಟಕಗಳನ್ನೊಳಗೊಂಡಂತೆ 1989-90ರಲ್ಲಿ 16 ಪ್ರಾಥಮಿಕ ಆರೋಗ್ಯ ಘಟಕಗಳಿದ್ದವು. ಇವುಗಳಿಗೆ ವಾರ್ಷಿಕವಾಗಿ ಸುಮಾರು 2,000 ರೂ. ಔಷಧಿಗಳನ್ನು ಇಲಾಖೆಯು ಒದಗಿಸುತ್ತದೆ. ಆದರೆ ಗೋಣಿಕೊಪ್ಪಲು, ಕುಶಾಲನಗರಗಳಂತಹ ದೊಡ್ಡ ಘಟಕಗಳಿಗೆ ಹೆಚ್ಚಿನ ಹಣವನ್ನು ಒದಗಿಸುತ್ತಾರೆ. ಕುಶಾಲನಗರದಲ್ಲಿ ಹೊಸ ಕಟ್ಟಡವನ್ನು ಕಟ್ಟಿದ್ದು ಅದು ಈಗ ಸಾರ್ವಜನಿಕ ಆಸ್ಪತ್ರೆಯಾಗಿ ಮಾರ್ಪಡುವ ಹಂತದಲ್ಲಿದೆ. ಕುಶಾಲನಗರ, ಗೋಣಿಕೊಪ್ಪಲು, ಸಿದ್ದಾಪುರ ಮೊದಲಾದ ಸ್ಥಳಗಳ ಆರೋಗ್ಯ ಘಟಕಗಳು ಹಳೆಯ ಔಷಧಾಲಯಗಳಾಗಿವೆ.

ಮಡಿಕೇರಿ ತಾಲೂಕಿನ ಕರಿಕೆ, ಬಲ್ಲಮಾವಟಿ ಮತ್ತು ಅರಪಟ್ಟುಗಳಲ್ಲಿ ಮೂರು ಸರ್ಕಾರಿ ಆಯುರ್ವೇದ ಔಷಧಾಲಯಗಳೂ, ಪಾರಾಣೆಯಲ್ಲಿ ಒಂದು ಸರ್ಕಾರಿ ಹೋಮಿಯೋಪತಿ ಔಷಧಾಲಯವೂ ಇವೆ. ಪರಿಶಿಷ್ಟವರ್ಗದವರು ಹೆಚ್ಚಾಗಿರುವ ಕಡೆ ಅವರಿಗೆ ಅನುಕೂಲವಾಗುವಂತೆ ಹಾಗೂ ಕಾಡಿನೊಳಗೆ ಅವರಿಗೆ ವೈದ್ಯಕೀಯ ಸೌಲಭ್ಯ ದೊರಕಲು ಸಂಚಾರಿ ಪರಿಶಿಷ್ಟ ವರ್ಗದ ಘಟಕಗಳೂ ಇವೆ. ಪರಿಶಿಷ್ಟ ವರ್ಗದವರಿಗೆ ಪ್ರಾಥಮಿಕ ಆರೋಗ್ಯ ಘಟಕಗಳು ಕಲ್ಲಹಳ್ಳಿಯಲ್ಲೂ ಮತ್ತು ಕುಶಾಲನಗರದಲ್ಲೂ ಇವೆ. ಕಲ್ಲಹಳ್ಳಿ ಸಂಚಾರಿ ಘಟಕಕ್ಕೆ 1960ರಲ್ಲಿ ಕಟ್ಟಡವನ್ನು ಕಟ್ಟಿಸಲಾಗಿದೆ. ಆದರೆ ಕುಶಾಲನಗರ ಘಟಕಕ್ಕೆ ಸ್ವಂತ ಕಟ್ಟಡವಿಲ್ಲ.

ಪುಟ 770–771ರ ಪಟ್ಟಿಯಲ್ಲಿ ಕೊಡಗು ಜಿಲ್ಲೆಯ ಪ್ರಾಥಮಿಕ ಆರೋಗ್ಯ ಘಟಕಗಳ, ಸಂಚಾರಿ ಆರೋಗ್ಯ ಘಟಕಗಳ ಕೆಲವು ಮುಖ್ಯ ಮಾಹಿತಿಗಳನ್ನು 1989–90ಕ್ಕೆ ಕೊಡಲಾಗಿದೆ.

ಕುಟ್ಟ, ಹುದಿಕೇರಿ, ಬಾಳೆಲೆ, ತಿತಿಮತಿ, ಗೋಣಿಕೊಪ್ಪಲು ಪೊನ್ನಂಪೇಟೆ? ಪೊಲ್ಲಿಬೆಟ್ಟ, ಸಿದ್ದಾಪುರ, ನಾಪೋಕ್ಲು, ಭಾಗಮಂಡಲ, ಮೂರ್ನಾಡು, ಬಲ್ಲಮಾವಟಿ, ಶನಿವಾರಸಂತೆ, ಶಾಂತಳ್ಳಿ, ಕೊಡ್ಲಿಪೇಟೆ, ಗೌಡಳ್ಳಿ, ಮಾದಾಪುರ, ಕುಶಾಲನಗರ, ಚೆಟ್ಟಳ್ಳಿ, ಸಮುದಾಯ ಆರೋಗ್ಯ ಕೇಂದ್ರ/ಪ್ರಾಥಮಿಕ ಆರೋಗ್ಯ ಕೇಂದ್ರ/ಘಟಕಗಳಲ್ಲಿ 1989–90ರಲ್ಲಿ ನಲ್ಲಿ ನೀರಿನ ವ್ಯವಸ್ಥೆಯಿತ್ತು. ಶ್ರೀಮಂಗಲ, ಹುದಿಕೇರಿ, ಬಲ್ಲಮಾವಟಿ, ಶನಿವಾರಸಂತೆ, ಕೊಡ್ಲಿಪೇಟೆ, ಆರೋಗ್ಯ ಕೇಂದ್ರ/ಘಟಕಗಳಲ್ಲಿ ಬಾವಿ ನೀರಿನ ಪೂರೈಕೆಯೂ ಇತ್ತು. ಆದರೆ ಶ್ರೀಮಂಗಲ ಮತ್ತು ಹುದಿಕೇರಿಗಳಲ್ಲಿ ಬಾವಿ ನೀರನ್ನು ಉಪಯೋಗಿಸುತ್ತಿರಲಿಲ್ಲ. ಮರೆನಾಡು, ಕಾನೂರು, ಕಲ್ಲಹಳ್ಳಿ (ಸಂಚಾರಿ ಘಟಕ), ಕರಿಕೆ, ಪಾರಾಣೆ, ಶಿರಂಗಾಲ, ಸಂಜರಾಜಪಟ್ಟಣ ಪ್ರಾಥಮಿಕ ಆರೋಗ್ಯ ಕೇಂದ್ರ/ಘಟಕಗಳಲ್ಲಿ ಯಾವ ರೀತಿಯ ನೀರಿನ ವ್ಯವಸ್ಥೆಯೂ ಇರಲಿಲ್ಲ.

ನಾಪೋಕ್ಲು, ಶನಿವಾರಸಂತೆ, ಸುಂಟಿಕೊಪ್ಪ, ಬಾಳೆಲೆ, ಕುಟ್ಟ, ಮೂರ್ನಾಡು, ಶ್ರೀಮಂಗಲ, ಗೋಣಿಕೊಪ್ಪಲು, ಸಿದ್ದಾಪುರ, ತಿತಿಮತಿ, ಚೆಯ್ಯಂಡಾಣೆ, ಸಂಪಾಜೆ, ಚೆಟ್ಟಳ್ಳಿ, ಕುಶಾಲನಗರ, ಕೊಡ್ಲಿಪೇಟೆ ಮತ್ತು ಮಾದಾಪುರಗಳ ಕೇಂದ್ರ/ಘಟಕಗಳಲ್ಲಿ ರೋಗಿಗಳಿಗೆ 1989–90ರಲ್ಲಿ ಆಹಾರವನ್ನು ಒದಗಿಸುವ ವ್ಯವಸ್ಥೆಯಿತ್ತು. ಆ ವರ್ಷ ಜಿಲ್ಲೆಯ 23 ಆರೋಗ್ಯ ಕೇಂದ್ರ/ಘಟಕಗಳಿಗೆ ಶೀತಕ ಯಂತ್ರ (ರೆಫ್ರಿಜರೇಟರ್) ಮತ್ತು ಡೀಪ್‌ಫ್ರೀಜರುಗಳನ್ನು ಒದಗಿಸಲಾಗಿತ್ತು.

ಸಾಮಾನ್ಯವಾಗಿ ಆರೋಗ್ಯ ಕೇಂದ್ರ/ಘಟಕಗಳ ವ್ಯಾಪ್ತಿಯ ಪ್ರದೇಶಗಳಲ್ಲಿ ಕರುಳುಬೇನೆ, ಪಡಾರ, ಅತಿಸಾರ, ಬೇಧಿ, ಕೆಮ್ಮು, ಸಾಮಾನ್ಯ ಜ್ವರ, ಜಂತುಹುಳುಮೊದಲಾದವುಗಳಿಂದ ಉಂಟಾಗುವ ರಕ್ತಹೀನತೆ ಮುಂತಾದ ರೋಗಗಳು ವರದಿಯಾಗಿವೆ. ಕುಶಾಲನಗರ, ಪೊಲ್ಲಿಬೆಟ್ಟ ಮೊದಲಾದ

| ಕ್ರ. ಸಂ. | ಆರೋಗ್ಯ ಕೇಂದ್ರಗಳು | ಸ್ಥಾಪಿತ ವರ್ಷ | ಹಾಸಿಗೆಗಳ ಸಂಖ್ಯೆ | ಉಪ ಕೇಂದ್ರಗಳು | ಒಳ ರೋಗಿಗಳು | ಹೊರ ರೋಗಿಗಳು | ಹೆರಿಗೆಗಳು |
|---|---|---|---|---|---|---|---|
| | ಮಡಿಕೇರಿ ತಾ|| | | | | | | |
| 1. | ನಾಪೋಕ್ಲು | 1888 | 30 | 7 | 481 | 15,631 | 106 |
| 2. | ಭಾಗಮಂಡಲ | 1910 | 14 | 10 | 218 | 13,862 | 435 |
| 3. | ಮೂರ್ನಾಡು | 1930 | 18 | 9 | 231 | 12,794 | — |
| 4. | ಚೆಯ್ಯಂಡಾಣೆ | 1953 | 10 | 5 | 60 | 9,532 | 20 |
| 5. | ಸಂಪಾಜೆ | 1952 | 14 | 11 | 120 | 6,382 | 380 |
| | ಸೋಮವಾರಪೇಟೆ ತಾ|| | | | | | | |
| 6. | ಶಾಂತಳ್ಳಿ | 1958 | 8 | 19 | 517 | 2,738 | 15 |
| 7. | ಸುಂಟಿಕೊಪ್ಪ | 1893 | 12 | 21 | 898 | 38,013 | 641 |
| 8. | ಕೊಡ್ಲಿಪೇಟೆ | 1956 | 15 | 4 | 182 | 7,031 | 211 |
| 9. | ಹೆಬ್ಬಾಲೆ | — | 6 | 6 | 81 | 6,757 | 9 |
| | ವೀರರಾಜಪೇಟೆ ತಾ|| | | | | | | |
| 10. | ಬಾಳೆಲೆ | 1939 | 14 | 12 | 146 | 8,277 | 18 |
| 11. | ಹುದಿಕೇರಿ | 1962 | 6 | 19 | — | 4,387 | — |
| 12. | ಕುಟ್ಟ | 1955 | 28 | 8 | 206 | 13,975 | 215 |
| 13. | ಮರೆನಾಡು | 1958 | 18 | 6 | — | 3,660 | 4 |
| 14. | ಶ್ರೀಮಂಗಲ | 1913 | 16 | 4 | 400 | 7,493 | 229 |
| 15. | ತಿತಿಮತಿ | 1949 | 16 | 22 | — | 5,154 | 3 |

ಡಿ.ಪಿ.ಟಿ. : ಡಿಫ್ತೀರಿಯ, ಪೆರ್ಟುಸಿಸ್ ಮತ್ತು ಟಿಟಾನಸ್ ಲಸಿಕೆ.

ಡಿ. ಮತ್ತು ಟಿ. : ಡಿಫ್ತೀರಿಯ ಮತ್ತು ಟಿಟಾನಸ್ ಸೀರಂ.

ಟಿ. ಟಿ. : ಟಿಟಾನಸ್ ಟಾಕ್ಸಾಯ್ಡ್.

| ಸಾಮಾನ್ಯ | ಕುಟುಂಬ ಕಲ್ಯಾಣ | | ಮಹಿಳೆಯರ ಮತ್ತು ಮಕ್ಕಳ ಕಾರ್ಯಕ್ರಮ | | | | ರೋಗಿಗಳು | |
|---|---|---|---|---|---|---|---|---|
| ಶಸ್ತ್ರ ಚಿಕಿತ್ಸೆಗಳು | ಶಸ್ತ್ರ ಚಿಕಿತ್ಸೆಗಳು | ವಂಕಿ ಧಾರಣೆ | ಡಿ.ಪಿ.ಟಿ. | ಡಿ. ಮತ್ತು ಟಿ. | ಟಿ.ಟಿ. ತಾಯಂದಿರು ಮತ್ತು ಮಕ್ಕಳು | ಪೋಲಿಯೋ | ಕ್ಷಯ | ಕುಷ್ಠ |
| 68 | 68 | 66 | 447 | 237 | 393 | 447 | 11 | 2 |
| 199 | 199 | 146 | 518 | 468 | 412 | — | — | — |
| — | 198 | 127 | 589 | 470 | 643 | 589 | 5 | 2 |
| — | 29 | 57 | 415 | 295 | 390 | 415 | 0 | 1 |
| 111 | 124 | 57 | 494 | 430 | 497 | 494 | 21 | 3 |
| | | | | | | | | |
| — | 358 | 244 | 1,148 | 1,631 | 2,121 | 1,148 | 4 | 6 |
| — | 294 | 243 | 2,099 | 1,572 | 2,926 | 2,099 | 8 | 13 |
| — | 154 | 86 | 282 | 334 | 336 | 282 | 3 | — |
| — | 314 | 48 | 1,335 | 1,007 | 1,725 | 1,335 | 4 | — |
| | | | | | | | | |
| 113 | 113 | — | 7 | 12 | 1,004 | 712 | 13 | 4 |
| — | 299 | 164 | 990 | 1,151 | 1,132 | 990 | — | — |
| — | 117 | 72 | 362 | 475 | 701 | 362 | 90 | 42 |
| — | 49 | 61 | 250 | 293 | 567 | 250 | 4 | 2 |
| — | 89 | 92 | 279 | 280 | 282 | 279 | 10 | 4 |
| — | 414 | 217 | 1,136 | 1,117 | 234 | 1,136 | — | — |

| ಕ್ರ. ಸಂ. | ಆರೋಗ್ಯ ಘಟಕಗಳ ಸ್ಥಳಗಳು | ಸ್ಥಾಪಿತ ವರ್ಷ | ಹಾಸಿಗೆಗಳ ಸಂಖ್ಯೆ | ಉಪ ಕೇಂದ್ರಗಳು | ಒಳ ರೋಗಿಗಳು | ಹೊರ ರೋಗಿಗಳು | ಹೆರಿಗೆಗಳು |
|---|---|---|---|---|---|---|---|
| | ಸೋಮವಾರಪೇಟೆ ತಾ॥ | | | | | | |
| 1. | ಗೌಡಳ್ಳಿ | 1982 | — | 6 | — | 6,735 | 125 |
| 2. | ಮಾದಾಪುರ | 1952 | 12 | 8 | 262 | 7,278 | 52 |
| 3. | ಕುಶಾಲನಗರ | — | 20 | 4 | 880 | 41,304 | 369 |
| 4. | ಚೆಟ್ಟಳ್ಳಿ | 1953 | 18 | — | 96 | 7,837 | 36 |
| 5. | ಶಿರಂಗಾಲ | 1974 | — | 1 | — | 6,826 | — |
| 6. | ನಂಜರಾಯಪಟ್ಟಣ | 1984 | — | — | — | 4,190 | 2 |
| 7. | ಹಾರಂಗಿ | 1972 | 6 | — | 65 | 10,511 | 15 |
| | ವೀರರಾಜಪೇಟೆ ತಾ॥ | | | | | | |
| 8. | ಗೋಣಿಕೊಪ್ಪಲು | 1890 | 45 | — | 2,940 | 39,427 | 678 |
| 9. | ಸಿದ್ದಾಪುರ | — | 51 | — | 1,468 | 24,219 | 604 |
| 10. | ಕಾನೂರು | 1951 | — | 1 | — | 6,880 | 19 |
| | ಆಯುರ್ವೇದ | | | | | | |
| 11. | ಕರಿಕೆ | — | — | — | — | 2,903 | — |
| 12. | ಬಲ್ಲಮಾವಟಿ | 1972 | — | 2 | — | 2,463 | — |
| 13. | ಅರಪಟ್ಟು | 1972 | — | — | — | 4,763 | — |
| | ಹೋಮಿಯೋಪತಿ | | | | | | |
| 14. | ಪಾರಾಣೆ | 1986 | — | — | — | 4,232 | — |
| | ಸಂಚಾರಿ ಪರಿಶಿಷ್ಟವರ್ಗದ ಘಟಕಗಳು | | | | | | |
| 15. | ಕಲ್ಲಹಳ್ಳಿ | 1960 | — | 2 | — | 1,945 | 37 |
| 16. | ಕುಶಾಲನಗರ | 1967 | — | 2 | — | 4,028 | 17 |

| ಸಾಮಾನ್ಯ | ಕುಟುಂಬ ಕಲ್ಯಾಣ | | ಮಹಿಳೆಯರ ಮತ್ತು ಮಕ್ಕಳ ಕಾರ್ಯಕ್ರಮ | | | | ರೋಗಿಗಳು | |
|---|---|---|---|---|---|---|---|---|
| ಶಸ್ತ್ರ ಚಿಕಿತ್ಸೆಗಳು | ಶಸ್ತ್ರ ಚಿಕಿತ್ಸೆಗಳು | ವಂಕಿ ಧಾರಣೆ | ಡಿ.ಪಿ.ಟಿ. | ಡಿ. ಮತ್ತು ಟಿ. | ಟಿ.ಟಿ. ತಾಯಂದಿರು ಮತ್ತು ಮಕ್ಕಳು | ಪೋಲಿಯೋ | ಕ್ಷಯ | ಕುಷ್ಠ |
| 209 | 209 | 100 | 454 | 390 | 231 | 454 | 12 | 1 |
| — | 139 | 112 | 810 | 625 | 909 | — | 6 | 2 |
| 176 | 176 | 125 | 859 | 332 | 1,080 | 859 | 34 | 14 |
| — | 10 | 11 | 224 | 225 | 481 | 224 | 6 | — |
| — | 67 | 22 | 102 | 220 | 182 | — | 2 | — |
| — | — | 16 | 360 | 180 | 60 | 360 | 4 | 1 |
| — | 12 | 9 | 35 | 60 | 62 | 35 | 2 | 7 |
| 64 | 197 | 45 | 302 | 223 | 409 | 302 | 47 | 3 |
| — | 90 | 94 | 386 | 437 | 434 | 386 | 12 | 5 |
| — | 76 | 58 | 30 | 30 | 50 | 30 | — | — |
| — | 38 | — | — | — | — | — | — | — |
| — | 7 | 14 | 56 | 12 | 65 | 56 | 1 | 1 |
| — | 5 | 11 | 44 | 53 | 56 | 44 | — | 1 |
| — | — | 5 | 40 | 54 | 143 | 40 | — | — |
| — | 19 | 14 | 49 | 37 | 143 | 49 | 2 | — |
| — | 27 | 1 | 45 | 57 | 36 | 45 | — | — |

ಕೇಂದ್ರ/ಘಟಕಗಳಿಂದ ಕ್ಷಯರೋಗವೂ ಸಾಮಾನ್ಯ ಸಾಂಕ್ರಾಮಿಕ ರೋಗವಾಗಿ ಕಂಡುಬರುವುದಾಗಿ ವರದಿಯಾಗಿದೆ.

ಹಳೆಯ ಆರೋಗ್ಯ ಸಂಸ್ಥೆಗಳಲ್ಲಿ ಮಡಿಕೇರಿಯ ಜೈಲು ಆಸ್ಪತ್ರೆ ಒಂದಾಗಿತ್ತು. ಈ ಆಸ್ಪತ್ರೆಯಲ್ಲಿ 1961–62 ರಲ್ಲಿ 27 ಜನ ಒಳರೋಗಿಗಳೂ, 2,675 ಜನ ಹೊರ ರೋಗಿಗಳೂ ವೈದ್ಯಕೀಯ ಸೌಲಭ್ಯ ಪಡೆದಿದ್ದರು. ಈ ಆಸ್ಪತ್ರೆಯನ್ನು ಈಗ ಮುಚ್ಚಲಾಗಿದ್ದು, ಜೈಲಿನಲ್ಲಿರುವವರು ಹಾಗೂ ಸಿಬ್ಬಂದಿ ವರ್ಗದವರು ಮಡಿಕೇರಿಯ ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯಕೀಯ ಸೌಲಭ್ಯವನ್ನು ಪಡೆಯುತ್ತಿದ್ದಾರೆ.

ಮಹದೇವಪೇಟೆ ಔಷಧಾಲಯವೂ ಕೂಡ ಹಳೆಯ ಔಷಧಾಲಯಗಳಲ್ಲೊಂದು. ಇದನ್ನು ಜಿಲ್ಲಾ ಆಸ್ಪತ್ರೆಯ ಅಧೀನಕ್ಕೆ ಒಳಪಡಿಸಲಾಗಿತ್ತು, ಹಾಗೂ ಅಲ್ಲಿನ ವೈದ್ಯರೊಬ್ಬರನ್ನು ಇಲ್ಲಿಗೆ ಪ್ರತಿನಿಯೋಜಿಸಲಾಗುತ್ತಿತ್ತು. ಮಡಿಕೇರಿ ಪೌರ ಸಮಿತಿಯು ಪ್ರತೀ ವರ್ಷವೂ ವಂತಿಗೆಯಾಗಿ ಔಷಧಾಲಯಕ್ಕೆ 3,000 ರೂಪಾಯಿಗಳನ್ನು ಕೊಡುತ್ತಿತ್ತು. ಔಷಧಾಲಯದ ಕಟ್ಟಡವನ್ನು ಹಿಂದೆ ಕೊಡಗು ರಾಜ್ಯದ ಸಭಾಪತಿಗಳಾಗಿದ್ದ ಬಿ. ಎಸ್. ಕುಶಾಲಪ್ಪನವರು ಮಾಡಿದ ಧನ ಸಹಾಯದಿಂದ ಕಟ್ಟಲಾಗಿದೆ. ಈ ಔಷಧಾಲಯದಲ್ಲಿ 1960 ರಲ್ಲಿ ದೈನಂದಿನ ಸರಾಸರಿ ಹೊರರೋಗಿಗಳ ಸಂಖ್ಯೆ 122.9 ಇದ್ದುದಾಗಿ ತಿಳಿದು ಬಂದಿದೆ. ಈಗ ಮಹದೇವಪೇಟೆ ಔಷಧಾಲಯವು ಮಡಿಕೇರಿ ಪುರಸಭೆ ಆಡಳಿತಕ್ಕೊಳಪಟ್ಟಿದೆ. ಒಬ್ಬ ಕಿರಿಯ ಆರೋಗ್ಯ ಸಹಾಯಕಿಯು ಈಗ ಔಷಧಾಲಯವನ್ನು ನೋಡಿಕೊಳ್ಳುತ್ತಿದ್ದಾರೆ.

ಮಡಿಕೇರಿ, ವೀರರಾಜಪೇಟೆ, ಗೋಣಿಕೊಪ್ಪಲು, ಸೋಮವಾರಪೇಟೆ, ಕುಶಾಲನಗರ, ಪೊನ್ನಂಪೇಟೆ, ಹೆಗ್ಗಳ ಮೊದಲಾದ ಸ್ಥಳಗಳಲ್ಲಿ ಖಾಸಗೀ ನರ್ಸಿಂಗ್ ಹೋಂಗಳು ಪ್ರಾರಂಭವಾಗಿವೆ. ಖಾಸಗೀ ಔಷಧಾಲಯಗಳು, ಈ ಮೇಲೆ ತಿಳಿಸಿದ ಸ್ಥಳಗಳ ಜೊತೆಗೆ ಭಾಗಮಂಡಲ, ನಾಪೋಕ್ಲು, ಕೊಡ್ಲಿಪೇಟೆ ಸುಂಟಿಕೊಪ್ಪ, ಸಂಪಾಜೆ, ಅಮ್ಮಂಗೇರಿ, ಕಾರ್ಮಾಡು, ಬಾಳೆಲೆ, ಮೂರ್ನಾಡು, ಕುಟ್ಟ, ಶ್ರೀಮಂಗಲ, ಬಿರುನಾಣಿ, ಹುದಿಕೇರಿ, ತೋಳೂರು, ಬಿ. ಶೆಟ್ಟಿಹಳ್ಳಿ, ಅಬ್ಬೂರುಕಟ್ಟೆ, ಮಾದಾಪುರ, ಚೆಟ್ಟಳ್ಳಿ, ಪೊಲ್ಲಿಬೆಟ್ಟ, ಕರಿಕೆ, ಚೇರಂಬಾಣೆ, ಬೆಟ್ಟಗೇರಿ, ಮೊದಲಾದ ಸ್ಥಳಗಳಲ್ಲಿ ತೆರೆಯಲ್ಪಟ್ಟಿವೆ. ಇತ್ತೀಚಿನ ದಿನಗಳಲ್ಲಿ ಖಾಸಗೀ ನರ್ಸಿಂಗ್ ಹೋಂ ಮತ್ತು ಔಷಧಾಲಯಗಳ ಕಡೆ ಜನರ ಒಲವು ಹೆಚ್ಚುತ್ತಿರುವುದು ಕಂಡುಬರುತ್ತಿದೆ.

ಸುಳ್ಯದ ವೆಂಕಟರಮಣಗೌಡರ ಆಸ್ಪತ್ರೆಯ ಸಂಚಾರಿ ಘಟಕಗಳು ಕೊಡಗು ಜಿಲ್ಲೆಯಲ್ಲಿ ಕೊಟ್ಟೂರು, ಅಪ್ಪಂಗಳ, ಕಾಟಗೇರಿ, ಬೆಟ್ಟಗೇರಿ, ಕಿರುಗುಂದ, ಚೇರಂಬಾಣೆ, ಕೋಪಟ್ಟಿ, ಚೆಟ್ಟಿಮಾನಿ ಮತ್ತು ಭಾಗಮಂಡಲಗಳ ಕಡೆ ಒಂದು ದಾರಿಯಲ್ಲೂ ಮತ್ತು ಸಂಪಾಜೆ, ಕೋಯನಾಡು, ಮತ್ತು ಮದೆ ಕಡೆ ಇನ್ನೊಂದು ದಾರಿಯಲ್ಲೂ ವಾರಕ್ಕೆರಡು ಸಲ ಭೇಟಿ ಕೊಟ್ಟು ರೋಗಿಗಳನ್ನು ಪರೀಕ್ಷಿಸಿ ಔಷಧಿಯನ್ನು ವಿತರಣೆ ಮಾಡುತ್ತವೆ.

## ಕುಟುಂಬ ಕಲ್ಯಾಣ

ಇಡೀ ಜನ ಸಮುದಾಯಕ್ಕೆ ಸಾರ್ವತ್ರಿಕವಾಗಿ ಅನ್ವಯವಾಗುವಂತಹ ಬೃಹತ್ ಪ್ರಮಾಣದ ಕುಟುಂಬ ನಿಯಂತ್ರಣ ಕಾರ್ಯಕ್ರಮಗಳನ್ನು ಎರಡನೇಯ ಪಂಚವಾರ್ಷಿಕ ಯೋಜನೆಯಲ್ಲಿ ರಾಷ್ಟ್ರವ್ಯಾಪ್ತಂತ ಹಾಕಿಕೊಳ್ಳಲಾಯಿತು. ಜಿಲ್ಲಾ ಮಟ್ಟದಲ್ಲಿ ಕುಟುಂಬ ಕಲ್ಯಾಣ ಮಂಡಳಿಗಳನ್ನು 1957ರಲ್ಲಿ ಸ್ಥಾಪಿಸಲಾಯಿತು. ಜಿಲ್ಲೆಯಲ್ಲಿ 1968ರ ವೇಳೆಗೆ ಮಡಿಕೇರಿ, ವೀರರಾಜಪೇಟೆ ಮತ್ತು ಸೋಮವಾರಪೇಟೆ ಆಸ್ಪತ್ರೆಗಳಲ್ಲಿ ಕುಟುಂಬ ನಿಯಂತ್ರಣ ಚಿಕಿತ್ಸಾಲಯಗಳನ್ನು ತೆರೆಯಲಾಯಿತು. ಕುಟುಂಬ ಕಲ್ಯಾಣ ಕಾರ್ಯಕ್ರಮವನ್ನು ಮೊದಲು ಕುಟುಂಬ ಯೋಜನಾ ಕಾರ್ಯಕ್ರಮವೆಂದು ಕರೆಯಲಾಗುತ್ತಿದ್ದು, ಅದರ ಮಹತ್ವವನ್ನು ಮನಗಂಡು ಆರೋಗ್ಯ ಇಲಾಖೆಯನ್ನು ಆರೋಗ್ಯ ಮತ್ತು ಕುಟುಂಬ ಯೋಜನಾ ಇಲಾಖೆಯೆಂದು ಕರೆಯಲಾಯಿತು. ಜಿಲ್ಲಾ ಆರೋಗ್ಯಾಧಿಕಾರಿಗಳನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಯೋಜನಾ ಅಧಿಕಾರಿಗಳೆಂದು ಕರೆಯಲಾಯಿತು. ಕುಟುಂಬ ಯೋಜನೆಯ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಜಿಲ್ಲಾಮಟ್ಟದಲ್ಲಿ ಕುಟುಂಬ ಯೋಜನಾ ವಿಭಾಗವೊಂದನ್ನು 1964ರಲ್ಲಿ ಜಿಲ್ಲಾ ವೈದ್ಯಾಧಿಕಾರಿಗಳ ಕಚೇರಿಯಲ್ಲಿ ತೆರೆಯಲಾಯಿತು. ಮುಂದೆ 1978ರಲ್ಲಿ 'ಕುಟುಂಬ ಯೋಜನೆ' ಕಾರ್ಯಕ್ರಮವನ್ನು ಕುಟುಂಬ ಕಲ್ಯಾಣವೆಂದು ಬದಲಾಯಿಸಲಾಯಿತು. ಜಿಲ್ಲಾ ಆರೋಗ್ಯಾಧಿಕಾರಿಗಳನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳೆಂದು ಕರೆಯಲಾಯಿತು. ಮೊದಮೊದಲು ಕುಟುಂಬ ಕಲ್ಯಾಣ ಶಸ್ತ್ರಚಿಕಿತ್ಸೆಗಳನ್ನು ಮಾಡಿಸಿಕೊಳ್ಳಲು ಹಾಗೂ ಇತರ ಉಪಾಯಗಳನ್ನು ಬಳಸಿಕೊಳ್ಳಲು ವ್ಯಾಪಕವಾಗಿ ಪ್ರಚಾರ ಮಾಡಲಾಗುತ್ತಿತ್ತು. ನಂತರ ಶಸ್ತ್ರಚಿಕಿತ್ಸೆಗಳಿಗೆ ಒಳಗಾದವರಿಗೆ ಪ್ರೋತ್ಸಾಹಧನವನ್ನು ಕೊಡಲಾಗುತ್ತಿತ್ತು. ಈಗ ಈ ಹಣದ ಮೊತ್ತವನ್ನು ಹೆಚ್ಚಿಸಲಾಗಿದೆಯಲ್ಲದೆ, ಪ್ರೇರಕರು

(ಮೋಟಿವೇಟರ್) ಮೊದಲಾದವರಿಗೂ ಪ್ರೋತ್ಸಾಹ ಧನವನ್ನು ಕೊಡಲಾಗುತ್ತಿದೆ. ಸರ್ಕಾರಿ ನೌಕರಿಯಲ್ಲಿರುವವರಿಗೆ ರಜೆ, ಸಂಬಳದಲ್ಲಿ ಬಡ್ತಿ ಮೊದಲಾದ ಪ್ರೋತ್ಸಾಹಿಕ ಸೌಲಭ್ಯಗಳನ್ನು ಒದಗಿಸಲಾಗಿದೆ. ಲಯನ್ಸ್ ಕ್ಲಬ್ಬು, ರೋಟರಿ ಕ್ಲಬ್ಬು ಮೊದಲಾದ ಸೇವಾ ಸಂಸ್ಥೆಗಳೂ ಕೂಡ ಕುಟುಂಬ ಕಲ್ಯಾಣ ಕಾರ್ಯಕ್ರಮದಲ್ಲಿ ಭಾಗವಹಿಸಿ ಅದರ ಯಶಸ್ಸಿಗೆ ಕಾರ್ಯ ಪ್ರವೃತ್ತವಾಗಿವೆ.

ಭಾರತ ಸರ್ಕಾರದ ಆಸ್ಪತ್ರೆಗಳ ಬಾಣಂತಿ ಸೇವಾ ಕಾರ್ಯಕ್ರಮವು 1969ರಲ್ಲಿ ಪ್ರಾರಂಭವಾಗಿ, ಮಕ್ಕಳ ಮತ್ತು ಸ್ತ್ರೀಯರ ಆರೋಗ್ಯವನ್ನು ಉತ್ತಮಪಡಿಸುವುದರ ಮೂಲಕ ಕುಟುಂಬ ಕಲ್ಯಾಣ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ಗುರಿಯನ್ನು ಹೊಂದಿದೆ. ಈ ಕಾರ್ಯಕ್ರಮದಲ್ಲಿ ಗರ್ಭಿಣಿಯರ ಬಾಣಂತಿಯರ ಆರೋಗ್ಯಕ್ಕೆ ಗಮನ ಕೊಡುವುದರ ಜೊತೆಗೆ, ರೋಗನಿರೋಧಕ ಲಸಿಕೆಗಳನ್ನು ಹಾಕಲಾಗುವುದು ಮತ್ತು ರಕ್ತ ಹೀನತೆ ಹಾಗೂ ಕುರುಡುತನಕ್ಕೂ ಚಿಕಿತ್ಸೆ ನೀಡಲಾಗುವುದು. ಜಿಲ್ಲೆಯಲ್ಲಿ ಮಡಿಕೇರಿ, ವೀರರಾಜಪೇಟೆ ಮತ್ತು ಸೋಮವಾರ ಪೇಟೆಯ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಬಾಣಂತಿ ಸೇವಾ ಕೇಂದ್ರಗಳಿವೆ. ಮಡಿಕೇರಿಯ ಅಶ್ವಿನಿ ಆಸ್ಪತ್ರೆ, ಅಮ್ಮತ್ತಿಯ ಇಂಡಿಯಾ ಹೆಲ್ತ್ ಪ್ರಾಜೆಕ್ಟ್ ಹಾಗೂ ಮಡಿಕೇರಿ, ಸೋಮವಾರಪೇಟೆ ಮತ್ತು ವೀರರಾಜಪೇಟೆಯ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಎಂ. ಟಿ. ಪಿ. (ವೈದ್ಯಕೀಯವಾಗಿ ಗರ್ಭಸ್ರಾವ ಮಾಡಿಸುವುದು) ಸೌಲಭ್ಯಗಳಿವೆ. ಕುಟುಂಬ ಕಲ್ಯಾಣ ಯೋಜನೆಯ ಕೇಂದ್ರಗಳು ಜಿಲ್ಲೆಯ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲೂ ಹಾಗೂ ಸಾರ್ವಜನಿಕ ಆಸ್ಪತ್ರೆಗಳಲ್ಲೂ ಇವೆ. ಮುಂದಿನ ಪಟ್ಟಿಯಲ್ಲಿ ಜಿಲ್ಲೆಯಲ್ಲಿ 1975-76 ರಿಂದ 1990-91ರ ವರೆಗೆ ಸಾಧಿಸಲಾದ ಕುಟುಂಬ ಕಲ್ಯಾಣ ಶಸ್ತ್ರಚಿಕಿತ್ಸೆಗಳು, ವಂಕಿಧಾರಣೆಗಳೂ, ಗರ್ಭನಿರೋಧಕಗಳೂ ಹಾಗೂ ಗರ್ಭ ನಿರೋಧಕ ಮಾತ್ರೆಗಳನ್ನು ಸೇವಿಸುವವರ ಸಂಖ್ಯೆಗಳನ್ನು ಕೊಡಲಾಗಿದೆ. ಆವರಣದಲ್ಲಿ ಗುರಿಯ ಸಾಧನೆಯ ಪ್ರತೀ ಶತಾಂಶವನ್ನು ಕೊಡಲಾಗಿದೆ.

| ವರ್ಷ | ಶಸ್ತ್ರ ಚಿಕಿತ್ಸೆಗಳು | ವಂಕಿ ಧಾರಣೆ | ಸಿ.ಸಿ. ಉಪಯೋಗಿಸುವವರು | ಮಾತ್ರೆ ಸೇವಿಸುವವರು |
|---|---|---|---|---|
| 1 | 2 | 3 | 4 | 5 |
| 1975—76 | 2,087 | 307 | 1,136 | — |
| | (90.3) | (68.2) | (56.7) | |
| 76—77 | 4,370 | 306 | 990 | — |
| | (138.3) | (32.9) | (36.11) | |
| 77—78 | 1,387 | 111 | 717 | — |
| | (35.9) | (14.8) | (31 0) | |
| 78—79 | 1,298 | 220 | 707 | — |
| | (43.3) | (48.9) | (47.1) | |
| 79—80 | — | ಲಭ್ಯವಿಲ್ಲ | — | |
| 80—81 | 1,642 | 385 | 1,227 | — |
| | (66.8) | (54.2) | (76.7) | |
| 81—82 | 2,912 | 504 | 1,164 | — |
| | (123.4) | (74.1) | (77.5) | |

| 1 | 2 | 3 | 4 | 5 |
|---|---|---|---|---|
| 1982—83 | 3,175<br>(83.8) | 774<br>(60.9) | 1,287<br>(76.2) | — |
| 83—84 | 3,188<br>(61.3) | 1,525<br>(70.9) | 2,589<br>(123.3) | 575<br>(71.9) |
| 84—85 | 3,526<br>(61.64) | 1,619<br>(43.17) | 2,785<br>(121.1) | 723<br>(80.3) |
| 85—86 | 4,858<br>(116.2) | 3,580<br>(179.9) | 3,164<br>(127.2) | 840<br>(107.1) |
| 86—87 | 5,753<br>(132.3) | 3,982<br>(177.8) | 7,019<br>(403.4) | 1,354<br>(173.6) |
| 87—88 | 4,566<br>(105.0) | 2,998<br>(121.9) | 3,801<br>(138.7) | 1,248<br>(160.0) |
| 88—89 | 4,163<br>(103.0) | 2,853<br>(109.3) | 3,965<br>(144.7) | 1,307<br>(161.4) |
| 89—90 | 3,902<br>(89.7) | 2,729<br>(98.5) | 3,989<br>(130.3) | 1,047<br>(129.5) |
| 90—91 | 3,109<br>(77.7) | 2,814<br>(90.7) | 4,902<br>(122.5) | 1,538<br>(153.8) |

**ಕುಟುಂಬ ಕಲ್ಯಾಣ ಸಮಿತಿಗಳು**

ಕೊಡಗು ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದಲ್ಲಿ, ಉಪವಿಭಾಗದ ಮಟ್ಟದಲ್ಲಿ ಹಾಗೂ ತಾಲೂಕುಮಟ್ಟದಲ್ಲಿ ಕುಟುಂಬ ಕಲ್ಯಾಣದ ಕಾರ್ಯಾಚರಣೆ ಸಮಿತಿಗಳಿವೆ. ಇವುಗಳಿಗೆ ಕ್ರಮವಾಗಿ ಜಿಲ್ಲಾಧಿಕಾರಿಗಳು, ಉಪ-ವಿಭಾಗಾಧಿಕಾರಿಗಳು ಮತ್ತು ತಹಸಿಲ್ದಾರರು ಅಧ್ಯಕ್ಷರಾಗಿರುತ್ತಾರೆ. ಈ ಸಮಿತಿಗಳು ಪ್ರತೀ ತಿಂಗಳು ಆಯಾ ಮಟ್ಟದಲ್ಲಿ ಸಭೆ ಸೇರಿ ತಿಂಗಳಿನ ಕುಟುಂಬ ಕಲ್ಯಾಣ ಕಾರ್ಯಕ್ರಮದ ಪ್ರಗತಿಯನ್ನು ಅವಲೋಕಿಸಿ ಮೇಲಿನ ಅಧಿಕಾರಿಗಳಿಗೆ ವರದಿಯನ್ನು ಸಲ್ಲಿಸುತ್ತವೆ. ಈ ಸಮಿತಿಗಳಲ್ಲದೆ ಜಿಲ್ಲೆಯಲ್ಲಿ ಕುಟುಂಬ ಕಲ್ಯಾಣ ಶಸ್ತ್ರಚಿಕಿತ್ಸೆಯ ಸಮಯದಲ್ಲಿ ಸತ್ತವರಿಗೆ ಪರಿಹಾರವನ್ನು ಪರಿಶೀಲಿಸಿ ನೀಡಲು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯೊಂದಿದೆ. ಹಾಗೆ ಸತ್ತವರಿಗೆ ನೀಡುವ ಪರಿಹಾರ ಹಣದ ಗರಿಷ್ಟ ಮೊತ್ತವು 1985 ಜೂನ್ ವರೆವಿಗೆ ರೂ. 5,000 ಇತ್ತು. ನಂತರ ಜೂನ್ 1985 ರಿಂದ ಗರಿಷ್ಟ ಮಿತಿಯನ್ನು ರೂ. 10,000ಕ್ಕೆ ಏರಿಸಲಾಗಿದೆ. ಈ ರೀತಿ ಪರಿಹಾರ ಪಡೆದ ಪ್ರಕರಣಗಳು 1988-89, 1989-90 ಮತ್ತು 1990-91ರಲ್ಲಿ ವಾರ್ಷಿಕವಾಗಿ ಒಂದೊಂದು ಇದ್ದವು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯಲ್ಲಿ ಕುಟುಂಬ ಕಲ್ಯಾಣ ಬ್ಯೂರೋ ಇದ್ದು ಅದಕ್ಕೆ ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿಗಳು ಮುಖ್ಯಸ್ಥರಾಗಿರುವರು. ಈ ಬ್ಯೂರೋದಲ್ಲಿ ಶೈಕ್ಷಣಿಕ ವಿಭಾಗ, ನಿಸ್ಸಂತಾನ ಶಸ್ತ್ರಚಿಕಿತ್ಸಾ ವಿಭಾಗ ಮತ್ತು ಅಂಕಿ ಅಂಶಗಳ ವಿಭಾಗ ಎಂಬ ಮೂರು ವಿಭಾಗಗಳಿವೆ. ಅಂಕಿ ಅಂಶ ವಿಭಾಗದಲ್ಲಿ ಒಬ್ಬ ಅಂಕಿ ಅಂಶಗಳ ತಂತ್ರಜ್ಞನಿದ್ದು, ಜಿಲ್ಲೆಯ ಕುಟುಂಬ ಕಲ್ಯಾಣ ಯೋಜನೆಯ ಅಂಕಿ ಅಂಶಗಳನ್ನು ನೋಡಿಕೊಳ್ಳುವುದಲ್ಲದೆ ಆಗಾಗ್ಗೆ ಅವುಗಳ ಸಮೀಕ್ಷೆಯನ್ನು ಮಾಡುವನು. ನಿಸ್ಸಂತಾನ ಶಸ್ತ್ರಚಿಕಿತ್ಸಾ ವಿಭಾಗದಲ್ಲಿ ಒಬ್ಬ ಸರ್ಜನ್, ಒಬ್ಬ ಶುಶ್ರೂಷಕಿ ಹಾಗೂ ಒಬ್ಬ ಸಹಾಯಕರಿರುವರು. ಇವರು ಶಸ್ತ್ರಚಿಕಿತ್ಸಾ ಶಿಬಿರಗಳಲ್ಲಿ ಶಸ್ತ್ರತಜ್ಞರಿಗೆ ಸಹಾಯ ಮಾಡುವರು ಹಾಗೂ ಸಣ್ಣ ಸಣ್ಣ ಶಸ್ತ್ರಚಿಕಿತ್ಸಾ ಶಿಬಿರಗಳಲ್ಲಿ ಶಸ್ತ್ರಚಿಕಿತ್ಸೆ ನಡೆಸುವರು. ಶೈಕ್ಷಣಿಕ ವಿಭಾಗದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಆರೋಗ್ಯ ಶಿಕ್ಷಕರಿದ್ದು ಅವರು ಕುಟುಂಬ ಕಲ್ಯಾಣ ಕಾರ್ಯಕ್ರಮಗಳು, ಶೈಕ್ಷಣಿಕ ಶಿಬಿರಗಳು, ತರಬೇತಿ, ಜಾಹಿರಾತು ಮೊದಲಾದ ಕಾರ್ಯಕ್ರಮಗಳನ್ನು ನೋಡಿಕೊಳ್ಳುವರು. ಈ ವಿಭಾಗವು 1989-90ರಲ್ಲಿ 100 ಚಲನಚಿತ್ರ ಪ್ರದರ್ಶನಗಳನ್ನೂ, 412 ವಸ್ತು ಪ್ರದರ್ಶನಗಳನ್ನೂ, 246 ಚಿತ್ರಪ್ರದರ್ಶನಗಳನ್ನೂ, 20 ಸಮೂಹ ಮಾಧ್ಯಮಗಳನ್ನೂ, 20 ತರಬೇತಿ ಕಾರ್ಯಕ್ರಮಗಳನ್ನೂ, ಮೂರು ಪದವಿಪೂರ್ವ ವಿದ್ಯಾರ್ಥಿಗಳ ಚರ್ಚಾಸ್ಪರ್ಧೆಯನ್ನೂ, ಅಂಗನವಾಡಿ ಕಾರ್ಯಕರ್ತರಿಗೆ ನಾಲ್ಕು ತರಬೇತಿ ಕಾರ್ಯಕ್ರಮಗಳನ್ನೂ ಮತ್ತು 37 ಜಾಹಿರಾತು ಪ್ರಕಟಣೆಗಳನ್ನೂ ಏರ್ಪಡಿಸಿತ್ತು.

### ಸ್ತ್ರೀಯರ ಮತ್ತು ಮಕ್ಕಳ ಆರೋಗ್ಯ

ಸ್ತ್ರೀಯರ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮವು ಆರೋಗ್ಯ ಕಾರ್ಯಕ್ರಮಗಳಲ್ಲಿ ಹಳೆಯದು. ಈ ಕಾರ್ಯಕ್ರಮದಲ್ಲಿ ಪೌಷ್ಟಿಕ ಆಹಾರ ಕಾರ್ಯಕ್ರಮ, ರೋಗನಿರೋಧ ಲಸಿಕೆಗಳ ಕಾರ್ಯಕ್ರಮ, ರಕ್ತಹೀನತೆಯನ್ನು ತಡೆಗಟ್ಟಲು ಕಬ್ಬಿಣ ಹಾಗೂ ಇತರ ಅನ್ನಾಂಗ ಮಾತ್ರೆಗಳ ವಿತರಣೆ ಮೊದಲಾದವು ಸೇರಿವೆ. ಕುಟುಂಬ ಕಲ್ಯಾಣ ಯೋಜನೆಯು ಯಶಸ್ವಿಯಾಗಬೇಕಾದರೆ ಮಕ್ಕಳ ಹಾಗೂ ಸ್ತ್ರೀಯರ ಆರೋಗ್ಯ ವೃದ್ಧಿಯು ಅತ್ಯಾವಶ್ಯಕ. ಮಕ್ಕಳ ಹಾಗೂ ಗರ್ಭಿಣಿ ಸ್ತ್ರೀಯರ ಸಾವುಗಳು ಕಡಿಮೆಯಾದಷ್ಟೂ ಜನರಲ್ಲಿ ನಂಬಿಕೆ ಮೂಡಿ ಕುಟುಂಬ ಕಲ್ಯಾಣ ಕಾರ್ಯಕ್ರಮದಲ್ಲಿ ಹೆಚ್ಚು ಹೆಚ್ಚು ಮಂದಿ ಪಾಲ್ಗೊಳ್ಳುತ್ತಾರೆ. ಆದುದರಿಂದಲೇ ಮಕ್ಕಳ ಮತ್ತು ಸ್ತ್ರೀಯರ ಆರೋಗ್ಯಕ್ಕೆ ಹೆಚ್ಚಿನ ಗಮನ ಕೊಡುವುದು ಕುಟುಂಬ ಕಲ್ಯಾಣ ಕಾರ್ಯಕ್ರಮದ ಮುಖ್ಯ ಯೋಜನೆಗಳಲ್ಲೊಂದು. ಮಕ್ಕಳ ಮತ್ತು ಸ್ತ್ರೀಯರ ಆರೋಗ್ಯ ಕಾರ್ಯಕ್ರಮದ ಅಂಗವಾಗಿ ಇತ್ತೀಚೆಗೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ರೋಗನಿರೋಧಕ ಲಸಿಕೆಗಳನ್ನು ಕೊಡುವ ಕಾರ್ಯಕ್ರಮವನ್ನು ಸೂಕ್ತವಾಗಿ ನಿಭಾಯಿಸಲು ಜಿಲ್ಲಾ ಮಟ್ಟದಲ್ಲಿ ರೋಗ ನಿರೋಧಕ ಅಧಿಕಾರಿಗಳನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯಲ್ಲಿ ನೇಮಿಸಲಾಗಿದೆ. ಗಂಟಲು ಬೇನೆ,ನಾಯಿ ಕೆಮ್ಮು, ಧನುರ್ವಾಯು, ಪೋಲಿಯೋ, ಕ್ಷಯ, ದಡಾರ, ವಿಷಮ ಶೀತ ಜ್ವರ ಮೊದಲಾದ ಮಾರಕ ರೋಗಗಳಿಂದ ಮಕ್ಕಳನ್ನು ಸಂರಕ್ಷಿಸಲು, ಈ ರೋಗಗಳಿಗೆ ರೋಗ ನಿರೋಧಕ ಲಸಿಕೆಗಳನ್ನು ಕೊಡಲಾಗುತ್ತದೆ. ಜಿಲ್ಲೆಯ ಸಾರ್ವಜನಿಕ ಆಸ್ಪತ್ರೆಗಳಲ್ಲಿ, ಪ್ರಾಥಮಿಕ ಆರೋಗ್ಯ ಕೇಂದ್ರ/ಘಟಕಗಳಲ್ಲಿ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಮಕ್ಕಳ ಮತ್ತು ಗರ್ಭಿಣಿ ಸ್ತ್ರೀಯರ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಸ್ತ್ರೀಯರ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮದ ಅಡಿಯಲ್ಲಿ ಕೊಡಗು ಜಿಲ್ಲೆಯಲ್ಲಿ 1975-76 ರಿಂದ 1989-90ರ ವರೆವಿಗೆ ಜಿಲ್ಲೆಯಲ್ಲಿ ಸಾಧಿಸಲಾಗಿರುವ ಅಂಕಿ ಅಂಶಗಳ ಪ್ರಗತಿಯನ್ನು ಮುಂದಿನ ಪುಟದ ಪಟ್ಟಿಯಲ್ಲಿ ಕೊಡಲಾಗಿದೆ. ಆವರಣಗಳಲ್ಲಿ ಗುರಿಯ ಶತಾಂಶಗಳನ್ನು ಕೊಡಲಾಗಿದೆ.

### ಸಮಗ್ರ ಬಾಲವಿಕಾಸ ಯೋಜನೆ

ದೇಶದಲ್ಲಿ ಸಮಗ್ರ ಬಾಲವಿಕಾಸ ಯೋಜನೆಯನ್ನು 1975 ನೇ ಅಕ್ಟೋಬರ್ ಎರಡರಂದು ಪ್ರಾರಂಭಿಸಲಾಯಿತು. ಇದೊಂದು ಬಹುಮುಖ ಕಾರ್ಯಕ್ರಮವಾಗಿದ್ದು ಅನೇಕ ಇಲಾಖೆಗಳ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡಿರುತ್ತದೆ. ಈ ಯೋಜನೆಯ ಲಾಭವನ್ನು ಪಡೆಯತಕ್ಕವರೆಂದರೆ ಗರ್ಭಿಣಿಯರು, ಮಕ್ಕಳಿಗೆ ಹಾಲು ಕುಡಿಸುತ್ತಿರುವ ತಾಯಂದಿರು, 15 ರಿಂದ 44 ವಯಸ್ಸಿನ ಸ್ತ್ರೀಯರು ಹಾಗೂ ಆರು ವರ್ಷಕ್ಕೆ ಕಡಿಮೆ ವಯಸ್ಸಿನ ಮಕ್ಕಳು. ಈ ಕಾರ್ಯಕ್ರಮದನ್ವಯ ಲಾಭ ಪಡೆಯುವವರಿಗೆ ಪೌಷ್ಟಿಕಾಂಶದ ಕೊರತೆಯನ್ನು ನೀಗಲು, ಆರೋಗ್ಯವನ್ನು ಉತ್ತಮ ಪಡಿಸಲು ಹಾಗೂ ಆಯುರ್ಮಾನವನ್ನು ಹೆಚ್ಚಿಸಲು, ಆಹಾರದ ಜೊತೆಗೆ ಅನ್ನಾಂಗಗಳನ್ನೂ ಹಾಗೂ ಇತರ ಪೌಷ್ಟಿಕಾಂಶಗಳನ್ನು ಕೊಡಲಾಗುವುದು. ಈ ಯೋಜನೆಯ ಕಾರ್ಯಗಳನ್ನು ಅಂಗನವಾಡಿ ಕೇಂದ್ರಗಳ ಮೂಲಕ ಕೈಗೊಳ್ಳಲಾಗುವುದು. ವೈದ್ಯಾಧಿಕಾರಿಗಳು ಹಾಗೂ ದಾದಿಯರು ಹಳ್ಳಿಗಳಲ್ಲಿರುವ ಅಂಗನವಾಡಿಗಳಿಗೆ ನಿರ್ದಿಷ್ಟಗೊಳಿಸಿದ ದಿನಗಳಲ್ಲಿ ಭೇಟಿ ಕೊಟ್ಟು ಮಕ್ಕಳನ್ನು, ತಾಯಂದಿರನ್ನು ಪರೀಕ್ಷಿಸುವರು. ಅವರ ಹೆಸರಿ

## ಮಕ್ಕಳ ಮತ್ತು ತಾಯಂದಿರ ಆರೋಗ್ಯ, ಕೊಡಗು ಜಿಲ್ಲೆ

| ವರ್ಷಗಳು | ಡಿ.ಪಿ.ಟಿ. | ಡಿ. ಮತ್ತು ಟಿ. | ಟಿ.ಟಿ. | ಪೋಲಿಯೋ | ಬಿ.ಸಿ.ಜಿ. | ಆಹಾರ ಕೊರತೆ, ರಕ್ತ ಹೀನತೆ ವಿರುದ್ಧ ಚಿಕಿತ್ಸೆ | | ದಡಾರ | ವಿಷಮ ಶೀತ ಜ್ವರನಿರೋಧಕ |
|---|---|---|---|---|---|---|---|---|---|
| | | | | | | ತಾಯಂದಿರು | ಮಕ್ಕಳು | | |
| 1 | 2 | 3 | 4 | 5 | 6 | 7 | 8 | 9 | 10 |
| 75—76 | 262 | 337 | 162 | — | | 4,592 | 7,230 | | |
| | (6.2) | (7.4) | (4.8) | | | (353.2) | (556.1) | | |
| 76—77 | 271 | 38 | 622 | — | | 13,448 | 7,767 | | |
| | (3.5) | (1.0) | (16.0) | | | (689.6) | (609.2) | | |
| 77—78 | 3,864 | 4,630 | 1,753 | — | — | 6,700 | 7,061 | | |
| | (42.5) | (89.0) | (33.7) | | | (137.4) | (120.7) | | |
| 78—79 | 4,553 | 7,011 | 1,389 | — | — | 10,085 | 9,622 | | |
| | (56.9) | (119.8) | (35.9) | | | (112.1) | (106.9) | | |
| 79—80 | | | — | ಲಭ್ಯವಿಲ್ಲ | — | | | | |
| 80—81 | 6,752 | 7,675 | 5,129 | — | — | 13,629 | 8,777 | | |
| | (52.8) | (79.1) | (98.6) | | | (117.5) | (75.7) | | |
| 81—82 | 8,984 | 7,525 | 5,357 | — | — | 12,842 | 8,763 | | |
| | (38.0) | (76.0) | (95.7) | | | (114.7) | (78.2) | | |
| 82—83 | 8,990 | 9,270 | 7,249 | — | — | 10,420 | 9,951 | | |
| | (60.3) | (92.7) | (88.4) | | | (93.0) | (88.8) | | |

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 83—84 | 11.828 | 7,605 | 7,678 | — | | | | | |
| 84—85 | | | — | ಲಭ್ಯವಿಲ್ಲ | — | | | | |
| 85—86 | 14,833 | 8,850 | 12,064 | — | — | 14,933 | 12,965 | — | — |
| | (132.4) | (129.4) | (118.7) | | | (133.3) | (115.8) | | |
| 86—87 | 12,316 | 11,184 | 13,891 | — | — | 15,259 | 15,647 | — | — |
| | (107.1) | (143.4) | (120.8) | — | | (102.3) | (104.9) | | |
| 87—88 | 11,952 | 9,817 | 14,970 | 11,280 | — | 22,796 | 19,002 | 20,748 | |
| | (99.6) | (111.6) | (118.6) | (94.0) | | (152.8) | (119.7) | (259.4) | |
| 88—89 | 12,593 | 11,087 | 14,304 | 10,481 | 13,036 | 23,367 | 27,057 | 9,773 | |
| | (104.9) | (124.6) | (110.0) | (87.3) | (108.6) | (147.2) | (69.4) | (81.4) | |
| 89—90 | 11,102 | 9,518 | 13,746 | 11,098 | 12,729 | 24,418 | 27,198 | 9,615 | 532 |
| | (92.5) | (94.8) | (104.1) | (92.4) | (106.0) | (182.2) | (82.9) | (80.1) | (5.2) |
| 90—91 | 12,169 | 10,554 | 13,927 | 12,169 | 13,847 | 22,418 | 25,183 | 10,757 | — |
| | (84.5) | (95.9) | (89.2) | (84.5) | (96.1) | (194.6) | (83.4) | (74.7) | |

ವಿಷಮಶೀತ ಜ್ವರ, ದಡಾರಗಳಿಗೆ ಲಸಿಕೆಗಳನ್ನು ಮಕ್ಕಳಿಗೆ ಕೊಡಲು ಇತ್ತೀಚಿನ ದಿನಗಳಲ್ಲಿ ಶುರುಮಾಡಲಾಗಿದೆ. ಬಿ.ಸಿ.ಜಿ. ಹಾಗೂ ಪೋಲಿಯೋ ಲಸಿಕೆಗಳನ್ನು ಹಾಕಿಸಿಕೊಂಡವರ ಸಂಖ್ಯೆಗಳು ಪ್ರಾರಂಭದ ವರ್ಷಗಳಿಗೆ ಲಭ್ಯವಿಲ್ಲ.

ನಲ್ಲಿರುವ ಕಾರ್ಡುಗಳಲ್ಲಿ ಅವರ ಆರೋಗ್ಯದ ಬಗ್ಗೆ ಗುರುತು ಮಾಡಿ ಅನ್ನಾಂಗಗಳ ಹಾಗೂ ಇತರ ಪೌಷ್ಟಿಕಾಂಶಗಳ ಕೊರತೆ ಕಂಡುಬಂದರೆ ಅವುಗಳ ಬಗ್ಗೆ ಅವರಿಗೆ ಸಲಹೆ ನೀಡುವರು. ಗುಣಪಡಿಸಬಹುದಾದ ರೋಗಗಳಿಗೆ ಅಲ್ಲಿಯೇ ಔಷಧೋಪಚಾರ ಮಾಡಿ ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದವರಿಗೆ ಪ್ರಾಥಮಿಕ ಆರೋಗ್ಯ ಕೇಂದ್ರ/ಘಟಕಗಳಿಗಾಗಲೀ, ಜಿಲ್ಲಾ ಆಸ್ಪತ್ರೆಗಳಿಗಾಗಲೀ ಹೋಗುವಂತೆ ಸಲಹೆ ನೀಡುವರು. 0–6 ವರ್ಷ ವಯಸ್ಸಿನ ಮಕ್ಕಳಿಗೆ ಹಾಗೂ ಗರ್ಭಿಣಿ ಸ್ತ್ರೀಯರಿಗೆ, ತಾಯಂದಿರಿಗೆ ರೋಗಗಳ ವಿರುದ್ಧ ಬಿ.ಸಿ.ಜಿ., ಡಿ.ಪಿ.ಟಿ., ಮೊದಲಾದ ರೋಗ ನಿರೋಧಕಗಳನ್ನು ಕೊಡುವರು. ಜಿಲ್ಲೆಯ ವೀರರಾಜಪೇಟೆ ತಾಲೂಕಿನಲ್ಲಿ 1975 ರಲ್ಲಿ ಸಮಗ್ರ ಬಾಲವಿಕಾಸ ಯೋಜನೆಯನ್ನು ಕೇಂದ್ರ ಸರ್ಕಾರದವರು ಪ್ರಾರಂಭಿಸಿದರು. ನಂತರ ಮಡಿಕೇರಿ ತಾಲೂಕಿನಲ್ಲಿ ಆರಂಭಿಸಲಾಯಿತು. ವೀರರಾಜಪೇಟೆ ತಾಲೂಕಿನಲ್ಲಿ 257 ಕೇಂದ್ರಗಳೂ ಮಡಿಕೇರಿ ತಾಲೂಕಿನಲ್ಲಿ 202 ಕೇಂದ್ರಗಳೂ ಇವೆ. ರಾಜ್ಯಸರ್ಕಾರದವರು ಸೋಮವಾರಪೇಟೆ ತಾಲೂಕಿನಲ್ಲಿ ಸಮಗ್ರ ಬಾಲವಿಕಾಸ ಯೋಜನೆಯನ್ನು 1985–86 ರಲ್ಲಿ ಪ್ರಾರಂಭಿಸಿದರು. ಅಲ್ಲಿ ಈಗ 100 ಕೇಂದ್ರಗಳಿವೆ. ಮಡಿಕೇರಿ ಮತ್ತು ಸುಂಟಿಕೊಪ್ಪ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಒಬ್ಬೊಬ್ಬ ವೈದ್ಯಾಧಿಕಾರಿಗಳು ಈ ಕಾರ್ಯಕ್ರಮವನ್ನು ನೋಡಿಕೊಳ್ಳುತ್ತಿದ್ದಾರೆ. ಅವರಿಗೆ ಸಹಾಯಕರಾಗಿ ನಾಲ್ಕು ಜನ ಮಹಿಳಾ ಆರೋಗ್ಯ ಸಂದರ್ಶಕಿಯರೂ 12 ಜನ ಕಿರಿಯ ಆರೋಗ್ಯ ಸಹಾಯಕರೂ ಕೆಲಸ ಮಾಡುತ್ತಿದ್ದಾರೆ. (ವಿವರಗಳಿಗೆ 16ನೇಯ ಅಧ್ಯಾಯ ನೋಡಿ).

**ಶಾಲಾ ಆರೋಗ್ಯ ಕಾರ್ಯಕ್ರಮ :** ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವಿವಿಧೋದ್ದೇಶ ಆರೋಗ್ಯ ಕಾರ್ಯಕರ್ತರನ್ನು ನೇಮಕ ಮಾಡುವ ವ್ಯವಸ್ಥೆ (1978ರಲ್ಲಿ) ಜಾರಿಗೆ ಬಂದ ಮೇಲೆ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ/ಘಟಕಗಳೂ ಶಾಲಾ ವಿದ್ಯಾರ್ಥಿಗಳನ್ನು ವೈದ್ಯಕೀಯ ಪರೀಕ್ಷೆ ಮಾಡುವ ಆರೋಗ್ಯ ಕಾರ್ಯಕ್ರಮವನ್ನು ಹಾಕಿಕೊಂಡಿವೆ. ಈ ಕಾರ್ಯಕ್ರಮದನ್ವಯ ಎಲ್ಲಾ ಶಾಲಾ ಮಕ್ಕಳನ್ನು ವೈದ್ಯಾಧಿಕಾರಿಗಳು ಪರೀಕ್ಷಿಸಿ ರೋಗಗಳಿಗೆ ಔಷಧಿ ಕೊಡುವುದರ ಜೊತೆಗೆ ಮಕ್ಕಳಿಗೆ ಡಿ. ಮತ್ತು ಟಿ. ಹಾಗೂ ಟಿ.ಟಿ. ರೋಗ ನಿರೋಧಕ ಲಸಿಕೆಗಳನ್ನು ಹಾಕುವ ಕಾರ್ಯಕ್ರಮವಿದೆ. ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರ/ಘಟಕಗಳಲ್ಲಿ 1990–91ರಲ್ಲಿ 29 ಜನ ವೈದ್ಯಾಧಿಕಾರಿಗಳು 186 ಕಿರಿಯ ಮತ್ತು 211 ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 1,26,208 ಮಕ್ಕಳಲ್ಲಿ 20,640 ಮಕ್ಕಳನ್ನು ಪರೀಕ್ಷಿಸಿ, 1,024 ಮಕ್ಕಳಲ್ಲಿ ಆರೋಗ್ಯ ದೋಷವನ್ನು ಗುರುತಿಸಿದ್ದರು. ಹಾಗೂ 8,493 ಮಕ್ಕಳಿಗೆ ಟಿ. ಟಿ. ರೋಗ ನಿರೋಧಕವನ್ನು ಕೊಡಲಾಗಿತ್ತು.

### ಔಷಧ ನಿಯಂತ್ರಣ ಇಲಾಖೆ

ಔಷಧ ನಿಯಂತ್ರಣ ಇಲಾಖೆಯು, ಗ್ರಾಹಕರ ಆರೋಗ್ಯ ಕಾಪಾಡುವ ದೃಷ್ಟಿಯಿಂದ ರಾಜ್ಯದಲ್ಲಿ ತಯಾರಾಗುವ ಹಾಗೂ ಹೊರಗಡೆಯಿಂದ ರಾಜ್ಯಕ್ಕೆ ಬರುವ ಔಷಧಿಗಳ ಮೇಲೆ ನಿಯಂತ್ರಣವನ್ನು ಹೊಂದಿದ್ದು, ಅವುಗಳ ಗುಣಮಟ್ಟಗಳು ಕಳಪೆಯಾಗದಿರುವಂತೆ ಎಚ್ಚರಿಕೆ ವಹಿಸುತ್ತದೆ ಮತ್ತು ನಿಯಂತ್ರಿತ ಬೆಲೆಗೆ ಔಷಧಗಳು ದೊರಕುವಂತೆ ಮಾಡುತ್ತದೆ. ಈ ಕರ್ತವ್ಯವನ್ನು ನಿರ್ವಹಿಸಲು ಈ ಇಲಾಖೆಯು ರಾಜ್ಯದಲ್ಲಿ ಕೆಳಗೆ ತಿಳಿಸಿರುವ ಕಾನೂನುಗಳನ್ನು ಜಾರಿಗೊಳಿಸುವಲ್ಲಿ ಶಾಸನಬದ್ಧ ಕಾರ್ಯಗಳನ್ನು ನಿರ್ವಹಿಸುತ್ತದೆ : 1) ಔಷಧ ಮತ್ತು ಕಾಂತಿವರ್ಧಕಗಳ ಅಧಿನಿಯಮ 1940 ಮತ್ತು ಅದರ ಮೇರೆಗಿನ ನಿಯಮಗಳು. 2) ಔಷಧಗಳ (ಬೆಲೆ ನಿಯಂತ್ರಣ) ಆದೇಶ 1987. 3) ಔಷಧ ಮತ್ತು ಮಾತ್ರೋಪಾಯ (ಆಕ್ಷೇಪಣೀಯ ಜಾಹಿರಾತು) ಅಧಿನಿಯಮ 1954 ಮತ್ತು ಅದರ ಮೇರೆಗಿನ ನಿಯಮಗಳು. 4) ಫಾರ್ಮಸಿ ಅಧಿನಿಯಮ 1948 ಮತ್ತು ವಿದ್ಯಾ ನಿಯಮಾವಳಿ. 5) ಅಮದು ವ್ಯಾಪಾರ ವಿನಿಮಯ ರೀತ್ಯ ಔಷಧ ತಯಾರಿಕಾ ಉದ್ಯಮಗಳಿಗೆ ಅವಶ್ಯಕ ಯೋಗ್ಯತಾ ಪತ್ರ ನೀಡುವಿಕೆ. 6) ವಿಷವಸ್ತುಗಳ ಅಧಿನಿಯಮ 1919 ಮತ್ತು ಕರ್ನಾಟಕ ವಿಷವಸ್ತುಗಳ ಅಧಿನಿಯಮ 1966, ಮತ್ತು 7) ಮಾದಕ ಔಷಧಗಳ ಹಾಗೂ ಮಾನಸಿಕ ಭ್ರಮೆಯನ್ನು ಉಂಟುಮಾಡುವ ವಸ್ತುಗಳ ಅಧಿನಿಯಮ 1985.

ಮೇಲೆ ತಿಳಿಸಿರುವ ಕಾನೂನುಗಳನ್ವಯ ಇಲಾಖೆಯು ಔಷಧ ತಯಾರಿಸುವ ಮತ್ತು ಮಾರಾಟ ಮಾಡುವ ಆವರಣಗಳಿಗೆ ಪರವಾನಗಿ ನೀಡುತ್ತದೆ. ಇಲಾಖೆಯ ಪರಿವೀಕ್ಷಣಾ ಸಿಬ್ಬಂದಿಯವರು ನಕಲಿ ಔಷಧಿಗಳನ್ನು ತಯಾರು ಮಾಡುವವರನ್ನು ಹಿಡಿದು ಶಿಕ್ಷೆಗೆ ಒಳಪಡಿಸುತ್ತಾರೆ. ಔಷಧಿ ಮತ್ತು ಕಾಂತಿವರ್ಧಕಗಳನ್ನು ಪರೀಕ್ಷಿಸಿ ಗುಣಮಟ್ಟವನ್ನು ನಿಶ್ಚಯಿಸುತ್ತಾರೆ. ಜೊತೆಗೆ ಇಲಾಖೆಯು ಫಾರ್ಮಸಿ ಶಿಕ್ಷಣದ ಜವಾಬ್ದಾರಿಯನ್ನೂ ಹೊಂದಿದೆ. ಔಷಧಿಗಳನ್ನು ಪರೀಕ್ಷಿಸಲು ಇಲಾಖೆಯು ಬೆಂಗಳೂರಿನಲ್ಲಿ ಒಂದು ಪರೀಕ್ಷಾ ಪ್ರಯೋಗಶಾಲೆಯನ್ನು ಹೊಂದಿದೆ. ಆಡಳಿತವನ್ನು ಸುಸೂತ್ರವಾಗಿ ನಿರ್ವಹಿಸಲು

ರಾಜ್ಯವನ್ನು ಆರು ವಿಭಾಗಗಳಾಗಿ ವಿಂಗಡಿಸಿ ಪ್ರತಿಯೊಂದು ವಿಭಾಗಕ್ಕೂ ಒಬ್ಬೊಬ್ಬ ಸಹಾಯ ಔಷಧ ನಿಯಂತ್ರಕರನ್ನು ನೇಮಿಸಲಾಗಿದೆ. ಕೊಡಗು ಜಿಲ್ಲೆಯು ಮೈಸೂರು ವಿಭಾಗಕ್ಕೆ ಸೇರಿದ್ದು, ಜಿಲ್ಲೆಗೆ ಒಬ್ಬ ಔಷಧ ಪರಿವೀಕ್ಷಕರಿದ್ದಾರೆ. ಅವರ ಕಚೇರಿಯು ಮಡಿಕೇರಿಯಲ್ಲಿದ್ದು, ಕಚೇರಿಯಲ್ಲಿ ಅವರ ಸಹಾಯಕ್ಕೆ ಒಬ್ಬ ಬೆರಳಚ್ಚುಗಾರ ಮತ್ತು ಒಬ್ಬ 'ಡಿ' ಗುಂಪಿನ ನೌಕರನೂ ಇದ್ದಾರೆ. ಇವರು ಮೈಸೂರಿನಲ್ಲಿರುವ ವಿಭಾಗ ಸಹಾಯಕ ಔಷಧ ನಿಯಂತ್ರಕರ ಆಧೀನಕ್ಕೆ ಒಳ ಪಟ್ಟಿದ್ದಾರೆ. ಕೊಡಗು ಜಿಲ್ಲೆಯಲ್ಲಿ 1992-93ರಲ್ಲಿ ಏಳು ಸಗಟು ಔಷಧ ಮಾರಾಟಗಾರರನ್ನೊಳಗೊಂಡಂತೆ 44 ಔಷಧಿ ಅಂಗಡಿಗಳಿದ್ದವು. ಇವುಗಳ ಜೊತೆಗೆ 33 ಗೃಹೋಪಯೋಗಿ ಔಷಧಿ ಅಂಗಡಿಗಳೂ ಇದ್ದವು. ಜಿಲ್ಲೆಯಿಂದ 1990-91 ರಲ್ಲಿ 37 ಮಾದರಿಗಳನ್ನು (ಸ್ಯಾಂಪಲ್ಸ್) ಬೆಂಗಳೂರಿನ ಔಷಧಿ ನಿಯಂತ್ರಣ ಇಲಾಖಾ ಪ್ರಯೋಗಶಾಲೆಗೆ ಪರೀಕ್ಷೆಗಾಗಿ ಕಳುಹಿಸಿ ಕೊಡಲಾಗಿತ್ತು.

**ಭಾರತೀಯ ವೈದ್ಯಕೀಯ ಸಂಘ :** ಭಾರತೀಯ ವೈದ್ಯಕೀಯ ಸಂಘದ ಶಾಖೆಯೊಂದು ಸ್ವಾತಂತ್ರ್ಯ ಪೂರ್ವದಿಂದಲೂ ಮಡಿಕೇರಿಯಲ್ಲಿ ಅಸ್ತಿತ್ವದಲ್ಲಿದೆ. ಈಗ ಈ ಶಾಖೆಯಲ್ಲಿ ಹತ್ತು ಮಂದಿ ಅಜೀವ ಸದಸ್ಯರೂ ಐದು ಮಂದಿ ವರ್ಷಾವಧಿ ಸದಸ್ಯರೂ ಇದ್ದಾರೆ. ವೈದ್ಯಕೀಯ ಸಂಘಗಳು ಸಾಮಾನ್ಯ ವಾಗಿ ವೈದ್ಯಕೀಯ ತಪಾಸಣಾ ಶಿಬಿರಗಳನ್ನು ಏರ್ಪಡಿಸುವುದು, ತಜ್ಞರಿಂದ ಸೆಮಿನಾರ್, ಭಾಷಣಗಳನ್ನು ಏರ್ಪಡಿಸುವುದು, ಉಚಿತವಾಗಿ ಔಷಧಿಗಳನ್ನು ವಿತರಣೆ ಮಾಡುವುದು, ಮೊದಲಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತವೆ.

ಭಾರತೀಯ ರೆಡ್‌ಕ್ರಾಸ್ ಸೊಸೈಟಿಯು ಮಡಿಕೇರಿಯಲ್ಲಿ 1922ರಲ್ಲಿ ಪ್ರಾರಂಭಿಸಲ್ಪಟ್ಟಿತು. ಹಿಂದೆ ಗ್ರಾಮಾಂತರ ಪ್ರದೇಶಗಳಲ್ಲಿ ಸೊಸೈಟಿಯ ಆರೋಗ್ಯ ಸಂದರ್ಶಕಿಯರಿದ್ದರು. ಮಕ್ಕಳ ಪ್ರದರ್ಶನ, ಆರೋಗ್ಯ ಪ್ರವಾಸ ಮೊದಲಾದ ಚಟು ವಟಿಕೆಗಳನ್ನು ಸೊಸೈಟಿಯು ಹೊಂದಿದೆ.